ಬೆಂಗಳೂರು
ಶುಕ್ರವಾರ, 26 ಜೂನ್ 2026
ಸಂಪುಟ 33, ಸಂಚಿಕೆ 236, ಪುಟಗಳು 12+4+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸೂಪರ್ ಎಲ್ ನೀನೋ ಎದುರಿಸಲು ಸಜ್ಜಾಗಿ | ೦೩
ಖಾಲಿ ಹುದ್ದೆಗಳಿಗೆ ತ್ವರಿತ ನೇಮಕಾತಿ | ೦೩
48 ಶತಕೋಟಿ ಡಾಲರ್ ಹೂಡಿಕೆ | ೦೫

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ವಿಶಾಖೆ

ದಿನದ ಮಾತು

ಆಪಾಯದ ಪರಿಸ್ಥಿತಿಯಲ್ಲಿ ತೋರಿಸುವ ಧೈರ್ಯವೇ ಅರ್ಧ ಗೆಲುವನ್ನು ತಂದು ಕೊಡುತ್ತದೆ.
▲ ನಾಣ್ನುಡಿ

ಪೆರಿಯಾರ್ ನಾಸ್ತಿಕ್ಯಕ್ಕೂ ತಮಿಳುನಾಡು ವಿಶಿಲ್!

ಉಘೇ ವೀರ ಭೂಮಿಗೆ
• ಸಂತೋಷ್ ತಮ್ಮಯ್ಯ
• ಪುಟ ೬

ಕಿರುಸುದ್ದಿ

ಆ್ಯಪ್ ಮೂಲಕ ಅನರ್ಹ ಪಿಂಚಣಿದಾರರ ಪರಿಶೀಲನೆ
• ಪುಟ ೩

ದಂಗೆ ಎದ್ದ ಪಿಒಕೆಗೆ ಪಾಕಿಸ್ತಾನ ದಿಗ್ಬಂಧನ
• ಪುಟ ೫

ವೆನೆಜುವೆಲಾ ಭೂಕಂಪನ 164 ಮಂದಿ ಸಾವು
• ಪುಟ ೫

ಪೋಲಿಯೊ ಮುಕ್ತ ಭಾರತ ಸಾಧನೆ ನಿರಂತರ:
• ಪುಟ ೩

ತುಂಗಭದ್ರಾ ಡ್ಯಾಂ ನೂತನ 33 ಕ್ರಸ್ಟ್ ಗೇಟ್‌ಗಳ ಲೋಕಾರ್ಪಣೆ

ದೇಶದ ಅಣೆಕಟ್ಟುಗಳ ನೀರು ಸಂಗ್ರಹ ಹೆಚ್ಚಿಸಲು ಕೇಂದ್ರ ಸಿದ್ಧತೆ

ಹೂಳೆತ್ತಲು ಯೋಜನೆ



ನವಲಿ ಡ್ಯಾಂ ನಿರ್ಮಾಣ ಇರಬಹುದು ಅಥವಾ ಜಲಾಶಯದಲ್ಲಿ ಶೇಖರಣೆಯಾಗಿರುವ ಹೂಳನ್ನು ತೆಗೆದು ನೀರನ್ನು ಸಂರಕ್ಷಿಸುವ ವಿಚಾರವಾಗಿರಬಹುದು. ಇವೆಲ್ಲದರ ಬಗ್ಗೆ ಗಂಟೆಗಳ ಕಾಲ ಸುದೀರ್ಘವಾಗಿ ಹಾಗೂ ವ್ಯಾಪಕವಾಗಿ ಚರ್ಚೆ ನಡೆಸಲಾಗಿದೆ. ರೈತರ ಹಿತವನ್ನು ಕಾಯಲು ಮತ್ತು ಅವರ ರಕ್ಷಣೆ ಮಾಡಲು ನಾವೆಲ್ಲರೂ ಸೇರಿ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ.
■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

• **ಕೊಪ್ಪಳ:** ದೇಶದಾದ್ಯಂತ ಇರುವ ಬಹುತೇಕ ಅಣೆಕಟ್ಟುಗಳಲ್ಲಿ ಶೇ.15ಕ್ಕಿಂತಲೂ ಹೆಚ್ಚು ಹೂಳು ತುಂಬಿಕೊಂಡಿದ್ದು, ಇದರಿಂದ ಜಲಾಶಯಗಳ ನೀರು ಸಂಗ್ರಹಣಾ ಸಾಮರ್ಥ್ಯ ಗಣನೀಯವಾಗಿ ಕುಸಿದಿದೆ. ದೇಶದ ಅಣೆಕಟ್ಟುಗಳಿಂದ ಹೂಳು ತೆಗೆಯುವ ಬೃಹತ್ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಸಿದ್ಧಪಡಿಸುತ್ತಿದೆ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಹೇಳಿದರು.

ಜಲಸಂಪನ್ಮೂಲ ಇಲಾಖೆ ಹಾಗೂ ತುಂಗಭದ್ರಾ ಮಂಡಳಿಯ ಸಹಯೋಗದಲ್ಲಿ, ಮುನಿರಾಬಾದ್‌ನ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಲಾಗಿದ್ದ ತುಂಗಭದ್ರಾ ಜಲಾಶಯದ ನೂತನ 33 ಕ್ರಸ್ಟ್ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಲಶಕ್ತಿ ಸಚಿವಾಲಯವು ಹೂಳು ತೆಗೆಯುವ ವಿಶೇಷ ಯೋಜನೆಯನ್ನು ರೂಪಿಸುತ್ತಿದೆ. ಈ ಯೋಜನೆಯ ತಾಂತ್ರಿಕ ಸಹಯೋಗವನ್ನು ಕೇಂದ್ರ ಸರ್ಕಾರ ನೀಡಲಿದ್ದು, ಅನುಷ್ಠಾನದ ಜವಾಬ್ದಾರಿಯನ್ನು ಆಯಾ ರಾಜ್ಯ ಸರ್ಕಾರಗಳು ಹೊರಬೇಕಾಗುತ್ತದೆ. ಈ ಯೋಜನೆ ಯಶಸ್ವಿಯಾದರೆ ತುಂಗಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವನ್ನು ಶೇ.25ರಿಂದ 30ರಷ್ಟು ಹೆಚ್ಚಿಸಬಹುದಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪುಟ ೨

ಗೋದಾವರಿ-ಕಾವೇರಿ ನದಿಗಳ ಜೋಡಣೆ: ಆಂಧ್ರ ಸಿಎಂ ನಾಯ್ಡು

ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಮಾತನಾಡಿ, ಕೇಂದ್ರ ಸರ್ಕಾರವು ಈಗಾಗಲೇ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದ ನಡುವಿನ 'ಕೆನ್-ಬೆಟ್ವಾ' ಯೋಜನೆ ಹಾಗೂ ರಾಜಸ್ಥಾನ ಮತ್ತು ಮಧ್ಯಪ್ರದೇಶದ ನಡುವಿನ 'ಪಾರ್ವತಿ- ಕಾಳಿಸಿಂಧು-ಚಂಬಲ್' ನದಿ ಜೋಡಣೆ ಯೋಜನೆಗಳನ್ನು ಯಶಸ್ವಿಯಾಗಿ ಕೈಗೆತ್ತಿಕೊಂಡಿದೆ. ಇದೇ ಮಾದರಿಯಲ್ಲಿ, ದಕ್ಷಿಣ ಭಾರತದ ಪ್ರಮುಖ ನದಿಗಳಾದ ಗೋದಾವರಿ ಮತ್ತು ಕಾವೇರಿ ನದಿಗಳ ಜೋಡಣೆ ಯೋಜನೆ ಯನ್ನು ಕೇಂದ್ರವು 'ರಾಷ್ಟ್ರೀಯ ಯೋಜನೆ'ಯಾಗಿ ಪರಿಗಣಿಸಿ ಅನುಷ್ಠಾನಕ್ಕೆ ತರಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಿದರು.

ತಲೆಮಾರುಗಳ ಸಮಸ್ಯೆಗೆ ಮುಕ್ತಿ: ತೆಲಂಗಾಣ ಸಿಎಂ

ಬಳ್ಳಾರಿ, ಅನಂತಪುರ, ಕರ್ನೂಲ್ ಹಾಗೂ ಪಾಲಮೂರು ಜಿಲ್ಲೆಗಳ ವಲಸೆ ಸಮಸ್ಯೆಗಳು ಮತ್ತು ರೈತರ ಸಂಕಷ್ಟಗಳ ಸರ್ಕಾರಗಳಿಗೆ ಸಂಪೂರ್ಣ ಅರಿವಿದೆ. ಜಲಾನಯನ ಪ್ರದೇಶದ ಮೂರು ತಲೆಮಾರುಗಳ ಸಮಸ್ಯೆಗೆ ಈ 33 ಗೇಟುಗಳ ನೂತನ ಅಳವಡಿಕೆ ಮತ್ತು ಆಧುನೀಕರಣವು ಮುಕ್ತಿ ನೀಡಲಿದೆ. ಲಕ್ಷಾಂತರ ರೈತರ ಕಣ್ಣೀರು ಒರೆಸುವ ನಿಟ್ಟಿನಲ್ಲಿ ಇದೊಂದು ದೊಡ್ಡ ಪರಿಹಾರವಾಗಲಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಹೇಳಿದರು.

ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಇಂದು ಸೂರ್ಯವಂಶಿ ಪದಾರ್ಪಣೆ ನಿರೀಕ್ಷೆ




• **ಮುಂಬೈ:** ವಿಶ್ವವೇ ತಿರುಗಿ ನೋಡುವ ವಿಸ್ಮಯವೊಂದು ವೇದಿಕೆ ಸಜ್ಜಾಗಿದೆ. ಕಲ್ಪನೆಗೂ ಮೀರಿದ ಬ್ಯಾಟಿಂಗ್‌ನೊಂದಿಗೆ ಐಪಿಎಲ್, ಅಂಡರ್-19 ಹಾಗೂ ಭಾರತ ಎ ತಂಡಗಳಲ್ಲಿ ಮಿಂಚುತ್ತಿದ್ದ 15 ವರ್ಷದ ವೈಭವ್ ಸೂರ್ಯವಂಶಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಶುಕ್ರವಾರ ಪದಾರ್ಪಣೆ ಮಾಡಲು ಸಿದ್ಧರಾಗಿದ್ದಾರೆ. ಭಾರತ ಐರ್ಲೆಂಡ್ ವಿರುದ್ಧ 2 ಟಿ20 ಪಂದ್ಯಗಳನ್ನಾಡಲಿದೆ. ಸಂಭಾವ್ಯ ತಂಡದಲ್ಲಿರುವ ವೈಭವ್ ಪದಾರ್ಪಣೆ ಮಾಡುವ ನಿರೀಕ್ಷೆಗಳಿವೆ. ಐಪಿಎಲ್‌ನಲ್ಲಿ ವಿಸ್ಮಯ ಪ್ರದರ್ಶನ ನೀಡಿರುವ ಅವರು, ದಾಖಲೆಗಳಿಂದಲೇ ವಿಶ್ವದ ಗಮನ ಸೆಳೆದಿದ್ದರು. ಈಗಾಗಲೇ ನೀಲಿ ಜೆರ್ಸಿ ಪಡೆದಿರುವ ವೈಭವ್ ತಂಡದೊಂದಿಗೆ ಐರ್ಲೆಂಡ್‌ಗೆ ತಲುಪಿದ್ದಾರೆ. ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಅವರು ಆಡಿದರೆ, ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿರುವ ಮತ್ತು ವಿಶ್ವದ ಅನೇಕ ಆಟಗಾರರ ಹೆಸರಿನಲ್ಲಿರುವ ದಾಖಲೆಗಳನ್ನು ಮುರಿಯಲಿದ್ದಾರೆ. ಪುಟ ೨

ಆಡಿದರೆ ಏನೆಲ್ಲಾ ದಾಖಲೆ

- ಅಂತಾರಾಷ್ಟ್ರೀಯ ಟಿ20 ಆಡಿದ ವಿಶ್ವದ ಅತಿ ಕಿರಿಯ
- ಭಾರತ ಪ್ರತಿನಿಧಿಸಿದ ಅತಿ ಕಿರಿಯ ಕ್ರಿಕೆಟಿಗ
- 15 ವಯಸ್ಸಿನಲ್ಲೇ ಭಾರತ ಜೆರ್ಸಿ ಧರಿಸಿದ ಮೊದಲ ಪುರುಷ ಆಟಗಾರ

ಐಪಿಎಲ್‌ನಲ್ಲಿ ವೈಭವ್ ದಾಖಲೆಗಳು



- ಐಪಿಎಲ್ ಆಡಿದ ಅತಿ ಕಿರಿಯ ಕ್ರಿಕೆಟರ್
- ಐಪಿಎಲ್‌ನಲ್ಲಿ ಶತಕ ಬಾರಿಸಿದ ಅತಿ ಕಿರಿಯ
- ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಶತಕ ಬಾರಿಸಿದ ಅತಿ ಕಿರಿಯ
- ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ ಆಟಗಾರ

ಭಾರತ-ಐರ್ಲೆಂಡ್ ಪಂದ್ಯ

ಯಾವಾಗ?: ಶುಕ್ರವಾರ
ಎಲ್ಲಿ?: ಬೆಲ್‌ಫಾಸ್ಟ್, ಐರ್ಲೆಂಡ್
ಎಷ್ಟೊತ್ತಿಗೆ?: ಸಂಜೆ 6:00

ತ್ವರಿತಗತಿ ತನಿಖೆಗೆ ವಿಹಿಂಪ ಆಗ್ರಹ

ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪ

• **ಹೊಸದಿಲ್ಲಿ:** ಅಯೋಧ್ಯೆ ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪದ ಆಧಾರದಲ್ಲಿ ಎಫ್‌ಐಆರ್ ದಾಖಲಿಸಿ, ತ್ವರಿತಗತಿ ಯಲ್ಲಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ವಿಶ್ವ ಹಿಂದು ಪರಿಷತ್(ವಿಹಿಂಪ) ಗುರುವಾರ ಆಗ್ರಹಿಸಿದೆ. ನಾಲ್ಕು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ವಿಹಿಂಪ ಅಂತಾರಾಷ್ಟ್ರೀಯ ಅಧ್ಯಕ್ಷ ಆಲೋಕ್ ಕುಮಾರ್ ಒತ್ತಾಯಿಸಿದ್ದಾರೆ. ಅಯೋಧ್ಯೆ ರಾಮಮಂದಿರ ದೇಣಿಗೆಯ ದುರುಪಯೋಗದ ಆರೋಪದಲ್ಲಿ ಎಫ್‌ಐಆರ್ ದಾಖಲಿಸಬೇಕೆಂಬುದು ನಮ್ಮ ಬೇಡಿಕೆ. ಪುಟ ೨

1975ರ ತುರ್ತು ಪರಿಸ್ಥಿತಿ ಅತ್ಯಂತ ಕರಾಳ ಅಧ್ಯಾಯ

ಸಂವಿಧಾನದ ಮೇಲಿನ ನೇರ ದಾಳಿ

• **ಹೊಸದಿಲ್ಲಿ:** ನಾಗರಿಕರ ಸ್ವಾತಂತ್ರ್ಯಗಳನ್ನು ಅಮಾನತುಗೊಳಿಸಿದ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕತ್ತರಿ ಹಾಕಿದ, ರಾಜಕೀಯ ನಾಯಕರು, ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರನ್ನು ಅನ್ಯಾಯವಾಗಿ ಬಂಧಿಸಿ ಸೆರೆಮನೆಗೆ ನೂಕಿದ ಮತ್ತು ಭಾರತೀಯ ಪ್ರಜಾಸತ್ತೆಯ ಅಡಿಗಲ್ಲಾಗಿರುವ ಸಂಸ್ಥೆಗಳಿಗೆ ಮಾರಕ ಹಾನಿ ಎಸಗಿದ ತುರ್ತು ಪರಿಸ್ಥಿತಿಯು ಸಂವಿಧಾನದ ಮೇಲಿನ ನೇರ ದಾಳಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಭಾರತದ ಚರಿತ್ರೆಯಲ್ಲೇ ಅತ್ಯಂತ ಕರಾಳ ಅಧ್ಯಾಯವಾಗಿರುವ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ನಿರಂತರ ದಿಟ್ಟತನದಿಂದ ಪ್ರಜಾತಾಂತ್ರಿಕ ಮೌಲ್ಯಗಳ ರಕ್ಷಿಸಿದವರೆಲ್ಲರಿಗೂ ನಮನ ಸಲ್ಲಿಸಿದ ಪ್ರಧಾನಿ ಮೋದಿ, ತುರ್ತು ಪರಿಸ್ಥಿತಿ ನಮ್ಮ ಘನ ಸಂವಿಧಾನ ಮೇಲಾದ ನೇರ ದಾಳಿಯಾಗಿದೆ.



ಅನ್ಯಾಯವಾಗಿ ಹೇರಲಾದ ತುರ್ತು ಪರಿಸ್ಥಿತಿಯನ್ನು ಮೌನವಾಗಿ ಸಹಿಸಿಕೊಳ್ಳದೆ ಅಸಂಖ್ಯ ಪ್ರಜೆಗಳು, ಸಂವಿಧಾನದ ಸಿದ್ಧಾಂತಗಳ ಎತ್ತಿಹಿಡಿಯುವಲ್ಲಿ ಸಫಲರಾಗಿದ್ದಾರೆ. ಪುಟ ೨

9ನೇ ತರಗತಿ ಸಮಾಜ ವಿಜ್ಞಾನದಲ್ಲಿ ತುರ್ತು ಪರಿಸ್ಥಿತಿ ಪಾಠ • ಪುಟ ೩

ಖರ್ಗೆ ಕುಟುಂಬದಿಂದ ಭೂ ಕಬಳಿಕೆ: ಆರೋಪ

• **ಹೊಸದಿಲ್ಲಿ:** ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಅವರ ಪುತ್ರ, ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ಗಂಭೀರ ಭೂ ಹಗರಣದ ಆರೋಪಗಳನ್ನು ಮಾಡಿದೆ.

ಸಿದ್ಧಾರ್ಥ್ ವಿಹಾರ್ ಟ್ರಸ್ಟ್ ಮೂಲಕ ಅಕ್ರಮ: ಬಿಜೆಪಿ



ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ ಬುಧವಾರ ಹೊಸದಿಲ್ಲಿಯಲ್ಲಿ ಸುದ್ದಿಗೋಷ್ಠಿ ನಡೆಸಿ, ಖರ್ಗೆ ಕುಟುಂಬದೊಂದಿಗೆ ಸಂಬಂಧ ಹೊಂದಿರುವ ಸಿದ್ಧಾರ್ಥ್ ವಿಹಾರ್ ಟ್ರಸ್ಟ್ ಮೂಲಕ ಕರ್ನಾಟಕದಲ್ಲಿ ಹಲವು ಜಮೀನುಗಳನ್ನು ಅಕ್ರಮವಾಗಿ ಪಡೆದುಕೊಳ್ಳಲಾಗಿದೆ ಎಂದು ಆರೋಪಿಸಿದರು.

2024ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ(ಕೆಐಎಡಿಬಿ) ವತಿಯಿಂದ ಏರೋಸ್ಪೇಸ್ ಮತ್ತು ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಉದ್ದೇಶಕ್ಕಾಗಿ ಮೀಸಲಿಡಲಾಗಿದ್ದ ಸುಮಾರು 100 ಕೋಟಿ ರೂ. ಮೌಲ್ಯದ ಐದು ಎಕರೆ ಭೂಮಿಯನ್ನು ಸಿದ್ಧಾರ್ಥ್ ವಿಹಾರ್ ಟ್ರಸ್ಟ್‌ಗೆ ಹಂಚಿಕೆ ಮಾಡಲಾಗಿದೆ. ಪುಟ ೨

ಸಚಿವರಿಗೆ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ

• **ಬೆಂಗಳೂರು:** ರಾಜ್ಯದ ಪ್ರತಿ ಜಿಲ್ಲೆಗಳ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿಯ ಜವಾಬ್ದಾರಿಯನ್ನು ಸಚಿವರಿಗೆ ವಹಿಸಿ ರಾಜ್ಯ ಸರ್ಕಾರ ಆದೇಶಿಸಿದ್ದು, ಪ್ರತಿಯೊಬ್ಬ ಸಚಿವರಿಗೆ ತಲಾ ಎರಡರಿಂದ ಮೂರು ಜಿಲ್ಲೆಯ ಉಸ್ತುವಾರಿ ನೀಡಲಾಗಿದೆ.



ಸರ್ಕಾರದ ಆದೇಶದಂತೆ ಡಿಸಿಎಂ ಡಾ. ಜಿ. ಪರಮೇಶ್ವರ್‌ಗೆ ತುಮಕೂರು, ಚಿತ್ರದುರ್ಗ, ಕೆ.ಎಚ್. ಮುನಿಯಪ್ಪಗೆ ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ವಿಜಯನಗರ, ರಾಮಲಿಂಗಾರೆಡ್ಡಿಗೆ ಬೆಂಗಳೂರು ದಕ್ಷಿಣ ಮತ್ತು ಮಂಡ್ಯ, ಎಂ.ಬಿ. ಪಾಟೀಲ್‌ಗೆ ವಿಜಯಪುರ ಮತ್ತು ಬಾಗಲಕೋಟೆ, ಕೆ.ಜೆ. ಜಾರ್ಜ್‌ಗೆ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ, ಕೃಷ್ಣ ಬೈರೇಗೌಡಗೆ ಬೆಂಗಳೂರು ನಗರ ಮತ್ತು ಹಾಸನ, ಈಶ್ವರ ಖಂಡ್ರೆಗೆ ಬೀದರ್ ಮತ್ತು ಗದಗ ಜಿಲ್ಲೆಗಳನ್ನು ನೀಡಲಾಗಿದೆ. ಪುಟ ೨

ಬೆಳ್ಳಿ ಬಂಗಾರ (ಬೆಂಗಳೂರು)	ಷೇರು ಸೂಚ್ಯಂಕ	
ಬೆಳ್ಳಿ: 2,35,000 (2,45,000) ಆಭರಣ ಚಿನ್ನ: 1,41,330 (1,44,330) ಆಭರಣ ಚಿನ್ನ: 1,29,550 (1,33,300)	ಸೆನ್ಸೆಕ್ಸ್ 77,100 (109▲) ನಿಫ್ಟಿ 24,056 (34▲)	$1 = ₹94.66

ರಾಜ್ಯದಲ್ಲಿ ಏಕಕಾಲಕ್ಕೆ ಇಡಿ ಕಾರ್ಯಾಚರಣೆ

• **ಬೆಂಗಳೂರು:** ಕರ್ನಾಟಕ ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ಆಸ್ತಿ ಗಳಿಕೆ ಆರೋಪಗಳ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ರಾಜ್ಯದ ವಿವಿಧೆಡೆ ವ್ಯಾಪಕ ಶೋಧ ಕಾರ್ಯಾಚರಣೆ ನಡೆಸಿದ್ದು, 13.3 ಕೋಟಿ ರೂ. ಮೌಲ್ಯದ ನಗದು, ಚಿನ್ನಾಭರಣ ಹಾಗೂ ವಿದೇಶಿ ಕರೆನ್ಸಿಯನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ವಲಯ ಕಚೇರಿಯ ಇಡಿ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಜೂ.24ರಂದು ಬೆಂಗಳೂರು, ಮೈಸೂರು ಹಾಗೂ ಬೆಳಗಾವಿಯ 14 ಸ್ಥಳಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿದ್ದರು.

ಕರ್ನಾಟಕ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಆಧರಿಸಿ ತನಿಖೆ ಆರಂಭಿಸಲಾಗಿದ್ದು, ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಗಳು ವಿವಿಧ ಪರವಾನಗಿಗಳನ್ನು ಮಂಜೂರು ಮಾಡುವ ಹಾಗೂ ನವೀಕರಿಸುವ ಸಂದರ್ಭದಲ್ಲಿ ಲಂಚ ಪಡೆಯುತ್ತಿರುವ ಆರೋಪ ಕೇಳಿಬಂದಿತ್ತು. ಈ ಅಕ್ರಮ ಹಣವನ್ನು ವೈಯಕ್ತಿಕ ಆಸ್ತಿ ಸಂಪಾದನೆಗೆ ಬಳಸಲಾಗಿದೆ ಎಂಬ ಆರೋಪದ ಮೇಲೆ ಇಡಿ ತನಿಖೆ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ. ಅಬಕಾರಿ ಇಲಾಖೆಯ ಅಧಿಕಾರಿಗಳಾದ ಜಗದೀಶ್ ನಾಯಕ್, ಕೆ.ಎಂ. ತಮ್ಮಣ್ಣ ಹಾಗೂ ವೈ.ಡಿ. ಮಂಜುನಾಥ್ ಸೇರಿದಂತೆ ಅವರ ಕುಟುಂಬ ಸದಸ್ಯರು, ವ್ಯವಹಾರ ಪಾಲುದಾರರು ಮತ್ತು ಆಪ್ತ ಸಹಚರರ ನಿವಾಸ ಹಾಗೂ ಕಚೇರಿಗಳ ಮೇಲೆ ಶೋಧ ಕಾರ್ಯಾಚರಣೆ ನಡೆಸಲಾಗಿದೆ ಎಂದು ಇಡಿ ಹೇಳಿದೆ.


13.3 ಕೋಟಿ ಮೌಲ್ಯದ ಆಸ್ತಿ ವಶ

ಶೋಧ ಕಾರ್ಯಾಚರಣೆ ವೇಳೆ ಡಿಜಿಟಲ್ ಸಾಧನಗಳು, ಆಸ್ತಿ ದಾಖಲೆಗಳು, ಲಂಚ ವಿತರಣೆಯ ದಾಖಲೆಗಳು ಸೇರಿದಂತೆ ಹಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದ್ದು, ವಿಶೇಷವಾಗಿ ವೈ.ಡಿ. ಮಂಜುನಾಥ್ ಅವರ ಚಾಲಕ, ಕುಟುಂಬ ಸದಸ್ಯರು ಹಾಗೂ ಸಹಚರರ ಬಳಿ ಸುಮಾರು 5.5 ಕೋಟಿ ರೂ. ನಗದು, 7.8 ಕೋಟಿ ರೂ. ಮೌಲ್ಯದ ಚಿನ್ನಾಭರಣ ಮತ್ತು 3.3 ಲಕ್ಷ ರೂ. ಮೌಲ್ಯದ ವಿದೇಶಿ ಕರೆನ್ಸಿ ಪತ್ತೆಯಾಗಿದೆ. ಒಟ್ಟಾರೆ ಈ ಪ್ರಕರಣದಲ್ಲಿ ಇದುವರೆಗೆ 13.3 ಕೋಟಿ ರೂ. ಮೌಲ್ಯದ ಅಪರಾಧದ ಆದಾಯ ವಶಪಡಿಸಿಕೊಳ್ಳಲಾಗಿದೆ. ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಇಡಿ ತಿಳಿಸಿದೆ.

ಭ್ರಷ್ಟಾಚಾರದ ಜಾಲ ಬಯಲು: ತನಿಖೆಯಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು, ಮಧ್ಯವರ್ತಿಗಳು ಹಾಗೂ ಖಾಸಗಿ ವ್ಯಕ್ತಿಗಳನ್ನು ಒಳಗೊಂಡ ಸಂಘಟಿತ ಜಾಲವೊಂದು ಕಾರ್ಯನಿರ್ವಹಿಸುತ್ತಿರುವುದು ಬೆಳಕಿಗೆ ಬಂದಿದೆ. ರಾಜ್ಯದ ಮದ್ಯ ಮಾರಾಟ ಮಳಿಗೆಗಳಿಂದ ಪ್ರತಿ ತಿಂಗಳು ನಿಗದಿತ ಮೊತ್ತದ ಲಂಚ ಸಂಗ್ರಹಿಸಲಾಗುತ್ತಿತ್ತು. ಪರವಾನಗಿ ನವೀಕರಣ, ಸ್ಥಳಾಂತರ ಹಾಗೂ ಹೊಸ ಪರವಾನಗಿ ಮಂಜೂರಾತಿ ಸಂದರ್ಭಗಳಲ್ಲಿಯೂ ಹಣ ಸಂಗ್ರಹಿಸಲಾಗುತ್ತಿತ್ತು. ಈ ಹಣವನ್ನು ಕೇಂದ್ರೀಕೃತವಾಗಿ ಸಂಗ್ರಹಿಸಿ ಮಧ್ಯವರ್ತಿಗಳ ಮೂಲಕ ವಿವಿಧ ಹಂತಗಳ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗುತ್ತಿತ್ತು ಎಂದು ತನಿಖೆಯಲ್ಲಿ ಪತ್ತೆಯಾಗಿದೆ. ಈ ಹಣದ ಲೆಕ್ಕಪತ್ರಗಳನ್ನು ಅನಧಿಕೃತ ನಗದು ಪುಸ್ತಕದಲ್ಲಿ ದಾಖಲಿಸಲಾಗುತ್ತಿತ್ತು. ದಾಳಿ ವೇಳೆ ಅಂತಹ ನಗದು ಲೆಕ್ಕ ಪುಸ್ತಕವನ್ನೂ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಎಂದು ಇಡಿ ತಿಳಿಸಿದೆ.

ಕುಟುಂಬ ಸದಸ್ಯರ ಹೆಸರಲ್ಲಿ ಮದ್ಯ ವ್ಯಾಪಾರ: ಇಡಿ ತನಿಖೆಯಲ್ಲಿ ಬಹಿರಂಗಗೊಂಡ ಮತ್ತೊಂದು ಮಹತ್ವದ ಅಂಶವೆಂದರೆ, ಹಲವು ಅಬಕಾರಿ ಅಧಿಕಾರಿಗಳು ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿ ಅಥವಾ ಕುಟುಂಬದ ನಿಯಂತ್ರಣದಲ್ಲಿರುವ ಸಂಸ್ಥೆಗಳ ಹೆಸರಿನಲ್ಲಿ ಮದ್ಯ ಮಾರಾಟ ಪರವಾನಗಿಗಳನ್ನು ಪಡೆದು ವ್ಯವಹಾರ ನಡೆಸುತ್ತಿರುವುದು. ಈ ವ್ಯವಹಾರಗಳಿಂದ ಬಂದ ಆದಾಯವನ್ನು ಕಾನೂನುಬದ್ಧ ಆದಾಯವೆಂದು ತೋರಿಸುವ ಮೂಲಕ ಅಕ್ರಮ ಹಣವನ್ನು ಆರ್ಥಿಕ ವ್ಯವಸ್ಥೆಯಲ್ಲಿ ಬೆರೆಸುವ ಪ್ರಯತ್ನ ನಡೆದಿರುವುದು ಪತ್ತೆಯಾಗಿದೆ ಎಂದು ಇಡಿ ಹೇಳಿದೆ.

ರಾಮ ಬಾಣ



ಕಿಡಿ ನುಡಿ
• ವಾಸುದೇವರಾವ್ ಕಕ್ಕೆನೇಜೆ

ಶಾಲೆಯಲ್ಲಿ ಎಸ್ ಸಾರ್ ಎಂದು ಹೇಳುವ ಬದಲು ಜೈ ಶ್ರೀರಾಮ್ ಎನ್ನಿ
– ವಿದ್ಯಾರ್ಥಿಗಳಿಗೆ ಯತ್ನಾಳ್ ಕರೆ
– ಶಾಲೆಯಲ್ಲಿ ಹೇಳೋದಕ್ಕೂ ಮೊದಲು ಮನೆಯಲ್ಲಿ ಹೆತ್ತವರು ಅದನ್ನು ಮಕ್ಕಳಿಗೆ ಅಭ್ಯಾಸ ಮಾಡಿಸಬೇಕಿತ್ತು, ಅಲ್ವಾ?

ದಿನ ಭವಿಷ್ಯ

ಮೇಷ ವಿಶ್ವಾಸ ಹೆಚ್ಚಿಸುವ ವಿದ್ಯಮಾನ. ಕಾರ್ಯ ಸಾಧನೆಯಲ್ಲಿ ಪೂರ್ಣ. ಆರೋಗ್ಯ ಸುಧಾರಣೆ. ಕೌಟುಂಬಿಕ ಸಮಸ್ಯೆ ಶೀಘ್ರ ಇತ್ಯರ್ಥ ಕಾಣಲಿದೆ.

ವೃಷಭ ಅತಿಮುಖ್ಯ ಕೆಲಸದ ಹೊಣೆ ನಿಮಗೆ ಬೀಳಬಹುದು. ಸರಿಯಾಗಿ ನಿಭಾಯಿಸಿ. ಕಾರ್ಯಕ್ಕಾಗಿ ಅಧಿಕ ಕಾಲ ಕಳೆಯಬೇಕು. ಖರ್ಚು ಅಧಿಕವಾಗಬಹುದು.

ಮಿಥುನ ದಿನದ ಅಂತ್ಯಕ್ಕೆ ಮಹತ್ವದ ಕಾರ್ಯ ಸಾಧಿಸುವಿರಿ. ಆತ್ಮವಿಶ್ವಾಸ ಹೆಚ್ಚಳ. ಹಣದ ಬಗ್ಗೆ ದುಡುಕಿ ಬೇಡ. ಇತರರ ಕೆಲಸ ಮೆಚ್ಚಲು ಕಲಿಯಿರಿ.

ಕಟಕ ಹಣದ ವಿಚಾರದಲ್ಲಿ ಸಮಸ್ಯೆ ಉಂಟಾದೀತು. ಕೆಲಸದ ಒತ್ತಡದಿಂದ ಆಕಾಂತ. ಪ್ರೀತಿಪಾತ್ರರ ಸಂಗದಲ್ಲಿ ಸಮಾಧಾನ ಪಡೆಯುವಿರಿ.

ಸಿಂಹ ಮನಸ್ಸಿನ ಮೇಲೆ ಹತೋಟಿ ಸಾಧಿಸಿ. ಎತ್ತರಕ್ಕೇರಲೂ ಹಲವು ಬಿಡಬೇಡಿ. ಆರ್ಥಿಕ ಸಂಕಷ್ಟಕ್ಕೆ ಪರಿಹಾರ ಸಿಗಲಿದೆ. ಧನಲಾಭ.

ಕನ್ಯಾ ಅಧಿಕ ಒತ್ತಡದ ದಿನ. ಮಧ್ಯಾಹ್ನದ ವೇಳೆ ಎಲ್ಲ ನಿರಾಳವಾಗಲಿದೆ. ಮನೆಯ ಸಮಸ್ಯೆಗೂ ಪರಿಹಾರ ಸಿಗಲಿದೆ. ಕೌಟುಂಬಿಕ ಸಮಾಧಾನ.

ತುಲಾ ಆಪ್ತರ ದೂರುತ್ತಾ ಕೂರಬೇಡಿ. ನಿಮ್ಮ ಕರ್ತವ್ಯ ನೆರವೇರಿಸಿ. ಆಪ್ತರ ಜತೆ ಸಂಘರ್ಷ ನಡೆದೀತು. ವೃತ್ತಿ ಒತ್ತಡ ಆರೋಗ್ಯದ ಮೇಲೆ ಪರಿಣಾಮ.

ವೃಶ್ಚಿಕ ನಿಮ್ಮ ಸುತ್ತ ಉಲ್ಲಾಸದ ವಾತಾವರಣ. ವೃತ್ತಿಯಲ್ಲಿ ಶುಭ ಸುದ್ದಿ. ಮನೆಯೊಳಗಿನ ಸಾಮರಸ್ಯದ ಪರಿಸರ. ಚಿಂತೆ ಮರೆಯುವ ಕಾಲ.

ಧನು ಕೆಲವರು ಬೇಡವೆಂಗೆ ಈ ದಿನ ಸಹಕರಿಸಬಹುದು. ಅವರ ಹೊಂದಿಕೊಳ್ಳಲು ಕಲಿಯಿರಿ. ಕುಟುಂಬದ ಹಿತಾಸಕ್ತಿ ಕಾಪಾಡಿರಿ.

ಮಕರ ನಿಮ್ಮ ಗುರಿ ಸಾಧಿಸಲು ಸೂಕ್ತ ಕಾಲ. ಅತ್ಯಧಿಕ ಜತೆಗಿನ ಭಿನ್ನಮತ ತೊಡೆಯಲು ಗಮನ ಕೊಡಿ. ಅಧಿಕ ಖರ್ಚು ಚಿಂತೆ ತಂದೀತು.

ಕುಂಭ ಈ ದಿನ ಹೊಸ ಪ್ರಯೋಗ ನಡೆಸಲು ಹೋಗಬೇಡಿ. ಯಥಾಸ್ಥಿತಿ ಕಾಯ್ದುಕೊಂಡು ಹೋಗಿ. ವ್ಯಕ್ತಿಯೊಬ್ಬರು ಕಿರಿಕಿರಿ ಉಂಟು ಮಾಡಿಯಾರು.

ಮೀನ ಕಚೇರಿಯ ರಾಜಕೀಯ ನಿಮ್ಮದಿ ಕೆಡಿಸಬಹುದು. ಸಿಹಿಕಹಿ ಪ್ರಸಂಗಗಳೆರಡೂ ಉಂಟಾದೀತು. ಮೆಚ್ಚು ಅಧಿಕಗೊಳ್ಳಬಹುದು.

ರಾಹುಕಾಲ : 10.30–12.00
ಗುಳಿಕಕಾಲ : 7.30–9.00
ಅದೃಷ್ಟ ಸಂಖ್ಯೆ : 8,5,0,3

ಗಿಗ್ ಕಾರ್ಮಿಕರಿಗಾಗಿ ರಾಜ್ಯ ಸರ್ಕಾರದ ನೀತಿ ಶ್ಲಾಘನೀಯ: ಬಿಎಂಎಸ್ ರಾಷ್ಟ್ರೀಯ ಉಪಾಧ್ಯಕ್ಷ ಪವನ್ ಕುಮಾರ್

ಕಾರ್ಮಿಕ ವರ್ಗಕ್ಕೆ ಭದ್ರತೆ ಸಹಿತ ಗೌರವ

• **ಬೆಂಗಳೂರು:** ಕಾರ್ಮಿಕ ವರ್ಗಕ್ಕೆ ಭದ್ರತೆ ಸಹಿತ ಗೌರವ ತಂದುಕೊಡುವುದಕ್ಕಾಗಿ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲು ಮುಂದಾಗಿರುವ ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ರಾಷ್ಟ್ರೀಯ ಉಪಾಧ್ಯಕ್ಷ, ಮಧ್ಯದ ಉಸ್ತುವಾರಿ ಪವನ್‌ಕುಮಾರ್ ಅವರು ಹೊಸ ದಿಗಂತಕ್ಕೆ ವಿಶೇಷ ಸಂದರ್ಶನ ನೀಡಿದ್ದಾರೆ. ಪ್ರಸಕ್ತ ಹೊಸ ಕಾರ್ಮಿಕ ವರ್ಗವಾಗಿರುವ ಗಿಗ್ ಕಾರ್ಮಿಕರಿಗಾಗಿ ಕರ್ನಾಟಕ ಸರ್ಕಾರದ ನೀತಿಯನ್ನು ಅವರು ಮುಕ್ತಕಂಠದಿಂದ ಪ್ರಶಂಸಿದ್ದಾರೆ.

ಭಾರತೀಯ ಮಜ್ದೂರ್ ಸಂಘದ ಉದ್ದೇಶವೇನು?

1955ರ ಜುಲೈ 23ರಂದು ಭಾರತೀಯ ಮಜ್ದೂರ್ ಸಂಘ ಪ್ರಾರಂಭವಾಯಿತು. ಸಾಮಗೆ 72 ವರ್ಷ ಪೂರ್ಣಗೊಳ್ಳುತ್ತಿದೆ. ಕಾರ್ಮಿಕ ವರ್ಗದ ಆಸಕ್ತಿಯನ್ನು ಗಮನಿಸುತ್ತಾ ರಾಷ್ಟ್ರ ನಿರ್ಮಾಣದಲ್ಲಿ ಕೊಡುಗೆ ನೀಡುವುದು ನಮ್ಮ ಮೂಲ ಕೆಲಸವಾಗಿದೆ. ಬಿಎಂಎಸ್ ಯಾವುದೇ ರಾಜಕೀಯ ಸಂಘಟನೆಯಲ್ಲ, ನಾವು ಸರ್ಕಾರದ ಕ್ರಿಯೆಗೆ ಪ್ರತಿಕ್ರಿಯಿಸುತ್ತೇವೆ.

ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅದು ಯಾವುದೇ ಸರ್ಕಾರ ಆಗಿರಲಿ, ಅದು ರಾಷ್ಟ್ರದ ಹಿತಕ್ಕೆ, ಬಡ ಕಾರ್ಮಿಕ ವರ್ಗಕ್ಕೆ ಮತ್ತು ಬಡವರಿಗಾಗಿ ಕೆಲಸ ಮಾಡಿದರೆ ನಾವು ಅವರನ್ನು ಬೆಂಬಲಿಸುತ್ತೇವೆ. ಒಂದು ವೇಳೆ ಅವರು ಅದಕ್ಕೆ ವಿರುದ್ಧವಾಗಿ ಕೆಲಸ ಮಾಡಿದರೆ ನಾವು ರಸ್ತೆಗಿಳಿದು ಹೋರಾಟ ಮಾಡುತ್ತೇವೆ. ಪ್ರಸಕ್ತ 6000ಕ್ಕೂ ಅಧಿಕ ಯೂನಿಯನ್‌ಗಳು ಬಿಎಂಎಸ್ ಜೊತೆಗಿವೆ. ಸುಮಾರು 2.5 ಕೋಟಿ ಸದಸ್ಯರನ್ನು ಹೊಂದಿದ್ದೇವೆ. ಬಿಎಂಎಸ್ ದೇಶದ ಅತೀ ದೊಡ್ಡ ಕಾರ್ಮಿಕ ಸಂಘಟನೆಯಾಗಿದೆ.

ಕಾರ್ಮಿಕರಿಗೆ ಅನುಕೂಲ ಮಾಡಲು ಬಿಎಂಎಸ್ ಹೇಗೆ ಕೆಲಸ ಮಾಡುತ್ತದೆ?



ನಾವೊಂದು ನೀತಿ ರೂಪಿಸಿದ್ದೇವೆ, ಅದು ಸಂವಾದ ಮತ್ತು ಸಂಘರ್ಷ. ನಾವು ಮಾತುಕತೆ ನಡೆಸುತ್ತೇವೆ, ಅದರಿಂದ ಸಮಸ್ಯೆ ಬಗೆಹರಿದರೆ ಉತ್ತಮ. ಇಲ್ಲವಾದರೆ ನಾವು ಹೋರಾಟ ಮಾಡುತ್ತೇವೆ. ನಮಗೆ ಅಂತಿಮವಾಗಿ ಕಾರ್ಮಿಕ ವರ್ಗದ ಸಮಸ್ಯೆಗಳನ್ನು ಬಗೆಹರಿಸುವ ಪುದು, ಅವರ ಮೂಲಕ ದೇಶದ ಸಮಸ್ಯೆಗಳನ್ನು ಬಗೆಹರಿಸಬೇಕಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರವೂ ಇದು ಸಾಧ್ಯವಾಗದಿದ್ದರೆ ಬಡವರು ಇನ್ನೂ ಬಡವರಾಗಿಯೇ ಇರಬೇಕೇ? ಇನ್ನೂ ಅಸ್ಪೃಶ್ಯತೆ ಇರಬೇಕೇ? ಇನ್ನೂ ತಾರತಮ್ಯ ಇರಬೇಕೇ? ಇದಾಗಬಾರದು, ಇದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ.

ಗಿಗ್ ಕಾರ್ಮಿಕರ ಕುರಿತಾಗಿ ಬಿಎಂಎಸ್ ಏನು ಮಾಡಿದೆ?

ಪ್ರಸಕ್ತ ರಾಷ್ಟ್ರೀಯ ಸ್ವಾವಲಂಬನೆಗೆ ಅತೀ ದೊಡ್ಡ ಬದಲಾವಣೆಯಂತೆ ಕಾಣುತ್ತಿರುವುದು ಗಿಗ್ ಪ್ಲಾಟ್‌ಫಾರಂ ಎಕಾನಮಿ (ಆನ್‌ಲೈನ್ ಪ್ಲಾಟ್‌ಫಾರಂ ವ್ಯವಹಾರ). ದೇಶದಲ್ಲಿ ಗಿಗ್ ಕಾರ್ಮಿಕರ ಸಂಖ್ಯೆ ಒಂದು ಕೋಟಿಗೂ ಮಿಕ್ಕಿದೆ. ಅವರಿಗೆ ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆ ಏನಿದೆ? ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆಯ ಜೊತೆಗೆ ಅವರಿಗೆ ವೇತನವೂ ಇಲ್ಲ, ಇಂತಹ ಸಂಸ್ಥೆಗಳು (ಅಗ್ರಿಗೇಟರ್) ಹೆಚ್ಚು ಕಮಿಷನ್ ಪಡೆದುಕೊಳ್ಳುತ್ತವೆ. ಇದನ್ನು ಕಡಿಮೆ ಮಾಡಬೇಕಾಗಿದೆ. ಕೆಲ ಸಮಯದ ಹಿಂದೆ ವಿನಿಟ್ ಸರ್ವಿಸ್ ಎಂಬ ಸೇವೆಗಳು ಬಂದವು. ಬಿಎಂಎಸ್ ಇದನ್ನು ವಿರೋಧಿಸಿತು. ಇದು ಹೇಗೆ ಸಾಧ್ಯವಾಗುತ್ತದೆ? ಈ ಗಿಗ್ ಕಾರ್ಮಿಕರು ಅದನ್ನು ಹೇಗೆ ನಿಭಾಯಿಸುತ್ತಾರೆ ಎಂದು ವಿರೋಧ ವ್ಯಕ್ತಪಡಿಸಿದೆವು. ನಮ್ಮ ಹೋರಾಟದ ತರುವಾಯ ಸರ್ಕಾರ ಇದನ್ನು ನಿಷೇಧಿಸಿತು.

ಗಿಗ್ ಕಾರ್ಮಿಕರಿಗಾಗಿ ಕರ್ನಾಟಕ ಸರ್ಕಾರವು ಉತ್ತಮ ಹೆಜ್ಜೆ ಇಟ್ಟಿದೆ. ಕರ್ನಾಟಕ ಸರ್ಕಾರದ ಈ ಕ್ರಮವನ್ನು ಬಿಎಂಎಸ್ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಸ್ವಾಗತಿಸಿದೆ. ರಾಜ್ಯದ ಕಾರ್ಮಿಕ ಸಚಿವರ ಬಳಿ ತೆರಳಿ ಅವರನ್ನು ಇದಕ್ಕಾಗಿ ಗೌರವಿಸಿದ್ದೇವೆ. ಯಾರು ಉತ್ತಮ ಕೆಲಸ ಮಾಡುತ್ತಾರೋ ಅವರನ್ನು ಗೌರವಿಸುತ್ತೇವೆ. ನಾವು ಸರ್ಕಾರದ ಜೊತೆಗೆ ವ್ಯವಹರಿಸಲು ತಯಾರಿದ್ದೇವೆ ಹೊರತು ಪಕ್ಷದ ಜೊತೆಗಲ್ಲ.

ಕೃತಕ ಬುದ್ಧಿಮತ್ತೆ (ಎಐ)ಯಿಂದ

ಬಿಎಂಎಸ್‌ನ ಪ್ರಮುಖ ಬೇಡಿಕೆ ಯಾವುವು?

ಮುಖ್ಯವಾಗಿ ಬಡವರ ಖರೀದಿಸುವ ಸಾಮರ್ಥ್ಯ ಹೆಚ್ಚಾಗಬೇಕು. ಎರಡನೆಯದು ದೇಶಾದ್ಯಂತ ಇರುವ 17 ಕಾರ್ಯಕ್ಷಮಗಳಲ್ಲಿ ಕೆಲಸ ಮಾಡುವ ಎಲ್ಲಾ ಯೋಜನಾ ಕಾರ್ಯಕರ್ತರನ್ನು ಒಟ್ಟು ನೌಕರ ಎಂದು ಪರಿಗಣಿಸಬೇಕು ಮತ್ತು ಅವರಿಗೆ ನೌಕರರ ಎಲ್ಲ ಹಕ್ಕುಗಳನ್ನು ನೀಡಬೇಕು. ಬಿಪಿಎಲ್ ಮಾನದಂಡವನ್ನು ಪರಿಷ್ಕರಿಸಬೇಕು. ದೇಶಾದ್ಯಂತ ಇರುವ ತೈಲ ಉತ್ಪನ್ನ ಕಂಪನಿಗಳು ತಮ್ಮ ಸಿಎಸ್‌ಆರ್ ನಿಧಿಯನ್ನು ತಮ್ಮ ಗ್ರಾಹಕರಾದ ವಾಣಿಜ್ಯ ವಾಹನಗಳ ಚಾಲಕರ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕು. ಇಪಿಎಸ್–95 ಯೋಜನೆಯನ್ನು 2014ರ ಸೆ.1ರಂದು ಪರಿಷ್ಕರಿಸಲಾಗಿತ್ತು. ಈಗ 12 ವರ್ಷಗಳಾಗಿರುವುದರಿಂದ ಅದನ್ನು ಮತ್ತೆ ಪರಿಷ್ಕರಿಸಬೇಕು. ಗುತ್ತಿಗೆ ನೌಕರರನ್ನು ಖಾಯಂಗೊಳಿಸಿ, ಖಾಯಂ ನೌಕರರ ಎಲ್ಲ ಸವಲತ್ತುಗಳನ್ನು ಅವರಿಗೆ ಒದಗಿಸಬೇಕು.

ಉದ್ಯೋಗಗಳಿಗೆ ಕತ್ತರಿ ಬೀಳುವುದಿಲ್ಲವೇ? ಉದ್ಯೋಗಿಗಳು ಉದ್ಯೋಗ ಕಳೆದುಕೊಳ್ಳುವುದಕ್ಕೆ ಏನು ಪರಿಹಾರವಿದೆ?

ಎಐ ತಂತ್ರಜ್ಞಾನವು ಕಾರ್ಮಿಕರು ಅಥವಾ ನೌಕರರ ಕೆಲಸವನ್ನು ಸುಲಭಗೊಳಿಸಬೇಕು. ಬದಲಿಗೆ ಅವರಿಗೆ ಪರ್ಯಾಯ ಆಗಬಾರದು. ಅದು ಕಾರ್ಮಿಕ ವರ್ಗವನ್ನು ಬೆಂಬಲಿಸಬೇಕು. ಆದ್ದರಿಂದ ಈ ತಂತ್ರಜ್ಞಾನವನ್ನು ಮಾನವ ಕೇಂದ್ರಿತ ತಂತ್ರಜ್ಞಾನವಾಗಿಸಬೇಕು. ಬ್ರಿಕ್ಸ್ ಟ್ರೇಡ್ ಯೂನಿಯನ್ ಫೋರಂ ಸಮ್ಮೇಳನ ಹೈದರಾಬಾದ್‌ನಲ್ಲಿ ಜುಲೈ 14 ಮತ್ತು 15ರಂದು ನಡೆಯಲಿದೆ.

ಅದರ ಅಜೆಂಡಾದಲ್ಲಿ ಮಾನವ ಕೇಂದ್ರಿತ ತಂತ್ರಜ್ಞಾನ, ಕೌಶಲ ಅಭಿವೃದ್ಧಿ, ಎಲ್ಲರಿಗೂ ಸಾಮಾಜಿಕ ಭದ್ರತೆ ಸೇರಿದಂತೆ ಅನೇಕ ವಿಷಯಗಳ ಕುರಿತು ಚರ್ಚಿಸಲಾಗುತ್ತದೆ. ಜಗತ್ತಿಗೆ ನಾಯಕತ್ವ ನೀಡುವುದು ನಮ್ಮ ಜವಾಬ್ದಾರಿಯಾಗಿದೆ. ಈ ಫೋರಂನ ಅಧ್ಯಕ್ಷ ಬಿಎಂಎಸ್ ಆಗಿದೆ. ಆದ್ದರಿಂದ ಜಗತ್ತಿನ ಬೇರೆ ಬೇರೆ ದೇಶಗಳ ಸಂಘಟನೆಗಳೊಂದಿಗೆ ಚರ್ಚಿಸಿ ಈ ವಿಷಯವನ್ನು ಮುಂದುವರಿಸಲಾಗುತ್ತದೆ.

ಭಾರತದ ಅಮೃತಕಾಲ 2047ಕ್ಕೆ ಕೊಡುಗೆ

ನೀಡಲು ಬಿಎಂಎಸ್ ಏನು ಮಾಡುತ್ತದೆ? ಏನಾದರೂ ಅಜೆಂಡಾ ಇದೆಯಾ?

ಈಗ ದೇಶ ಅಮೃತ ಕಾಲ ಆಚರಿಸುತ್ತಿದೆ. ಭಾರತವು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಬೇಕೆಂಬ ಸರ್ಕಾರದ ಗುರಿ ನಿಗದಿಪಡಿಸಿದೆ. ಇವತ್ತಿಗೂ ನಾವು ಕನಿಷ್ಠ ವೇತನಕ್ಕಾಗಿ ಹೋರಾಟ ನಡೆಸುತ್ತಿದ್ದೇವೆ. ನಮಗೆ ಜೀವನಾಧಾರ ವೇತನ (ಲಿವಿಂಗ್ ವೇಜ್) ಬೇಕು. ಬಡ ವ್ಯಕ್ತಿಗಳ ಕೊಳ್ಳುವ ಶಕ್ತಿ ಹೆಚ್ಚಾಗಬೇಕು. ಆಗ ಆರ್ಥಿಕ ಚಕ್ರ ನಡೆಯುತ್ತದೆ. ಒಂದು ವೇಳೆ ಅವರ ಕೊಳ್ಳುವ ಸಾಮರ್ಥ್ಯ ಹೆಚ್ಚಳವಾಗದಿದ್ದರೆ ಆರ್ಥಿಕ ಚಕ್ರ ಮುನ್ನಡೆಯುವುದಿಲ್ಲ. ಇವತ್ತಿಗೂ ಈ ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವವರು ಇದ್ದಾರೆ. ಪ್ರತಿಯೊಬ್ಬರಿಗೂ ಆಹಾರ, ವಸ್ತ್ರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಗೌರವ ಈ ಆರು ಮೂಲ ಸೌಕರ್ಯಗಳು ಲಭ್ಯವಿರಬೇಕು. ಆದರೆ, ಈಗ ಕಾರ್ಮಿಕರಿಗೆ ಗೌರವವಿಲ್ಲದಂತಾಗಿದೆ. ಇದು ಮೂಲ ಸಮಸ್ಯೆಯಾಗಿದೆ. ಅವರ ಕೆಲಸಗಳಿಗೆ ಗೌರವ ಲಭಿಸಬೇಕಾಗಿದೆ. ಯಾವುದೇ ಕೆಲಸ ಕಡಿಮೆಯಲ್ಲ. ಇಷ್ಟು ಅಭಿವೃದ್ಧಿಯಾಗಿದೆ, ಅಮೃತಮಹೋತ್ಸವ ನಡೆದಿದೆ. ಆದರೂ ಈಗಲೂ ಒಳಚರಂಡಿ ಸಂಸ್ಕರಣಾ ಘಟಕದಲ್ಲಿ ಕಾರ್ಮಿಕರು ಮೃತಪಡುತ್ತಿದ್ದಾರೆ.

ಮಾಧ್ಯಮಗಳಲ್ಲಿ ಈ ರೀತಿಯ ಸುದ್ದಿಗಳನ್ನು ಓದುತ್ತಿದ್ದೇವೆ. ಸರ್ಕಾರ ಅವರಿಗೆ ಪೋಷಣೆ ಮಾಡಿದ ಸವಲತ್ತನ್ನು ಲಭಿಸುತ್ತಿಲ್ಲ. ಇದು ಹೇಗಾಗುತ್ತದೆ? ಇದು ಕೇವಲ ಕರ್ನಾಟಕದ ಸಮಸ್ಯೆ ಮಾತ್ರವಲ್ಲ, ಹೆಚ್ಚು ಕಡಿಮೆ ಇಡೀ ದೇಶದ ಸಮಸ್ಯೆಯಾಗಿದೆ. ಮೊದಲು ಕಾರ್ಮಿಕ ವರ್ಗವನ್ನು ಸದೃಢಗೊಳಿಸಬೇಕು, ಅವರನ್ನು ಮುಖ್ಯವಾಹಿನಿಗೆ ತಂದು ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು.

ಸಂವಿಧಾನದ ಮೇಲಿನ ನೇರ ದಾಳಿ

ಪುತ್ತೂರು: ತುರ್ತು ಪರಿಸ್ಥಿತಿ ಸಂದರ್ಭದಲ್ಲೇ ದೇಶದ ಕೋಟ್ಯಂತರ ಜನರ ಅಸಾಧಾರಣ ಧೈರ್ಯ ತನ್ನೊಳಕ ಪ್ರತಿಫಲಿತವಾಗಿದೆ ಎಂದು ಮಟ್ಟುಗೆ ವ್ಯಕ್ತಪಡಿಸಿದ್ದಾರೆ. ಸಂವಿಧಾನವು 140 ಕೋಟಿ ಭಾರತೀಯರ ಆಕಾಂಕ್ಷೆಗಳನ್ನು, ಹಕ್ಕುಗಳು ಮತ್ತು ಕರ್ತವ್ಯಗಳ ಮೂರ್ತರೂಪವಾಗಿದೆ ಎಂದು ಪ್ರಧಾನಿ ಮೋದಿಯವರು 1975ರ ಜೂ.25ರಂದು ಕರಾಳ ತುರ್ತು ಪರಿಸ್ಥಿತಿ ಘೋಷಣೆಯಾದುದನ್ನು ಉಲ್ಲೇಖಿಸಿ ಎಕ್ಸ್‌ನ ಪೋಸ್ಟ್ ಹಾಕಿದ್ದಾರೆ. ಸಾಂವಿಧಾನಿಕ ಮೌಲ್ಯಗಳನ್ನು ಸಂರಕ್ಷಿಸುವಲ್ಲಿ ನಮ್ಮ ಸಾಮೂಹಿಕ ಬದ್ಧತೆಯನ್ನು ನಾವು ಪುನರುಚ್ಚರಿಸುತ್ತೇವೆ. ನಮ್ಮ ಸಂವಿಧಾನದ ಸಂದೇಶಗಳಾದ ಸಾರ್ವ ಮಾರ್ಗದರ್ಶನದಲ್ಲಿ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ಬದ್ಧ ಭಾರತವನ್ನು ನಾವು ಕಟ್ಟಲಿದ್ದೇವೆ ಎಂದು ಪ್ರಧಾನಿ ಮೋದಿ ಘೋಷಿಸಿದ್ದಾರೆ.

ಪ್ರಜಾಪ್ರಭುತ್ವದ ಕಗ್ಗೊಲೆ: 1975ರ ಜೂ.25ಮತ್ತು 1977ರ ಮಾ.21ರವರೆಗಿನ ಅವಧಿಯಲ್ಲಿ ಸಂವಿಧಾನದ ಕಲಂ 352ರಲ್ಲಿ ಭಾರತವನ್ನು ತುರ್ತು ಪರಿಸ್ಥಿತಿಗೆ ನೂಕಲಾಗಿತ್ತು. 1975ರ ಜೂ.25ರಂದು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು ಎಂದು ಈ ಕುರಿತ ಗೆಜೆಟ್ ಅಧಿಸೂಚನೆ ಹೇಳಿದೆ. ತುರ್ತು ಪರಿಸ್ಥಿತಿ ಹೇರಿದ್ದ ಆಗಿನ ಕಾಂಗ್ರೆಸ್ ಸರ್ಕಾರ ಅಧಿಕಾರವನ್ನು ಸಹಿತ ದುರ್ಬಳಸಿಕೊಂಡು ಮತ್ತು ದೇಶದ ಜನರ ವಿರುದ್ಧ ಮೇಲೆ ಮೀರಿ ಅನ್ಯಾಯ, ದೌರ್ಜನ್ಯವೆಸಗಿತ್ತು. 2025ರಿಂದ ಜೂ.25ನ್ನು ನರೇಂದ್ರ ಮೋದಿ ಸರ್ಕಾರ ಸಂವಿಧಾನ ಹತ್ಯಾ ದಿನವಾಗಿ ಆಚರಿಸುತ್ತಿದೆ. ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಕರಾಳ ಅಧ್ಯಾಯ ಹೆಸರಿಸಲಾದ ಕರಾಳ ಸನ್ನಿವೇಶವನ್ನು ಸಂವಿಧಾನ ಹತ್ಯಾ ದಿವಸ್ ಪ್ರತಿಯೊಬ್ಬರಿಗೂ ನೆನಪಿಸುತ್ತದೆ ಎಂದು ಪ್ರಧಾನಿ ಮೋದಿ ಎಕ್ಸ್‌ನ ಹಾಕಿರುವ ಮತ್ತೊಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಪ್ರಜಾಸತ್ತೆ, ಸಂವಿಧಾನ ಮತ್ತು ನಾಗರಿಕ ಹಕ್ಕುಗಳ ಸಂರಕ್ಷಣೆಗೆ ಸದಾ ಬದ್ಧರಾಗಿರಲು ಸಂವಿಧಾನ ಹತ್ಯಾ ದಿವಸವು ಪ್ರೇರಣೆಯಾಗಿದೆ. ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ ಎಲ್ಲಾ ಮಹಾನ್ ವ್ಯಕ್ತಿಗಳಿಗೂ ನನ್ನ ವಂದನೆಗಳು ಎಂದು ಪ್ರಧಾನಿ ಮೋದಿ ಹಿಂದಿಯಲ್ಲಿ ಹಾಕಿರುವ ಮಗದೊಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಪತ್ರಿಕೆಗಳ ಮೇಲೆ ಬಲಪ್ರಯೋಗ: ತುರ್ತು ಪರಿಸ್ಥಿತಿ ಘೋಷಣೆಯು ಭಾರತೀಯ ಸಾಂವಿಧಾನಿಕ ಚರಿತ್ರೆಯಲ್ಲೇ ತಿರುವಾಗಿತ್ತು. ಅಧಿಕಾರ ಮೀರಿ ವರ್ತಿಸುವ ಆಧಿಕಾರ ಕಾರ್ಯಾಂಗಕ್ಕೆ ಲಭಿಸಿತ್ತು ಮತ್ತು ರಾಜ್ಯಗಳು ಕೇಂದ್ರದ ಹಿಡಿತಕ್ಕೊಳಗಾಗಿದ್ದವು. ಸಾಂವಿಧಾನಿಕ ಸುರಕ್ಷೆಗಳು ವ್ಯವಸ್ಥಿತವಾಗಿ ಅಮಾನತಾಗಿದ್ದವು.

ಸಾಂಸ್ಥಿಕ ವ್ಯವಸ್ಥೆಗಳು ಮತ್ತು ಆಡಳಿತಾತ್ಮಕ ಆದೇಶಗಳ ಮುಖೇನ ಪತ್ರಿಕೆಗಳು, ಸಾರ್ವಜನಿಕ ಮಾಹಿತಿ ವ್ಯವಸ್ಥೆಗಳ ಮೇಲೆ ನಿಯಂತ್ರಣ ಸಾಧಿಸಲಾಗಿತ್ತು. ನ್ಯಾಯಾಂಗ ಪರಾಮರ್ಶೆ ಮತ್ತು ಸಾಂಸ್ಥಿಕ ಪರಿಶೀಲನಾ ವ್ಯವಸ್ಥೆಗಳನ್ನು ದುರ್ಬಲಗೊಳಿಸುವಂತಹ ಸರಣಿ ಸಾಂವಿಧಾನಿಕ ತಿದ್ದುಪಡಿಗಳನ್ನು ಸಂಸತ್ತು ಅಂಗೀಕರಿಸಿತ್ತು. ಬಲವಂತದ ಸಂತಾನ ಹರಣ ಅಭಿಯಾನವು ತುರ್ತು ಪರಿಸ್ಥಿತಿ ಸಂದರ್ಭದ ತೀರಾ ವಿವಾದಾಸ್ಪದ ಅಂಶಗಳಲ್ಲೊಂದಾಗಿದೆ. ಸಾರ್ವತ್ರಿಕ ಚುನಾವಣೆಗಳು ಸ್ಥಗಿತವಾಗಿ ರಾಜಕೀಯ ತಿರುವುಗಳ ಪರಿಣಾಮ 1977 ಮಾರ್ಚ್‌ನಲ್ಲಿ ತುರ್ತು ಪರಿಸ್ಥಿತಿ ಕೊನೆಗೂ ಅಂತ್ಯಗೊಂಡಿತ್ತು.

ಖರ್ಗೆ ಕುಟುಂಬದಿಂದ ಭೂ ಕಬಳಿಕೆ: ಆರೋಪ

ಪುತ್ತೂರು: ಆದರೆ, ಆ ಭೂಮಿಯಲ್ಲಿ ಉದ್ದೇಶಿತ ಸಂಶೋಧನಾ ಚಟುವಟಿಕೆಗಳನ್ನು ನಡೆಸಲಾಗುತ್ತಿಲ್ಲ ಎಂದು ಅವರು ದೂರಿದರು. ಇದಲ್ಲದೆ, 2016ರಲ್ಲಿ ಪಾಲಿ ಭಾಷಾ ಸಂಶೋಧನೆಗಾಗಿ 19 ಎಕರೆ ಭೂಮಿ, 2011ರಲ್ಲಿ ಗುಲ್ಬರ್ಗಾ ಪ್ರದೇಶದಲ್ಲಿ 7.18 ಎಕರೆ ಭೂಮಿ ಹಾಗೂ 2010ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 8,125 ಚದರ ಮೀಟರ್ ಭೂಮಿ ಹಂಚಿಕೆಯಾಗಿರುವ ವಿಚಾರಗಳನ್ನೂ ಭಂಡಾರಿ ಪ್ರಸ್ತಾಪಿಸಿದ್ದಾರೆ.

ಸಿದ್ಧಾರ್ಥ್ ವಿಹಾರ್ ಟ್ರಸ್ಟ್ ಮೂಲಕ ಖರ್ಗೆ ಕುಟುಂಬ ಕರ್ನಾಟಕದಲ್ಲಿ ಭೂ ಕಬಳಿಕೆ ನಡೆಸಿದೆ. ಈ ಪ್ರಕರಣಗಳಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 13(1)(ಎ) ಮತ್ತು 13(1)(ಬಿ) ಉಲ್ಲಂಘನೆಯಾಗಿದೆ ಎಂದು ಪ್ರದೀಪ್ ಭಂಡಾರಿ ಆರೋಪಿಸಿದರು. ವಾಯುಯಾನ ಮತ್ತು ರಕ್ಷಣಾ ಸಂಶೋಧನೆಗಾಗಿ ಮೀಸಲಾದ ಭೂಮಿಯನ್ನು ಟ್ರಸ್ಟ್‌ಗೆ ನೀಡಲಾಗಿದೆ. ಆದರೆ, ಅಲ್ಲಿ ಯಾವುದೇ ಸಂಶೋಧನಾ ಅಥವಾ ಅಭಿವೃದ್ಧಿ ಚಟುವಟಿಕೆಗಳು ನಡೆಯುತ್ತಿಲ್ಲ ಎಂದು ಹೇಳಿದ್ದಾರೆ.

ಆರೋಪ ಸುಳ್ಳು, ತನಿಖೆ ನಡೆಸಿ ಜೈಲಿಗೆ ಹಾಕಲಿ: ಖರ್ಗೆ ಸವಾಲು: ಬಿಜೆಪಿ ಆರೋಪಕ್ಕೆ ತಿರುಗೇಟು ನೀಡಿರುವ ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯದಲ್ಲಿ 5 ಜನ ಬಿಜೆಪಿ ಮುಖ್ಯಮಂತ್ರಿಗಳು ಅಧಿಕಾರದಲ್ಲಿದ್ದರು. ಕೇಂದ್ರದಲ್ಲಿ ನರೇಂದ್ರ ಮೋದಿಯವರು 12 ವರ್ಷದಿಂದ ಪ್ರಧಾನಿಯಾಗಿದ್ದು, ನಿಮ್ಮದೇ ಸರ್ಕಾರ ಅಧಿಕಾರದಲ್ಲಿದೆ. ಆದರೂ ನಾನು ಮುಕ್ತವಾಗಿ ತಿರುಗಾಡುತ್ತಿದ್ದೇನೆ, ತಪ್ಪಿದ್ದರೆ ಜೈಲಿಗೆ ಹಾಕಿ ಎಂದು ಸವಾಲು ಹಾಕಿದ್ದಾರೆ. ರಾಮ ಮಂದಿರ ಲೆಕ್ಕ ಜನರು ಕೇಳುತ್ತಿದ್ದಾರೆ, ಬಿಜೆಪಿಯವರು ಬುದ್ಧನ ಲೆಕ್ಕ ಕೇಳುತ್ತಿದ್ದಾರೆ ಎಂದು ಆರೋಪಿಸಿದರು.

15ರ ವೈಭವಕ್ಕೆ ಕಾಯುತ್ತಿದೆ ಇತಿಹಾಸ!

ಪುತ್ತೂರು: **ಸಚಿನ್ ಬಳಿಕವಲ್ಲ, ಸಚಿನ್‌ಗೂ ಮೊದಲೇ!:** ಕ್ರಿಕೆಟ್ ದೇವರು ಅನಿಸಿಕೊಳ್ಳುವ ಸಚಿನ್ ತೆಂಡುಲ್ಕರ್ ಇಂಥದ್ದೇ ದಾಖಲೆಯೊಂದನ್ನು ಆಗಿನ ದಿನಗಳಲ್ಲಿ ಮಾಡಿದ್ದರು. 1989ರಲ್ಲಿ ಪಾಕಿಸ್ತಾನದೊಂದಿಗೆ ನಡೆದ ಪಂದ್ಯವೊಂದರಲ್ಲಿ 16 ವರ್ಷ 205 ದಿನ ವಯಸ್ಸಿನ ಸಚಿನ್ ತೆಂಡುಲ್ಕರ್ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಅಂದಿನಿಂದ ಇಂದಿನವರೆಗೆ ಸಚಿನ್ ಮಾಡಿದ ದಾಖಲೆ ಅಚಳವಾಗಿತ್ತು. ವೈಭವ್ ಸೂರ್ಯವಂಶಿ ಬಗ್ಗೆ ಮಾತನಾಡುವಾಗ ಎಲ್ಲರೂ ಸಚಿನ್ ಬಳಿಕ ಅತಿ ಕಿರಿಯ ಎಂಬ ಮಾತನ್ನು ಹೇಳುತ್ತಾ ಬಂದರು. ಆದರೆ ವಾಸ್ತವವಾಗಿ ವೈಭವ್ ಸಚಿನ್ ಬಳಿಕವಲ್ಲ, ಸಚಿನ್‌ಗೂ ಮೊದಲೇ. ಏಕೆಂದರೆ ವೈಭವ್ ಈ ದಾಖಲೆಯನ್ನು 15 ವರ್ಷ 88 ದಿನದಲ್ಲಿ ಮುರಿಯಲಿದ್ದಾರೆ. ಭಾರತ ಪರ ಆಡಲಿರುವ ಅತಿ ಕಿರಿಯ ಆಟಗಾರನೆನಿಸಲಿದ್ದಾರೆ.

ಅತಿ ಕಿರಿಯ ದಾಖಲೆ ಯಾರ ಹೆಸರಲ್ಲಿದೆ?: ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡಿದ ಅತಿ ಕಿರಿಯ ಆಟಗಾರ ಎಂಬ ದಾಖಲೆ ಪಾಕ್ ಮೂಲದ ಕ್ರಿಕೆಟಿಗನ ಹೆಸರಲ್ಲಿದೆ. ಆದರೆ ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಸದಸ್ಯ ರಾಷ್ಟ್ರಗಳ ಸಹಿತ ಹೊಂದಿದ ದೇಶಗಳನ್ನು ಪ್ರತಿನಿಧಿಸುವವರೇ ಅಧಿಕೃತ ದಾಖಲೆ. ವೈಭವ್ 15 ವರ್ಷದವರು. ಅತಿ ಕಿರಿಯ ಎಂದು ಕರೆಯಲು ತಕ್ಕಲ್ಲ, ಇದಲ್ಲದೆ ಟಿ20 ಕ್ರಿಕೆಟ್‌ನಲ್ಲಿ ಐರ್ಲೆಂಡ್ ಮೇಲ್ಗೆ ವಿರುದ್ಧ 16 ವರ್ಷ 309 ದಿನದಲ್ಲಿ ಮಾಡಿದ್ದರು. ಈ ದಾಖಲೆ ವೈಭವ್ ಅಳಿಸಿ ಹಾಕಲಿದ್ದಾರೆ.

ಹೊಳೆತ್ತಲು ಯೋಜನೆ

ಪುತ್ತೂರು: **ನೀರಿನ ಸದ್ಬಳಕೆಯಿಂದ ರೈತರ ಆದಾಯ ವೃದ್ಧಿ:** ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯಿಂದ ದೇಶವನ್ನು ರಸ್ತೆಗಳ ಮೂಲಕ ಹೇಗೆ ಜೋಡಿಸಲಾಗುತ್ತಿದೆಯೋ, ಅದೇ ರೀತಿ ನೀರಿನ ಯೋಜನೆಗಳ ಮೂಲಕವೂ ಇಡೀ ದೇಶವನ್ನು ಬೆಸೆಯಲಾಗುತ್ತಿದೆ. ರೈತರಿಗೆ ಹೆಚ್ಚಿನ ನೀರು ಲಭ್ಯವಾದರೆ, ಅವರು ವರ್ಷಕ್ಕೆ ಒಂದರ ಬದಲು ಎರಡು ಬೆಳೆಗಳನ್ನು ತೆಗೆಯಲು ಸಾಧ್ಯವಾಗುತ್ತದೆ ಮತ್ತು ಇದರಿಂದ ಅವರ ಆದಾಯವೂ ದ್ವಿಗುಣಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

ಸಚಿವರಿಗೆ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ

ಪುತ್ತೂರು: ಸತೀಶ್ ಜಾರಕಿಹೊಳಿಗೆ ಬೆಳಗಾವಿ, ಧಾರವಾಡ ಮತ್ತು ಹಾವೇರಿ, ಪ್ರಿಯಾಂಕ್ ಖರ್ಗೆಗೆ ಕಲಬುರ್ಗಿ ಮತ್ತು ಯಾದಗಿರಿ, ಡಾ. ಶರಣಪ್ರಕಾಶ್ ಪಾಟೀಲ್‌ಗೆ ರಾಯಚೂರು ಮತ್ತು ಕೊಪ್ಪಳ, ಯು.ಟಿ.ಖಾದರ್‌ಗೆ ಉಡುಪಿ, ಕೊಡಗು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ, ಭೈರತಿ ಸುರೇಶ್‌ಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಗೂ ಯತೀಂದ್ರ ಸಿದ್ದರಾಮಯ್ಯಗೆ ಮೈಸೂರು, ಚಾ.ನಗರ ಜಿಲ್ಲೆಗಳ ಮೇಲುಸ್ತುವಾರಿ ವಹಿಸಲಾಗಿದೆ. ಈ ಸಚಿವರು ಬರ ಹಾಗೂ ಇನ್ನಿತರ ಪ್ರಕೃತಿ ವಿಕೋಪಗಳ ಕುರಿತು ಆಯಾ ಜಿಲ್ಲೆಗಳಲ್ಲಿ ಅಧಿಕಾರಿಗಳ ಸಭೆ ನಡೆಸಿ ಮೇಲುಸ್ತುವಾರಿ ವಹಿಸುವಂತೆ ತಿಳಿಸಲಾಗಿದೆ.

ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿಕೆ

ಆಂಬುಲೆನ್ಸ್ ಸೇವೆಗೆ ಮತ್ತಷ್ಟು ಬಲ

• **ಬೆಂಗಳೂರು:** ರಾಜ್ಯದಲ್ಲಿ 108 ಆರೋಗ್ಯ ಕವಚ ಯೋಜನೆ ಅಡಿಯಲ್ಲಿ ಆಂಬುಲೆನ್ಸ್ ಸೇವೆಯನ್ನು ಮತ್ತಷ್ಟು ಬಲಪಡಿಸಲು ಸರ್ಕಾರ ಆದ್ಯತೆ ನೀಡಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಮೂಲೆಮೂಲೆಯ ಪ್ರಕಾರ ತುರ್ತು ಪರಿಸ್ಥಿತಿಯಲ್ಲಿ ರೋಗಿಗಳನ್ನು ಚಿಕಿತ್ಸಾ ಕೇಂದ್ರಕ್ಕೆ ಕರೆದೊಯ್ಯುವ ಗೋಲ್ಡನ್ ಅವರ್ ಅವಧಿಯನ್ನು 20 ನಿಮಿಷಗಳಿಗೆ ನಿಗದಿಪಡಿಸಲಾಗಿದೆ. ಆದರೆ ವಿವಿಧ ಕಾರಣಗಳಿಂದ ರಾಜ್ಯದಲ್ಲಿ ಈ ಅವಧಿಯೊಳಗೆ ರೋಗಿಗಳನ್ನು ಆಸ್ಪತ್ರೆಗೆ ತಲುಪಿಸುವುದು ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದರು.


ಈ ಸಮಸ್ಯೆಯನ್ನು ನಿವಾರಿಸಲು ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗುತ್ತಿದ್ದು, ಇನ್ನು ಮುಂದೆ 10 ನಿಮಿಷಗಳ ಪ್ಲಾಟಿನಂ ಅವರ್ ಗುರಿಯನ್ನು ಹೊಂದಲಾಗಿದೆ. ಆಂಬುಲೆನ್ಸ್ ರೋಗಿಯ ಬಳಿ ತಲುಪಿದ ತಕ್ಷಣವೇ ತುರ್ತು ಚಿಕಿತ್ಸೆ ಆರಂಭವಾಗುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಆಂಬುಲೆನ್ಸ್‌ಗಳಲ್ಲಿ ತರಬೇತಿ ಪಡೆದ ಶುಶ್ರೂಷಕರು ಹಾಗೂ ತಂತ್ರಜ್ಞರನ್ನು ನಿಯೋಜಿಸಲಾಗುವುದು, ರೋಗಿಗಳಿಗೆ ಸ್ಥಳದಲ್ಲೇ ಪ್ರಾಥಮಿಕ ಚಿಕಿತ್ಸೆ ದೊರೆಯಲಿದೆ ಎಂದು ಖಾದರ್ ವಿವರಿಸಿದರು.



ಜನೌಷಧ ಕೇಂದ್ರಗಳಲ್ಲಿ ಬ್ರ್ಯಾಂಡೆಡ್ ಔಷಧ ಗಳ ಮಾರಾಟದ ಕುರಿತು ಪ್ರತಿಕ್ರಿಯಿಸಿದ ಸಚಿವರು, ಯಾವುದೇ ಖಾಸಗಿ ಕಂಪನಿಯ ಔಷಧಗಳನ್ನು ನೇರವಾಗಿ ಮಾರಾಟ ಮಾಡಲು ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದರು. ಆರೋಗ್ಯ ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿರುವ ಮಾನದಂಡ ಗಳಿಗೆ ಅನುಗುಣವಾಗಿ ಮಾತ್ರ ಔಷಧಗಳ ಮಾರಾಟ ನಡೆಯಬೇಕು. ಜನೌಷಧ ಕೇಂದ್ರಗಳಲ್ಲಿ ಕಡಿಮೆ ಬೆಲೆಗೆ ಔಷಧಗಳು ದೊರೆಯುತ್ತವೆ ಎಂಬ ಕಾರಣವನ್ನು ದುರುಪಯೋಗಪಡಿಸಿಕೊಂಡು, ಸರ್ಕಾರದ ಮಾನದಂಡಗಳಿಗೆ ಹೊಂದಿಕೆಯಾಗದ ಔಷಧಗಳನ್ನು ಮಾರಾಟ ಮಾಡಿ ಸಾರ್ವಜನಿಕರನ್ನು ತಪ್ಪುದಾರಿಗೆಳೆಯುವ ಕೆಲಸ ನಡೆಯಬಾರದು ಎಂದು ಎಚ್ಚರಿಸಿದರು. ರಾಜ್ಯದ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವ ಜತೆಗೆ ಜನರಿಗೆ ತ್ವರಿತ ಹಾಗೂ ಸುರಕ್ಷಿತ ವೈದ್ಯಕೀಯ ನೆರವು ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಅಕ್ರಮ ತನಿಖೆ ಮಾಡಲು ಎಸ್‌ಐಟಿ ರಚಿಸಿ: ಅಶೋಕ್

• **ಬೆಂಗಳೂರು:** ಗೃಹಲಕ್ಷ್ಮಿ ಯೋಜನೆಯಲ್ಲಿ 225 ಕೋಟಿ ರೂ. ಸರ್ಕಾರಿ ಹಣ ಲೂಟಿ ನಡೆದಿದ್ದು, ಇದರ ಹಿಂದೆ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಕೈವಾಡ ಇದೆ. ಈ ಅಕ್ರಮದ ವಿರುದ್ಧ ತನಿಖೆ ಮಾಡಲು ಕೂಡಲೇ ಎಸ್‌ಐಟಿ ರಚಿಸಬೇಕೆಂದು ವಿಪಕ್ಷ ನಾಯಕ ಆರ್. ಅಶೋಕ್ ಆಗ್ರಹಿಸಿದರು. ವಿಧಾನಸೌಧದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, 225 ಕೋಟಿ ರೂ. ಅಕ್ರಮ ಆಗಿದೆ ಎಂದು ಸಿಐಡಿ ವರದಿಯಲ್ಲಿ ಹೇಳಲಾಗಿದೆ. ಯಾವುದೇ ಕ್ರಮ ಜರುಗಿಸಿಲ್ಲ. ನಕಲಿ ಖಾತೆಗಳಿಗೆ ಹಣ ಸಂದಾಯವಾಗಿದ್ದು, ಅಧಿಕಾರಿ ಹಾಗೂ ರಾಜಕಾರಣಿಗಳ ದೊಡ್ಡ ಗ್ಯಾಂಗ್ ಇದರ ಹಿಂದಿದೆ. ಸತ್ತವರ ಹೆಸರಿಗೆ ಹಣ ಹೋಗಿದೆ ಎಂದರೆ ಕಂದಾಯ ಇಲಾಖೆ ಸತ್ತ ಪರಿಶೀಲನೆ ಮಾಡಿಲ್ಲ ಎಂದು ಪ್ರಶ್ನಿಸಿದರು.



ಕರ್ನಾಟಕ ಏಟಿ ರಾಜ್ಯ ಎಂದು ಹೆಸರಾಗಿದ್ದರೂ ರಾಜ್ಯ ಸರ್ಕಾರಕ್ಕೆ ಸತ್ತವರ ಹೆಸರಿಗೆ ಹಣ ಹೋಗುವುದನ್ನು ತಪ್ಪಿಸಲು ಸಾಧ್ಯವಾಗಿಲ್ಲ. ಬೆಳೆಯ ಸಾಫ್ಟ್‌ವೇರ್ ತಯಾರಿ ಮಾಡಿ ಸತ್ತವರ ಹೆಸರಲ್ಲಿ ಹಣ ಲೂಟಿ ಮಾಡಲಾಗಿದೆ. ಇದು ಅತಿ ದೊಡ್ಡ ಸೈಬರ್ ಕ್ರೈಂ ಆಗಿದ್ದು, ಇದರ ತನಿಖೆಗೆ ಎಸ್‌ಐಟಿ ರಚಿಸಬೇಕು. 2.11 ಲಕ್ಷ ಫಲಾನುಭವಿಗಳು ಸತ್ತಿದ್ದಾರೆಂದು ಗೊತ್ತಾಗಿದೆ. ಇನ್ನೂ 77,000 ಜನರ ದಾಖಲೆ ಪತ್ತೆಯಾಗಿಲ್ಲ, ಈಗಾಗಲೇ 5,000 ಕೋಟಿ ರೂ. ನುಂಗಿದ್ದು, ಈಗ ಮತ್ತೆ ಹಗರಣ ನಡೆದಿದೆ. ಕಾಂಗ್ರೆಸ್‌ನ ನಿರ್ಲಕ್ಷ್ಯತನದಿಂದ ಹುದ್ದೆಗೆ ಕೊಡಬೇಕಾದ್ದ ಗ್ಯಾರಂಟಿ ಸಮಿತಿ ರಚಿಸಿ ಅದಕ್ಕೆ 150 ಕೋಟಿ ರೂ. ಖರ್ಚು ಮಾಡಲಾಗುತ್ತಿದೆ. ಈ ಸಮಿತಿ ಅಕ್ರಮ ತಡೆದಿಲ್ಲ, ಇವರೇ ಅಕ್ರಮಗಳ ಸರದಾರರು ಎಂದು ಆರೋಪಿಸಿದರು.

ತ್ವರಿತಗತಿ ತನಿಖೆಗೆ ವಿಹಿಂಪ ಆಗ್ರಹ

ಪುತ್ತೂರು: ತ್ವರಿತಗತಿ ನ್ಯಾಯಾಲಯ ಪ್ರಕರಣವನ್ನು ಕೈಗೆತ್ತಿಕೊಂಡು ವಿಚಾರಣೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣವಾದ ಶಿಕ್ಷೆಯಾಗಬೇಕು ಎಂದು ತಿಳಿಸಿದ್ದಾರೆ. ತ್ವರಿತಗತಿ ನ್ಯಾಯಾಲಯದಲ್ಲಿ ದಿನನಿತ್ಯವೂ ವಿಚಾರಣೆ ನಡೆಸಿ, ನಾಲ್ಕು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಬೇಕು. ಯಾವುದೇ ವಿಳಂಬವಿಲ್ಲದೆ ತಪ್ಪಿತಸ್ಥರಿಗೆ ಶಿಕ್ಷೆಯನ್ನು ನೀಡಬೇಕೆಂದು ಅಲೋಕ್ ಕುಮಾರ್ ಅವರು ಹೇಳಿದ್ದಾರೆ.

ಪ್ರಾಥಮಿಕ ವರದಿ ಸಲ್ಲಿಸಿದ ಎಸ್‌ಐಟಿ: ರಾಮ ಮಂದಿರ ದೇಣಿಗೆ ದುರುಪಯೋಗ ಪ್ರಕರಣವನ್ನು ವಿಶೇಷ ತನಿಖಾ ತಂಡ(ಎಸ್‌ಐಟಿ) ಪ್ರಾಥಮಿಕ ತನಿಖಾ ವರದಿಯನ್ನು ಉತ್ತರಪ್ರದೇಶ ಸರ್ಕಾರಕ್ಕೆ ಮಂಗಳವಾರ ಸಲ್ಲಿಸಿದೆ. ಎಸ್‌ಐಟಿ ತನಿಖೆ ಇನ್ನೂ ಪ್ರಗತಿಯಲ್ಲಿದ್ದು, ಇನ್ನಷ್ಟು ಮಾಹಿತಿಗಳನ್ನು ಕಲೆ ಹಾಕುವುದು ಬಾಕಿಯಿದೆ. ಮುಂದಿನ 100ರಿಂದ 15 ದಿನಗಳಲ್ಲಿ ಅಂತಿಮ ವರದಿಯನ್ನು ಸಲ್ಲಿಸುವುದಾಗಿ ಎಸ್‌ಐಟಿ ಅಧಿಕಾರಿಗಳು ಹೇಳಿದ್ದಾರೆ. ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರಪ್ರದೇಶ ಸರ್ಕಾರ ಜೂ.13 ರಂದು ಎಸ್‌ಐಟಿ ತನಿಖೆಗೆ ಆದೇಶಿಸಿತ್ತು.

ಲಿಂಗತ್ವ ಅಲ್ಪಸಂಖ್ಯಾತರು ಗೃಹಲಕ್ಷ್ಮಿ ಫಲಾನುಭವಿಗಳು

• **ಬೆಂಗಳೂರು:** ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ವಿತರಿಸುವ ಅಂತ್ಯೋದಯ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿರುವ ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಗೃಹಲಕ್ಷ್ಮಿ ಯೋಜನೆ ಅರ್ಹ ಫಲಾನುಭವಿಯಾಗಿದ್ದಾರೆ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ.

ಗೃಹಲಕ್ಷ್ಮಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸ್ಪಷ್ಟೀಕರಣ ನೀಡಿದೆ. ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಮತ್ತು ಜಿಎಸ್‌ಟಿ ರಿಟರ್ನ್ ಸಲ್ಲಿಸುವವರಾಗಿದ್ದಲ್ಲಿ ಅಂತಹ ಮಹಿಳೆಯರು ಈ ಯೋಜನೆಗೆ ಅರ್ಹರಾಗಿರುವುದಿಲ್ಲ. ನೋಂದಣಿಯಾದ ಫಲಾನುಭವಿಗಳ ಪೈಕಿ ಈವರೆಗೆ ಆದಾಯ ತೆರಿಗೆ ಪಾವತಿದಾರರು ಮತ್ತು ಜಿಎಸ್‌ಟಿ ರಿಟರ್ನ್ ಸಲ್ಲಿಸುತ್ತಿರುವ ಒಟ್ಟು 1,94,560 ಮಹಿಳೆಯರಿದ್ದಾರೆ ಎಂದು ತಿಳಿಸಿದೆ.

ಏಪ್ರಿಲ್ 2026ರ ಅಂತ್ಯಕ್ಕೆ 1,30,35,318 ಫಲಾನುಭವಿಗಳು ಯಶಸ್ವಿಯಾಗಿ ನೋಂದಣಿ ಮಾಡಿಕೊಂಡಿದ್ದಾರೆ. ಈ ಪೈಕಿ ಇತರೆ 95,66,679 ಫಲಾನುಭವಿಗಳು, ಪರಿಶಿಷ್ಟ ಜಾತಿಯ 24,95,604 ಫಲಾನುಭವಿಗಳು ಹಾಗೂ ಪರಿಶಿಷ್ಟ ಪಂಗಡದ 9,73,035 ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಬಿಡುಗಡೆ ಮಾಡುವ ಅನುದಾನದಂತೆ ಇಲಾಖೆಯಿಂದ ಗೃಹಲಕ್ಷ್ಮಿ ಯೋಜನೆ ಯ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಧನಸಹಾಯ ಪಾವತಿಸಲಾಗುತ್ತಿದೆ. ಪ್ರತಿ ತಿಂಗಳು ನೋಂದಣಿಯಾದ ಫಲಾನುಭವಿಗಳಿಗೆ ಧನಸಹಾಯ ಪಾವತಿಗೂ ಮುನ್ನ ನೋಂದಣಿಯಾದ ಫಲಾನುಭವಿ ಹಾಗೂ ಅವರ ಪತಿ ಆದಾಯ ತೆರಿಗೆ ಪಾವತಿದಾರರೇ ಮತ್ತು ಜಿಎಸ್‌ಟಿ ಪಾವತಿದಾರರೇ ಎಂಬ ಬಗ್ಗೆ ಆದಾಯ ತೆರಿಗೆ ಇಲಾಖೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಯು ನೀಡಿರುವ ಎಪಿಐ ಮೂಲಕ ಕುಟುಂಬ ತಂತ್ರಾಂಶದಲ್ಲಿ ಲಭ್ಯವಾಗುವ ಮಾಹಿತಿ ಪರಿಶೀಲಿಸಲಾಗುತ್ತದೆ.



ತುಂಗಭದ್ರಾ ಜಲಾಶಯದ 33 ಕ್ರಸ್ಟ್ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು.

27 ವಾರ್ಡ್‌ಗಳಲ್ಲಿ ಎಸ್‌ಐಆರ್ ಕಾನೂನು ಬಾಹಿರ: ಛಲವಾದಿ

• **ಬೆಂಗಳೂರು:** ರಾಜ್ಯದ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಾಗಿ ರಾಜ್ಯ ಚುನಾವಣಾ ಆಯೋಗವು ಬೆಂಗಳೂರಿನ 27 ವಾರ್ಡ್‌ಗಳಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸುತ್ತಿದೆ. ಇದು ಕಾನೂನು ಬಾಹಿರ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ಷೇಪಿಸಿದ್ದಾರೆ.



ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ದೂರು ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ಭಾರತ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದೆ. ಆದರೆ ಇದಕ್ಕೆ ಸಮಾನಾಂತರವಾಗಿ ರಾಜ್ಯ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದೆ. ಇದು ತಪ್ಪು. ಈ ಬಗ್ಗೆ ಕರ್ನಾಟಕ ಚುನಾವಣಾ ಆಯುಕ್ತ ಅನ್ಬುಕುಮಾರ್ ಅವರಿಗೆ ಮನವಿ ಸಲ್ಲಿಸಿರುವುದಾಗಿ ಹೇಳಿದರು.

ಅನಧಿಕೃತವಾಗಿ ಈ ರೀತಿ ಎಸ್‌ಐಆರ್ ನಡೆಸುವುದು ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ. ಒಬ್ಬರ ಹೆಸರು ಬೇರೆ ಬೇರೆ ಕ್ಷೇತ್ರಗಳಲ್ಲಿ ಹೆಸರು ಇದ್ದರೆ ಅದನ್ನು ಎಸ್‌ಐಆರ್‌ನಲ್ಲಿ ತೆಗೆಯಲಾಗುತ್ತದೆ. ಇಲ್ಲಿ ಪಕ್ಷಗಳ ಪ್ರಶ್ನೆ ಬರುವುದಿಲ್ಲ, ವ್ಯಕ್ತಿ ಮುಖ್ಯವಾಗುವುದಿಲ್ಲ. ಒಬ್ಬರ ಹೆಸರು ಒಂದೇ ಕಡೆ ಇರಬೇಕು ಎಂಬುದೇ ಇದರ ಪ್ರಮುಖ ಉದ್ದೇಶ ಎಂದು ವಿವರಿಸಿದರು. ಕೇಂದ್ರ ಚುನಾವಣಾ ಆಯೋಗವು ಕಾನೂನು ಪ್ರಕಾರ ಎಸ್‌ಐಆರ್ ನಡೆಸುತ್ತಿದೆ. ಆದರೆ, ತಮಗೆ ಬೇಕಾದವರ ಹೆಸರು ಉಳಿಸಲು ಹೀಗೆ ಎಸ್‌ಐಆರ್ ನಡೆಸಲಾಗುತ್ತಿದೆ ಎಂದು ದೂರಲಾಗುತ್ತಿದೆ. ಇದು ಸರಿಯಲ್ಲ, ಕೇಂದ್ರ ಚುನಾವಣಾ ಆಯೋಗದ ಅನುಮತಿ ಇಲ್ಲದೆ ಮತ್ತೊಂದು ಎಸ್‌ಐಆರ್ ಅನ್ನು ರಾಜ್ಯ ಚುನಾವಣಾ ಆಯೋಗ ಮಾಡುವಂತಿಲ್ಲ. ಆದರೆ, ಇಲ್ಲಿ ಕಾಂಗ್ರೆಸ್ ಸರ್ಕಾರ ಮಾಡಿಸುತ್ತಿದೆ. ತಕ್ಷಣ ಇದನ್ನು ಕೈಬಿಡಬೇಕು ಎಂದು ಮನವಿಯಲ್ಲಿ ಆಗ್ರಹಿಸಿರುವುದಾಗಿ ತಿಳಿಸಿದರು.

ಕಿರುಸುದ್ದಿ

ವಾರ್ತಾ ಆಯುಕ್ತರಾಗಿ ಅನುಚೇತ್ ಅಧಿಕಾರ ಸ್ವೀಕಾರ

• **ಬೆಂಗಳೂರು:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೂತನ ಆಯುಕ್ತರಾಗಿ ಐಪಿಎಸ್ ಅಧಿಕಾರಿ ಎಂ.ಎನ್.ಅನುಚೇತ್ ಅವರು ಗುರುವಾರ ಅಧಿಕಾರ ಸ್ವೀಕರಿಸಿದರು.



ಇದುವರೆಗೆ ಇಲಾಖೆಯ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಹೇಮಂತ್ ನಿಂಬಾಳ್ಕರ್ ಅವರು ಅಧಿಕಾರ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ನೂತನ ಆಯುಕ್ತರಿಗೆ ಶುಭಕೋರಿದರು. ಎಂ.ಎನ್. ಅನುಚೇತ್ ಅವರಿಗೆ ವಾರ್ತಾ ಇಲಾಖೆ ಜತೆಗೆ ಯುವ ಜನ ಸೇವೆ ಹಾಗೂ ಕ್ರೀಡಾ ಇಲಾಖೆಯ ಆಯುಕ್ತರ ಹೆಚ್ಚುವರಿ ಪ್ರಭಾರದಲ್ಲೂ ಇರಿಸಿ ಸರ್ಕಾರ ಆದೇಶಿಸಿದೆ. 2009ರ ಬ್ಯಾಚ್‌ನ ಕರ್ನಾಟಕ ವೃಂದದ ಐಪಿಎಸ್ ಅಧಿಕಾರಿಯಾಗಿರು ಎಂ.ಎನ್. ಅನುಚೇತ್ ಅವರು ಮೂಲತಃ ಕೋಲಾರ ಜಿಲ್ಲೆಯವರಾಗಿದ್ದಾರೆ. ಬೆಂಗಳೂರಿನ ಆರ್.ವಿ.ಇಂಜಿನಿಯರಿಂಗ್ ಕಾಲೇಜಿನಿಂದ 2006ರಲ್ಲಿ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಮುಗಿಸಿರುವ ಇವರು ತಾಂತ್ರಿಕ ಹಿನ್ನೆಲೆಯನ್ನು ಹೊಂದಿದ್ದಾರೆ. ವಾರ್ತಾ ಇಲಾಖೆಯ ಕಾರ್ಯವೈಖರಿಗೆ ಹೊಸ ವೇಗ ನೀಡಬಲ್ಲ ಸಾಮರ್ಥ್ಯ ಹೊಂದಿರುವ ಅನುಚೇತ್ ಅವರು, ಪೊಲೀಸ್ ಇಲಾಖೆಯಲ್ಲಿ ತಂತ್ರಜ್ಞಾನ ಆಧಾರಿತ ಪೊಲೀಸ್ ವ್ಯವಸ್ಥೆ ಹಾಗೂ ಸಮರ್ಥ ಆಡಳಿತಕ್ಕಾಗಿ ಹೆಸರಾಗಿದ್ದಾರೆ.

ಟೌನ್‌ಶಿಪ್: ಸಿಎಂಗೆ ಮತ್ತೊಂದು ಪತ್ರ ಬರೆದ ಎಚ್ಡಿಕೆ

• **ರಾಮನಗರ:** ಬಿಡದಿ ಉಪನಗರ ಯೋಜನೆಗೆ ಸಂಬಂಧಿಸಿದಂತೆ ಚರ್ಚಿಸಲು ಬೈರಮಂಗಲಕ್ಕೆ ಬರುವಂತೆ ಕೋರಲಾಗಿದ್ದ ಪತ್ರಕ್ಕೆ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿಗಳಿಂದ ಯಾವುದೇ ಪ್ರತ್ಯುತ್ತರ ಬಾರದ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮತ್ತೊಂದು ಪತ್ರವನ್ನು ಮುಖ್ಯಮಂತ್ರಿಗಳಿಗೆ ಬರೆದಿದ್ದಾರೆ. ನೊಂದ ರೈತರ ಸಮ್ಮುಖದಲ್ಲಿಯೇ ಚರ್ಚೆ ನಡೆಯಬೇಕು ಎಂಬ ತಮ್ಮ ನಿಲುವಿಗೆ ಬದ್ಧರಾಗಿರುವ ಕೇಂದ್ರ ಸಚಿವರು, ತಮ್ಮ ಅಧಿಕಾರಿಗಳೊಂದಿಗೆ ಬೈರಮಂಗಲಕ್ಕೆ ಬರುವಂತೆ ಮುಖ್ಯಮಂತ್ರಿಗಳನ್ನು ಮತ್ತೊಮ್ಮೆ ಕೋರಿದ್ದಾರೆ. ಈ ಸಂಬಂಧ ಗುರುವಾರ ಮುಖ್ಯಮಂತ್ರಿಗಳಿಗೆ ಮತ್ತೊಂದು ಪತ್ರವನ್ನು ಬರೆದಿರುವ ಸಚಿವರು, ತಮ್ಮಿಂದ ಉತ್ತರದ ನಿರೀಕ್ಷೆಯಲ್ಲಿ ಇದ್ದೇನೆ ಎಂದು ತಿಳಿಸಿದ್ದಾರೆ.

ಮಗುವಿನೊಂದಿಗೆ ಬಾವಿಗೆ ಹಾರಿ ಗರ್ಭಿಣಿ ಆತ್ಮಹತ್ಯೆ

• **ಕಲಬುರಗಿ:** ಒಂದೂವರೆ ವರ್ಷದ ಮಗುವಿನೊಂದಿಗೆ ನಾಲ್ಕು ತಿಂಗಳ ಗರ್ಭಿಣಿಯೊಬ್ಬರು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಹೃದಯವಿದ್ರಾವಕ ಘಟನೆ ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಚಿಂಚನಸೂರ್ ಗ್ರಾಮದಲ್ಲಿ ನಡೆದಿದೆ. ಅಂಬಿಕಾ (25) ಎಂಬ ಮಹಿಳೆ ತನ್ನ ಒಂದೂವರೆ ವರ್ಷದ ಪುತ್ರ ಆರಾಧ್ಯನೊಂದಿಗೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂಬಿಕಾ ಅವರು ನಾಲ್ಕು ತಿಂಗಳ ಗರ್ಭಿಣಿಯಾಗಿದ್ದರು ಎಂದು ತಿಳಿದುಬಂದಿದೆ. ಮೂರು ವರ್ಷಗಳ ಹಿಂದೆ ಅಂಬಿಕಾ ಅವರು ವೀರಭದ್ರಪ್ಪ ಅವರೊಂದಿಗೆ ವಿವಾಹವಾಗಿದ್ದರು. ಮಂಗಳವಾರ ಬೆಳಗ್ಗೆ ಅಂಬಿಕಾ ಅವರು ಮನೆಯಿಂದ ಹೊರಟು ಹೋಗಿದ್ದು, ಮಗುವನ್ನು ಬಟ್ಟೆಯಿಂದ ತನ್ನ ಹೊಟ್ಟೆಗೆ ಕಟ್ಟಿಕೊಂಡು ಗ್ರಾಮದ ಹೊರವಲಯದ ಬಾವಿಗೆ ಹಾರಿದ್ದಾರೆ ಎನ್ನಲಾಗಿದೆ.

ತುಂಗಭದ್ರಾ ಜಲಾಶಯದ 33 ಕ್ರಸ್ಟ್ ಗೇಟುಗಳ ಲೋಕಾರ್ಪಣೆ

ಒಮ್ಮತದ ಐತಿಹಾಸಿಕ ನಿರ್ಧಾರ

• **ಕೊಪ್ಪಳ:** ತುಂಗಭದ್ರಾ ನದಿ ಪಾತ್ರದ ರೈತರ ಹಿತರಕ್ಷಣೆಗೆ ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ಮೂರೂ ರಾಜ್ಯಗಳು ಸೇರಿ ಒಮ್ಮತದ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ಕೊಪ್ಪಳ ಜಿಲ್ಲೆ ಮುನಿರಾಬಾದ್ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ತುಂಗಭದ್ರಾ ಅಣೆಕಟ್ಟೆಯ 33 ಕ್ರಸ್ಟ್ ಗೇಟುಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಇದು ದಕ್ಷಿಣ ಭಾರತದ ಐತಿಹಾಸಿಕ ಕಾರ್ಯಕ್ರಮ. 19ನೇ ಗೇಟ್ ತುಂಡರಿಸಿದಾಗ ಈ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಶಿವರಾಜ ತಂಗಡಗಿ ಹಾಗೂ ಅಧಿಕಾರಿಗಳು ಮಧ್ಯರಾತ್ರಿ ನನಗೆ ಕರೆ ಮಾಡಿ, ಅಣೆಕಟ್ಟು ನಡುಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ನಾನು ಅಂದು ಬೆಳಗ್ಗೆ 8ಗಂಟೆಗೆ ಸ್ಥಳಕ್ಕೆ ಭೇಟಿ ನೀಡಿದೆವು. ತಕ್ಷಣವೇ ಏನು ಮಾಡಬೇಕು ಎಂದು ತಜ್ಞರೊಂದಿಗೆ ಚರ್ಚಿಸಿ ಒಂದೇ ವಾರದಲ್ಲಿ ಗೇಟ್ ಬದಲಾವಣೆ ಮಾಡಲಾಯಿತು. ಆ ಮೂಲಕ ಈ ಭಾಗದ ರೈತರನ್ನು ರಕ್ಷಣೆ ಮಾಡಲಾಯಿತು ಎಂದು ತಿಳಿಸಿದರು.

ಒಂದು ತಾಸು ಚರ್ಚಿಸಿ, ಐತಿಹಾಸಿಕ ತೀರ್ಮಾನ: ಈ ಅಣೆಕಟ್ಟಿನ 33 ಟಿಎಂಸಿ ನೀರನ್ನು ಉಳಿಸುವ ಬಗ್ಗೆ ರೈತ ಮುಖಂಡರು ಸಲ್ಲಿಸಿರುವ ಮನವಿ ಸೇರಿದಂತೆ ಯಾವ ರೀತಿ ರಕ್ಷಿಸಿ, ರೈತ ಕುಟುಂಬಗಳನ್ನು ಕಾಪಾಡಬೇಕು ಎಂದು ನಾವು ಚರ್ಚೆ ಮಾಡಿದ್ದೇವೆ. ನವಲಿ ಸಮನಾಂತರ ಜಲಾಶಯ, ಹೂಳೆತ್ತುವ ವಿಚಾರ ಸೇರಿದಂತೆ ಎಲ್ಲ ಅವಕಾಶಗಳ ಬಗ್ಗೆ ಸುದೀರ್ಘ ಚರ್ಚೆ ಮಾಡಿ ನಾವೆಲ್ಲರೂ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ. ಈ ತೀರ್ಮಾನವನ್ನು ಕೇಂದ್ರ ಸಚಿವರೇ ಪ್ರಕಟಿಸಲಿದ್ದಾರೆ.



> ನಮ್ಮ ಭಾಗದ ಕುಡಿಯುವ ಹಾಗೂ ಕೃಷಿ ನೀರಿನ ಸಮಸ್ಯೆಯಿಂದಾಗಿ ಜನರು ಜಿಲ್ಲೆ, ರಾಜ್ಯ ದಾಟಿ ವಲಸೆ ಹೋಗುವ ಪರಿಸ್ಥಿತಿ ಇದೆ. ಆದರೆ, ನಮಗೆ ಸಿಗಬೇಕಾದ ನೀರು ಸಮುದ್ರ ಪಾಲಾಗುತ್ತಿದೆ. ರಾಜಕೀಯವನ್ನು ಬದಿಗಿಟ್ಟು, ಈ ಭಾಗದ ರೈತಾಪಿ ವರ್ಗದ ಹಿತದೃಷ್ಟಿಯಿಂದ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಲು ನಿರ್ಧರಿಸಿದ್ದೇವೆ.
> ■ **ರೇವಂತ್ ರೆಡ್ಡಿ**, ತೆಲಂಗಾಣ ಮುಖ್ಯಮಂತ್ರಿ

ಇಂದು ನಾವು ಒಂದು ತಾಸುಗಳ ಕಾಲ ಮಾಡಿರುವ ಚರ್ಚೆ ದೇಶದ ನೀರಾವರಿ ಹಾಗೂ ಒಕ್ಕೂಟ ವ್ಯವಸ್ಥೆಯಲ್ಲಿ ಇತಿಹಾಸದ ಪುಟಕ್ಕೆ ಸೇರಲಿದೆ. ನಮ್ಮ ನೀರು, ನಮ್ಮ ಹಕ್ಕು ಆಶಯದ ಅಡಿ ಮೂರು ರಾಜ್ಯಗಳ ರೈತರ ರಕ್ಷಣೆಗೆ ನಾವು ಐತಿಹಾಸಿಕ ತೀರ್ಮಾನ ಕೈಗೊಂಡಿದ್ದೇವೆ.

ರೈತರಿಗಾಗಿ ದೃಢ ತೀರ್ಮಾನ: ರೈತನಿಗೆ ಸಂಬಳವಿಲ್ಲ, ಭಡ್ತಿ ಇಲ್ಲ, ಪಿಂಚಣಿ ಇಲ್ಲ, ರಜೆಯೂ ಇಲ್ಲ ಹಾಗೂ ನಿವೃತ್ತಿಯೂ ಇಲ್ಲ. ಇಂತಹ ಕಷ್ಟದ ಪರಿಸ್ಥಿತಿಯಲ್ಲೂ ದೇಶಕ್ಕೆ ಅನ್ನ ನೀಡುವ ರೈತನ ಬದುಕನ್ನು ಉಳಿಸಬೇಕು ಮತ್ತು ಈ ಭಾಗದ ಭತ್ತದ ಕಣಜವನ್ನು ಕಾಪಾಡಬೇಕು ಎಂಬ ದೃಢ ತೀರ್ಮಾನವನ್ನು ನಿಮ್ಮೆಲ್ಲರ ಆಶೀರ್ವಾದದೊಂದಿಗೆ ನಾವು ತೆಗೆದುಕೊಂಡಿದ್ದೇವೆ ಎಂದರು.

> ದೇಶದ ಎಲ್ಲ ನದಿಗಳನ್ನು ಜೋಡಿಸುವುದೊಂದೇ ಇರುವ ಏಕೈಕ ಮಾರ್ಗವಾಗಿದೆ. ಹೆಚ್ಚುವರಿ ನೀರಿರುವ ನದಿಗಳಿಂದ ಕೊರತೆಯಿರುವ ನದಿಗಳಿಗೆ ನೀರನ್ನು ಹರಿಸುವ ಮೂಲಕ ಬರಗಾಲವನ್ನು ಸಮರ್ಥವಾಗಿ ಎದುರಿಸಬಹುದು. ಇದರಿಂದ ರಾಜ್ಯಗಳ ನಡುವಿನ, ಜಿಲ್ಲೆಗಳ ನಡುವಿನ ಹಾಗೂ ರೈತರ ನಡುವಿನ ನೀರಿನ ಸಂಘರ್ಷ ಸಂಪೂರ್ಣವಾಗಿ ತಡೆಯಬಹುದು.
> ■ **ಚಂದ್ರಬಾಬು ನಾಯ್ಡು**, ಆಂಧ್ರ ಪ್ರದೇಶ ಸಿಎಂ

ಅಂತಾರಾಜ್ಯ ಸಹಕಾರಕ್ಕೆ ಶ್ಲಾಘನೆ: ಹಿಂದೆ ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳ ನಡುವೆ ನೀರು ಹಂಚಿಕೆ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಆದರೆ, ಇಂದು ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಒಂದೇ ವೇದಿಕೆಗೆ ಬಂದು ಒಗ್ಗಟ್ಟು ಪ್ರದರ್ಶಿಸಿರುವುದನ್ನು ಸಚಿವರು ಮುಕ್ತ ಕಂಠದಿಂದ ಶ್ಲಾಘಿಸಿದರು. ಯಾವುದೇ ಆಕ್ಷೇಪಣೆಗಳಿಲ್ಲದೆ, ಪರಸ್ಪರ ಸಹಕಾರ ಹಾಗೂ ಆರ್ಥಿಕ ನೆರವು ನೀಡಿದ್ದರಿಂದಲೇ ತುಂಗಭದ್ರಾ ಜಲಾಶಯಕ್ಕೆ ಕೇವಲ ಕೆಲವೇ ದಿನಗಳಲ್ಲಿ ನೂತನ ಗೇಟುಗಳನ್ನು ಅಳವಡಿಸಲು ಸಾಧ್ಯವಾಯಿತು ಎಂದು ಕೇಂದ್ರ ಸಚಿವ ಸಿ.ಆರ್.ಪಾಟೀಲ ಸ್ಮರಿಸಿದರು.

ಖಾಲಿ ಹುದ್ದೆಗಳಿಗೆ ತ್ವರಿತ ನೇಮಕಾತಿ

• **ಬೆಂಗಳೂರು:** ಕರ್ನಾಟಕ ಸರ್ಕಾರವು ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಮಹತ್ವದ ಆದೇಶ ಹೊರಡಿಸಿದೆ. ಒಟ್ಟು 72,186 ಹುದ್ದೆಗಳ ನೇಮಕಾತಿಗೆ ಅನುಮೋದನೆ ನೀಡಲಾಗಿದ್ದು, ಈ ಕುರಿತು ಉನ್ನತ ಮಟ್ಟದ ಅಧಿಕಾರಿಗಳಿಗೆ ಮೇಲುಸ್ತುವಾರಿ ಜವಾಬ್ದಾರಿ ನೀಡಲಾಗಿದೆ.

2023–24ನೇ ಸಾಲಿನಿಂದ ಇಲ್ಲಿಯವರೆಗೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 40,009 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಸಹಮತಿ ನೀಡಿದೆ. ಕಲ್ಯಾಣ–ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 32,177 ಹುದ್ದೆಗಳ ಪೈಕಿ ಶೇ. 80ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಕಳೆದ ವಾರ ನಡೆದ ಸಂಪುಟದಲ್ಲಿ ಅನುಮತಿಸಲಾಗಿತ್ತು.

ಈ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಆಯ್ಕೆ ಪ್ರಾಧಿಕಾರಗಳಿಂದ ಕ್ರಿಯಾ ಯೋಜನೆಗಳನ್ನು ಪಡೆದು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲಾಗಿತ್ತು. ಸಚಿವ ಸಂಪುಟವು ಈ ಪ್ರಕ್ರಿಯೆಗೆ ಅನುಮೋದನೆ ನೀಡಿದೆ.

17 ಇಲಾಖೆಗಳಲ್ಲಿನ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತಗತಿಯಲ್ಲಿ ಭರ್ತಿ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಿಗೆ ಜವಾಬ್ದಾರಿ ನೀಡಲಾಗಿದೆ.

34 ಇಲಾಖೆಗಳಲ್ಲಿನ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗೆ ಜವಾಬ್ದಾರಿ ನೀಡಲಾಗಿದೆ. ನೇಮಕಾತಿ ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕವಾಗಿದ್ದು, ಯಾವುದೇ ರೀತಿಯ ಅಕ್ರಮ ಅಥವಾ ಅಸಮರ್ಪಕತೆ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತದೆ.

6 ತಿಂಗಳಲ್ಲಿ ನೇಮಕಾತಿ ಪೂರ್ಣಗೊಳಿಸಿ

ಎಲ್ಲಾ ನೇರ ನೇಮಕಾತಿ ಹುದ್ದೆಗಳಿಗೆ ಮುಂದಿನ ಎರಡು ತಿಂಗಳುಗಳಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಲು ಸೂಚಿಸಲಾಗಿದೆ. ಮುಂದಿನ ನಾಲ್ಕು ತಿಂಗಳುಗಳಲ್ಲಿ ನೇಮಕಾತಿ ಪರೀಕ್ಷೆಗಳನ್ನು ನಡೆಸಿ, ಆರು ತಿಂಗಳುಗಳಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ನೇಮಕಾತಿ ಆದೇಶಗಳನ್ನು ಹೊರಡಿಸಲು ಸರ್ಕಾರ ಸೂಚಿಸಿದೆ.



ಪ್ರಸ್ತುತ ರಾಜ್ಯದಲ್ಲಿದೆ ನೀರಿಗೆ ಅಭಾವ: ಬಿ.ವೈ.ರಾಘವೇಂದ್ರ

• **ಶಿವಮೊಗ್ಗ:** ನಮ್ಮ ರಾಜ್ಯದಲ್ಲೇ ಕುಡಿಯಲು ಮತ್ತು ಕೃಷಿಗೆ ನೀರಿಲ್ಲದ ಪರಿಸ್ಥಿತಿ ಇರುವಾಗ, ನೆರೆ ರಾಜ್ಯಕ್ಕೆ ನೀರು ಬಿಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಸಂಸದ ಬಿ.ವೈ.ರಾಘವೇಂದ್ರ ಪ್ರತಿಕ್ರಿಯಿಸಿದ್ದಾರೆ. ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ತಮಿಳುನಾಡಿನವರು ಪ್ರತಿ ವರ್ಷ ಅವರ ಪಾಲಿನ ನೀರನ್ನು ಕೇಳುವುದು ಮಾಮೂಲಿಯಾಗಿದೆ. ಆದರೆ ಪ್ರಸ್ತುತ ನಮ್ಮಲ್ಲಿಯೇ ನೀರಿನ ಅಭಾವವಿದೆ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ನೀರು ಹರಿಸಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.



ಈ ಗಂಭೀರ ವಿಚಾರದಲ್ಲಿ ರಾಜ್ಯ ಸರ್ಕಾರ ಮತ್ತು ಅಡ್ವೋಕೇಟ್ ಜನರಲ್(ಎಜಿ) ಅವರು ತಕ್ಷಣ ಸಮಾಲೋಚನೆ ನಡೆಸಿ, ಬಲವಾದ ಕಾನೂನು ಹೋರಾಟದ ಮೂಲಕ ತಮಿಳುನಾಡಿನ ಹಠಾತ್ ಧೋರಣೆ ವಿರೋಧಿಸಬೇಕಿದೆ ಎಂದು ಆಗ್ರಹಿಸಿದರು. ಸಾಮಾನ್ಯವಾಗಿ ಪ್ರತಿ ವರ್ಷ ಮಳೆಗಾಲಕ್ಕೆ ಮುನ್ನ ಕರ್ನಾಟಕ, ತ.ನಾಡು ನಡುವೆ ನೀರಿನ ಹಂಚಿಕೆ ಕುರಿತು ಚರ್ಚೆಗಳು, ಸಂಘರ್ಷಗಳು ಮುನ್ನೆಲೆಗೆ ಬರುತ್ತವೆ. ಈ ಪ್ರಕ್ರಿಯೆಯಲ್ಲಿ ಸುಪ್ರೀಂ ಕೋರ್ಟ್ ಹಾಗೂ ಕೇಂದ್ರ ಜಲ ಸಮಿತಿ ಕೂಡ ಮಧ್ಯಸ್ಥಿಕೆ ವಹಿಸಿ ನಿರ್ದೇಶನಗಳನ್ನು ನೀಡುತ್ತವೆ. ಆದರೆ ಪ್ರಸಕ್ತ ಸಾಲಿನಲ್ಲಿ ಕಾವೇರಿ ವಿವಾದ ದೊಡ್ಡಮಟ್ಟದ ಬಿಕ್ಕಟ್ಟಾಗಿ ಪರಿಣಮಿಸುವ ಮುನ್ಸೂಚನೆ ಸಿಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರಸ್ತುತ ತಮಿಳುನಾಡು ಸರ್ಕಾರ ಕೃಷ್ಣರಾಜಸಾಗರ ಜಲಾಶಯ ಹಾಗೂ ಅದರ ಸುತ್ತಮುತ್ತಲಿನ ಉಪ ಡ್ಯಾಂಗಳಲ್ಲಿರುವ ನೀರನ್ನು ತಕ್ಷಣ ಬಿಡಬೇಕು ಎಂದು ಹಠ ಹಿಡಿದಿರುವುದು ಆತಂಕ ಮೂಡಿಸಿದೆ ಎಂದರು.

ಸಿಎಂ ಸದ್ಯ ಅತಿ ಉತ್ಸಾಹದಿಂದ ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಈ ಕಾರ್ಯಕ್ರಮಕ್ಕೆ ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಸಹ ಆಗಮಿಸಿದ್ದಾರೆ. ಇಷ್ಟೆಲ್ಲಾ ಗಂಭೀರ ವಿದ್ಯಮಾನಗಳ ಮಧ್ಯೆ, ಕಾವೇರಿ ನದಿ ನೀರಿನ ರಕ್ಷಣೆ ಹಾಗೂ ತಮಿಳುನಾಡಿನ ಹಠಾತ್ ಬೇಡಿಕೆಯ ವಿರುದ್ಧ ಮುಖ್ಯಮಂತ್ರಿಗಳು ರಾಜ್ಯದ ಹಿತದೃಷ್ಟಿಯಿಂದ ಯಾವ ರೀತಿಯ ದೃಢ ತೀರ್ಮಾನ ಕೈಗೊಳ್ಳಲಿದ್ದಾರೆ ಎಂಬುದನ್ನು ನಾವು ಕಾದು ನೋಡುತ್ತಿದ್ದೇವೆ ಎಂದು ತಿಳಿಸಿದರು.

ಆರ್‌ಎಸ್‌ಎಸ್ ನಿಷೇಧಿಸಲು ಹೋರಾಟ: ಹರಿಪ್ರಸಾದ್

• **ಹುಬ್ಬಳ್ಳಿ:** ಮೂರು ಬಾರಿ ಈಗಾಗಲೇ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲಾಗಿತ್ತು. ನಮ್ಮ ಮುಂದಿನ ಹೋರಾಟ ಆರ್‌ಎಸ್‌ಎಸ್ ನಿಷೇಧಿಸುವುದಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ತಿಳಿಸಿದರು.

ನಗರದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಬಗ್ಗೆ ಗೃಹಸಚಿವ ಪ್ರಿಯಾಂಕ್ ಖರ್ಗೆ ನಿರಂತರ ಟೀಕೆ ಮಾಡುತ್ತಿರುವುದರಿಂದ ಅವರ ಗಮನ ಬೇರೆಡೆ ಸೆಳೆಯಲು ಬಿಜೆಪಿ ಭೂ ಹಗರಣದಲ್ಲಿ ಮಲ್ಲಿಕಾರ್ಜುನ ಖರ್ಗೆ ಭಾಗಿಯಾಗಿದ್ದಾರೆ ಎಂದು ಸುಳ್ಳು ಆರೋಪ ಮಾಡುತ್ತಿದೆ ಎಂದರು.

ನಾಲ್ಕು ಸಾವಿರ ಕೋಟಿ ಹಣವನ್ನು ಬಿಜೆಪಿ ಕೇಂದ್ರದಲ್ಲಿ ಬಂದ ಬಳಿಕ ಸಂಗ್ರಹಿಸಿದೆ. ನಮ್ಮದು ಬಡವರ ಪಕ್ಷವಾಗಿದ್ದು, ಖಜಾನೆಯಲ್ಲಿ 700 ಕೋಟಿ ಮಾತ್ರವಿದೆ. ಚೆಕ್ ಮೂಲಕವೇ ನಮ್ಮ ವ್ಯವಹಾರ ನಡೆಯುತ್ತವೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ತಮ್ಮನ್ನು ವಿರೋಧಿಸುವವರನ್ನು ಚುನಾವಣಾ ಆಯೋಗ ಮೂಲಕ ಮತದಾರರ ಪಟ್ಟಿಯಿಂದ ತೆಗೆದು ಹೊರಗಿಡುತ್ತಿದ್ದಾರೆ. ಎಸ್‌ಐಆರ್ ಬಗ್ಗೆ ನಮ್ಮ ವಿರೋಧವಿಲ್ಲ, ಆದರೆ, ನಿಜವಾದ ಯಾವೊಬ್ಬ ಮತದಾರನೂ ಪಟ್ಟಿಯಿಂದ ಬಿಟ್ಟು ಹೋಗಬಾರದು ಎನ್ನುವುದು ನಮ್ಮ ಉದ್ದೇಶ. ಈ ನಿಟ್ಟಿನಲ್ಲಿ ನಾವು ವಿಭಾಗ ಮಟ್ಟದಲ್ಲಿ ಜಾಗೃತಿ ಸಮಾವೇಶ ನಡೆಸುತ್ತಿದ್ದೇವೆ ಎಂದು ಹೇಳಿದರು. ಸಚಿವ ಸಂಪುಟ ವಿಸ್ತರಣೆಯಲ್ಲಿ ಯಾವುದೇ ಗೊಂದಲವಿಲ್ಲ, ಆದರೆ, ನಾವು ಸದ್ಯ ಎಸ್‌ಐಆರ್ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ನಿರತರಾಗಿದ್ದೇವೆ. ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಹಾಗೂ ಉಪ ಚುನಾವಣೆಗಳು ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ನಡೆಯುತ್ತದೆ ಎಂದರು.

ಪಿಂಚಣಿದಾರರ ಪರಿಶೀಲನೆ

• **ಬೆಂಗಳೂರು:** ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಪಾರದರ್ಶಕತೆ ಮತ್ತು ಅರ್ಹತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಮೊಬೈಲ್ ಆ್ಯಪ್ ಮೂಲಕ ಪರಿಶೀಲನೆ ಕೈಗೊಂಡಿದೆ.

ರಾಜ್ಯಾದ್ಯಂತ ಪ್ರಸ್ತುತ ಒಟ್ಟು 83,11,493 ಫಲಾನುಭವಿಗಳು ಪಿಂಚಣಿ ಪಡೆಯುತ್ತಿದ್ದು, ಇವರ ಪೈಕಿ ಪ್ರಾಥಮಿಕ ತಪಾಸಣೆಯಲ್ಲಿ 23,13,664 ಫಲಾನುಭವಿಗಳ ವಿವರಗಳು ಸಂದೇಹಾಸ್ಪದ ಎಂದು ಕಂಡು ಬಂದಿರುತ್ತದೆ. ಈ ಸಂದೇಹಾಸ್ಪದ ಖಾತೆಗಳನ್ನು ಸಂಯೋಜನೆ ಮೊಬೈಲ್ ಆ್ಯಪ್ ಮೂಲಕ ಪ್ರಸ್ತುತ ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ. ಮಂಜೂರಾತಿ ಸಮಯದಲ್ಲಿ ವಯಸ್ಸಿನ ದೃಢೀಕರಣದ ಬಗ್ಗೆ ತಪ್ಪು ಮತ್ತು ನಕಲಿ ದಾಖಲೆಗಳನ್ನು ನೀಡಿ ಕಾನೂನು ಬಾಹಿರವಾಗಿ ಪಿಂಚಣಿ ಪಡೆಯುತ್ತಿದ್ದ 91,152 ಅನರ್ಹ ಫಲಾನುಭವಿಗಳನ್ನು ಪತ್ತೆ ಹಚ್ಚಲಾಗಿದ್ದು, ಇವರ ಪಿಂಚಣಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಗೊಳಿಸಲು ತೀರ್ಮಾನಿಸಲಾಗಿದೆ.

> 91,152 ಅನರ್ಹ ಫಲಾನುಭವಿ ಪತ್ತೆ, ಪಿಂಚಣಿ ರದ್ದತಿಗೆ ತೀರ್ಮಾನ

ಗ್ರಾಮ ಆಡಳಿತ ಅಧಿಕಾರಿಗಳ ಪರಿಶೀಲನೆ ಸಮಯದಲ್ಲಿ ಯಾವುದೇ ಅಧಿಕೃತ ದಾಖಲೆಗಳನ್ನು ಹಾಜರುಪಡಿಸಲು ವಿಫಲರಾದ, ನೀಡಲಾದ ವಿಳಾಸದಲ್ಲಿ ವಾಸವಿಲ್ಲದವರಾಗೂ ಆದಾಯ ಪ್ರಮಾಣ ಪತ್ರ ಸಲ್ಲಿಸದ ಒಟ್ಟು 16,42,303 ಫಲಾನುಭವಿಗಳ ಪಿಂಚಣಿಯನ್ನು ಸದ್ಯ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ದಾಖಲೆಗಳ ಕೊರತೆಯಿಂದಾಗಿ ಪಿಂಚಣಿ ಸ್ಥಗಿತಗೊಂಡಿರುವ 16,42,303 ಫಲಾನುಭವಿಗಳಿಗೆ ಕಂದಾಯ ಇಲಾಖೆಯು ಸೂಕ್ತ ತಿಳುವಳಿಕೆ ಪತ್ರವನ್ನು ನೀಡಲು ಆದೇಶಿಸಿದೆ. ಸಂಬಂಧಪಟ್ಟ ತಹಶೀಲ್ದಾರರ ಮೂಲಕ ಇವರಿಗೆ ನೋಟಿಸ್ ನೀಡಿ, ತಮ್ಮ ಅರ್ಹತಾ ದಾಖಲೆಗಳನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶವನ್ನು ಕಲ್ಪಿಸಿಕೊಡಲಾಗಿದೆ. ಫಲಾನುಭವಿಗಳು ದಾಖಲೆಗಳನ್ನು ಪರಿಶೀಲಿಸಿದ ನಂತರ, ಅರ್ಹರಾಗಿದ್ದಲ್ಲಿ ಅಂತಹವರ ಪಿಂಚಣಿ ಸೌಲಭ್ಯವನ್ನು ತಕ್ಷಣವೇ ಮುಂದುವರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್‌ಗಳಿಗೆ ಕಂದಾಯ ಇಲಾಖೆಯು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

ಅರ್ಹರಿಗೆ ಪಿಂಚಣಿ ಪಾವತಿ: ಸಂದೇಹಾಸ್ಪದ ಎಂದು ಗುರುತಿಸಲಾಗಿದ್ದ ಖಾತೆಗಳ ಪೈಕಿ, ಗ್ರಾಮ ಆಡಳಿತ ಅಧಿಕಾರಿಗಳು ಸ್ಥಳದಲ್ಲೇ ಪರಿಶೀಲನೆ ನಡೆಸಿ ಅರ್ಹರೆಂದು ವರದಿ ಮಾಡಿದ 3,35,610 ಫಲಾನುಭವಿಗಳು ಸೇರಿದಂತೆ ರಾಜ್ಯದ ಒಟ್ಟು 63,04,554 ಅರ್ಹ ಫಲಾನುಭವಿಗಳಿಗೆ ಮೇ ತಿಂಗಳ ವರೆಗಿನ ಪಿಂಚಣಿಯನ್ನು ಯಶಸ್ವಿಯಾಗಿ ಪಾವತಿಸಲಾಗಿದೆ.

ಈ ಬಾರಿ 64.84 ಲಕ್ಷ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವ ಗುರಿ: ಆರೋಗ್ಯ ಸಚಿವ

ಪೋಲಿಯೊ ಮುಕ್ತ ಭಾರತ ಸಾಧನೆ ನಿರಂತರ

• **ಬೆಂಗಳೂರು:** ಪೋಲಿಯೊ ಮುಕ್ತ ಭಾರತದ ಸಾಧನೆಯನ್ನು ಮುಂದುವರಿಸುವ ಉದ್ದೇಶದಿಂದ ಆರೋಗ್ಯ ಇಲಾಖೆಯು ರಾಜ್ಯಾದ್ಯಂತ ಜೂ.28ರಂದು ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಬಾರಿ 64.84 ಲಕ್ಷ 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವ ಗುರಿ ಹೊಂದಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.

ಗುರುವಾರ ನಗರದ ಆರೋಗ್ಯಸೌಧದಲ್ಲಿ ಪೋಲಿಯೊ ಲಸಿಕೆ ಅಭಿಯಾನದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜೂ.28ರಂದು ಬೆಳಗ್ಗೆ 8 ಗಂಟೆಗೆ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು. ವಿಶೇಷವಾಗಿ ವಲಸೆ ಕಾರ್ಮಿಕರ ಮಕ್ಕಳು, ನಗರ ಸ್ಲಂ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳು, ಅಪಾಯದಂಚಿನ ಪ್ರದೇಶಗಳ ಮಕ್ಕಳು ಸೇರಿದಂತೆ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ಮಗುವಿಗೆ ಐದು ಡೋಸ್ ಓರಲ್ ಪೋಲಿಯೊ ವ್ಯಾಕ್ಸಿನ್ ಹಾಗೂ ಮೂರು ಡೋಸ್ ಇಂಜೆಕ್ಟಬಲ್ ಪೋಲಿಯೊ ವ್ಯಾಕ್ಸಿನ್ (ಐಪಿವಿ) ನೀಡಲಾಗುತ್ತಿದೆ. ಜತೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನದಲ್ಲಿ ಹೆಚ್ಚುವರಿ ರಕ್ಷಣೆಯಾಗಿ ಎರಡು ಹನಿ ಲಸಿಕೆ ನೀಡಲಾಗುತ್ತದೆ ಎಂದರು.



> ಪೋಲಿಯೊ ಮುಕ್ತ ಭಾರತ, ಪೋಲಿಯೊ ಮುಕ್ತ ಕರ್ನಾಟಕ ಎಂಬ ಗುರಿಯನ್ನು ಎಲ್ಲರೂ ಸೇರಿ ಸಾಧಿಸೋಣ. ಜೀವರಕ್ಷಕ ಎರಡು ಹನಿಗಳಿಂದ ಪೋಲಿಯೊ ವಿರುದ್ಧದ ನಮ್ಮ ನಿರಂತರ ಗೆಲುವನ್ನು ಮುಂದುವರಿಸೋಣ.
> ■ **ಯು.ಟಿ.ಖಾದರ್**, ಆರೋಗ್ಯ ಸಚಿವ

36 ಸಾವಿರಕ್ಕೂ ಹೆಚ್ಚು ಬೂತ್‌ಗಳ ಸ್ಥಾಪನೆ: ಈ ವರ್ಷದ ಪಲ್ಸ್ ಪೋಲಿಯೊ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದಲ್ಲಿ ಈ ವರ್ಷ 36,076 ಬೂತ್‌ಗಳನ್ನು ಸ್ಥಾಪಿಸಲಾಗಿದ್ದು, 988 ಸಂಚಾರಿ ತಂಡಗಳು ಹಾಗೂ 2,125 ಟ್ರಾನ್ಸಿಟ್ ತಂಡವು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ವಿತರಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ 1,14,213 ಲಸಿಕಾ ಕಾರ್ಯಕರ್ತರು ಮತ್ತು 7,197 ಮೇಲ್ವಿಚಾರಕರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಲಸಿಕಾ ಕೇಂದ್ರ ಪತ್ತೆಗೆ ಆ್ಯಪ್

ಪೋಲಿಯೊ ಮುಕ್ತ ಭಾರತ ನಿರ್ಮಿಸುವ ಸಲುವಾಗಿ ಎಲ್ಲ ತಾಯಂದಿರು ತಮ್ಮ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಿಸಬೇಕು. ಬೇರೆ ಯಾವುದೇ ರೀತಿಯ ಲಸಿಕೆ ಪಡೆಯುತ್ತಿದ್ದರೂ ಈ ಲಸಿಕೆಯನ್ನು ತಪ್ಪಿಸುವಂತಿಲ್ಲ. ಹತ್ತಿರದ ಲಸಿಕಾ ಕೇಂದ್ರ ಪತ್ತೆಗೆ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ನಿಯರ್ ಬೈ ವ್ಯಾಕ್ಸಿನೇಷನ್ ಸೆಂಟರ್ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಈ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಕೇಂದ್ರ ಹುಡುಕಬಹುದು ಎಂದರು.

ಪ್ರಕೃತಿ ವಿಕೋಪ ನಿರ್ವಹಣೆ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಪರಂ ಸಭೆ

ಸೂಪರ್ ಎಲ್ ನೀನೋ ಎದುರಿಸಲು ಸಜ್ಜಾಗಿ

• **ಬೆಂಗಳೂರು:** ರಾಜ್ಯದಲ್ಲಿ ಸಂಭವನೀಯ ಪ್ರಕೃತಿ ವಿಕೋಪಗಳು ಹಾಗೂ ಸೂಪರ್ ಎಲ್ ನೀನೋ ಪರಿಣಾಮದಿಂದ ಉಂಟಾಗಬಹುದಾದ ಬರ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಗುರುವಾರ ವಿಧಾನಸೌಧದಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಈವರೆಗೆ ಕೈಗೊಂಡಿರುವ ಅಗತ್ಯ ಕ್ರಮಗಳ ಕುರಿತು ಮಾಹಿತಿ ಪಡೆದರು. ಮಳೆ ಕೊರತೆ, ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಮಗ್ರವಾಗಿ ಚರ್ಚಿಸಿದರು. ಜಾಗತಿಕ ಹವಾಮಾನ ವೈಪರೀತ್ಯದ ಭಾಗವಾಗಿ ಸೂಪರ್ ಎಲ್ ನೀನೋ ಪರಿಣಾಮದಿಂದ ರಾಜ್ಯದಲ್ಲಿ ಉಂಟಾಗಬಹುದಾದ ಸಂಭವನೀಯ ಪರಿಣಾಮಗಳು, ಮಳೆಯ ಕೊರತೆಯಿಂದ ಜನರು ಎದುರಿಸಬಹುದಾದ ಸಮಸ್ಯೆಗಳು ಹಾಗೂ ರಾಜ್ಯದ ಕೆಲವು ಪ್ರದೇಶಗಳಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆಗಳ ಕುರಿತು ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದರು.

> 122 ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 139 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. 789 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯಲಾಗಿದ್ದು, 669 ಹಳ್ಳಿಗಳಲ್ಲಿ ಖಾಸಗಿ ಕೊಳವೆಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.
> ■ **ಡಾ. ಜಿ. ಪರಮೇಶ್ವರ್**, ಉಪಮುಖ್ಯಮಂತ್ರಿ

ಸಂಭವನೀಯ ಬರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಲಭ್ಯತೆ, ಜಾನುವಾರುಗಳಿಗೆ ಮೇವು, ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ನೀರಿನ ಸಂರಕ್ಷಣೆಗೆ ಸಂಬಂಧಿಸಿದಂತೆ ಜಿಲ್ಲಾವಾರು ಕಾರ್ಯಯೋಜನೆಗಳನ್ನು ಸಿದ್ಧಪಡಿಸಬೇಕು. ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ. ಸಿಇಒಗಳಿಗೆ ಅಗತ್ಯ ಸೂಚನೆಗಳನ್ನು ನೀಡಬೇಕು ಎಂದು ಡಿಸಿಎಂ ಸೂಚಿಸಿದರು. ಜಲಾಶಯಗಳ ನೀರಿನ ಮಟ್ಟ, ಅಂತರ್ಜಲ ಪರಿಸ್ಥಿತಿ ಹಾಗೂ ನೀರಿನ ಬಳಕೆಯ ಮೇಲ್ವಿಚಾರಣೆಯನ್ನು ನಿರಂತರವಾಗಿ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಯಾವುದೇ ರೀತಿಯ ಪ್ರಕೃತಿ ವಿಕೋಪ, ಬರ ಪರಿಸ್ಥಿತಿ ಎದುರಾದರೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸಂಬಂಧಿತ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

IN THE COURT OF LXXXVI ADDL. CITY CIVIL AND SESSIONS JUDGE AT BANGALORE (CCH-87)

COM O.S. No. 1793/2025

BETWEEN : CANARA BANK, A Body Corporate established Under the Banking Companies (Acquisition & Transfer of Undertakings) Act 1970 Having its Head office at No. 112, J.C. Road, BENGALURU - 560002.
Having its Branch at: Vidyaranyapura Branch, No. 194, NTI Layout, 1st Cross Road, Vidyaranyapura Bengaluru 560 097, Represented by its Chief Manager Sri. Vipin Chand Joshi ....**PLAINTIFF**

AND : 1. MARUTHI ENTERPRISES Represented by its Proprietor, Smt. S. Girija, No. 23, 7th Main Road, Muthyalanagar, Bangalore-560 054. Phone No 9035275333, GSTIN: 29CUKPG4903P0ZY ...**DEFENDANT No. 1**

2. Smt. S. GIRIJA W/o Sri. Vishnukumar, Aged about 43 years, Prop. of Maruthi Enterprises R/a. No. 88/2, Kengeri, Uttarahalli Main Road, Near Ramamandira Temple, Channasandra Colony, Subramanyapura, Bangalore-560 061. Ph.No. +91 9880005533 ...**DEFENDANT No. 2**

SUMMONS TO THE DEFENDANT UNDER ORDER 5 RULE 20 OF THE CODE OF CIVIL PROCEDURE

Whereas **CANARA BANK** Vidyaranyapura Branch, Bengaluru 560 097 Represented by its Chief Manager Sri. Vipin Chand Joshi has instituted a Suit for money recovery amounting to **Rs. 16,40,298.28 (Rupees Sixteen Lakhs Forty Thousand Two Hundred and Ninety-Eight and Twenty-Eight Paisa only)** with court fee/costs, current and future interest at 11.65% per annum along with 2% penal interest from the date of this suit till date of realisation of the suit claim amount.

You are summons to appear in this Hon'ble Court either in person or through a pleader **on 29.07.2026 at 11.00 A.M** and make submissions as you may so desire in your defence, failing which this Hon'ble Court will be constrained to dispose of the suit exparte.

Given under my hand and seal of this Hon'ble Court this the 18.06.2026.

By order of the Court, Senior Sheristedar, Commercial Court Unit, City Civil Court, Bengaluru.

Lakshmi K. Varadaraj, Advocate
8/7, Nagappa Street, 1st Cross, Swastik Circle, Seshadripuram, Bengaluru-560 020.

PUBLIC NOTICE

This is to inform the general public that my client **Sri. Srinivasa Murthy. N** S/o Sri. Narasimhaiah alias Koomaiah, aged about 49 years, Residing at House No.535, Kanakapura Main Road, Somanahalli Gate, Somanahalli, Bangalore- 560 082, he is the absolute owner of Property **bearing Site No.50, Property No.1893/31/50, RDPR PID No.150200302001401985,** Situated at Somanahalli Village, Bangalore South District, Bangalore, Presently comes under Somanahalli Village Panchayath, **Measuring East to West: 50 Feet or 15.24 Meters and North to South: 40 Feet or 12.19 Meters, in all Measuring 2000 Square Feet or 185.77 Square Meters,** and bounded on East by: Road, West by: Road, North by : Site No.49, South by : Road, he having acquired the same through a he having acquired the same through a Registered **Gift Deed** Dated 16.06.2026, executed by **1) Smt. Hanumakka** W/o Late. Narasimhaiah alias Koomaiah, **2) Smt. Kabbalamma** D/o Late.Narasimhaiah alias Koomaiah W/o Late. Nanjunda. N, **3) Smt. Lakshmi. C.N.** D/o Late. Narasimhaiah alias Koomaiah W/o Sri. Shivaraju. G, **4) Smt. Bhagyalakshmi** D/o Late. Narasimhaiah alias Koomaiah W/o Sri. Muniraj, which is registered as bearing Document No.TVR-1-00874/2026-27, Book-1, registered in the office of Sub-Registrar, Jayanagara (Tavarekere) Bangalore, my client has lost the **Original Hakku Patra Dated 09.07.1976,** in the name of **Sri. Narasimhaiah urf Koomaiah.** In this regard he has lodged a police complaint on 24.06.2026 the public to whosoever find original document may be handed over to my client or undersigned advocate. Any person/s do not have any right, title or interest of any nature in or any lien, charge or claims in relation to the said property. The public are hereby warned that any transaction whatsoever with respect to the said property would at their own risk.

J.K. Manjunath, Advocate
J.K. Advocates
No.7/16, Manjunatha Complex, 2nd Floor, 4th Main Road, SSA Road, Hebbal, Bangalore- 560 024, Mob: 8050111770

IN THE COURT OF THE PRL. CIVIL JUDGE AND JMFC ANEKAL

C.Misc. No. 1016/2026

BETWEEN : Sri. Shivakumar, S/o Late Krishnappa, Aged about 36 years R/at Ward No. 17, A.K. Colony, Anekal Town, Anekal Taluk, Bangalore District-562 106. ...**Petitioner**

AND : The Chief Officer, Anekal Town. ...**Respondent**

PAPER PUBLICATION

Whereas the petitioners have filed the above petition for seeking the death certificate of petitioner grandmother namely **Ramakka W/o Late Venkataramanappa who was died on 10.03.2000** at A.K. Colony, Anekal Town, Anekal Taluk, Bangalore District, before the Prl. Civil Judge and JMFC at Anekal, whereas the above petition is fixed for hearing **date 31.07.2026 at 11.00 AM** if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the Court on this 24th day of June 2026.

By Order of the Court, Sheristedar, Civil Judge (Jr.Dv.) and JMFC Court, Anekal.

Sri. Shashi Kumar .R, Advocate
Office at STB Complex, Attibele Main Road, Anekal Town, Anekal Taluk, Bangalore District.

IN THE COURT OF THE 3rd ADDITIONAL CIVIL JUDGE (JUNIOR DIVISION) AND J.M.F.C. AT ANEKAL

C.MIS.PETITION. No. 1013/2026

Petitioner : Sri. T N Sundarrajan S/o Late Mahalingam, Aged about 64 years, R/at: No. 1010, Block-2, 3rd Phase KHB Suryanagara, Yadavanahalli, Attibele Hobli Anekal Taluk, Bangalore Urban District.

-V/s- Respondent : The Tahsildar, Anekal Taluk, Anekal.

PUBLIC NOTICE

The petitioner filed above petition seeking the death certificate of **Parvathammal W/o Late Mahalingam was died on 04.07.2024** at No. 1010, Block-2, 3rd Phase KHB Suryanagara, Yadavanahalli, Attibele Hobli, Anekal Taluk, Bangalore Urban District. This is requested by the public, if there is anyone to dispute this matters hereby informed to appear before this hon'ble court in person or by a pleader duly instructed **on 07-08-2026 at 11.00 AM.** In forenoon to show cause against the claim failing which the matter will be heard and Determine ex-parte.

By order of Court
Advocate for Petitioner :
Muniswamy Reddy
Office at S.T.B. Complex, Anekal Town - 562 106.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರರ ಕಛೇರಿ, "ಜಲಭವನ," ವಿಭಾಗ, 3ನೇ ಮಹಡಿ, 1ನೇ ಹಂತ, 1ನೇ ಹಂತ, ಬಿಟಿಎಂ ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029.
ದೂರವಾಣಿ: 080-26539297 : e-mail : kwbeebng@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಕೆಪಿಪಿ ಪೋರ್ಟಲ್ ಮೂಲಕ)

ಟೆಂಡರ್ ಸಂಖ್ಯೆ : KWB/EE/BNG/AE-1/ DVN/UGD/564/2026-27 Dt: 25.06.2026
ಮತ್ತು KPPP INDENT ಸಂಖ್ಯೆ: KUWSDB/2026-27/WS/WORK_INDENT 521

ಕಾಮಗಾರಿಯ ವಿವರ : ದೇವನಹಳ್ಳಿ ಪುರಸಭೆಯ ದೇವಸೆ ಕೊಂಡಗೆ ಆವರಣದಲ್ಲಿ ಪಟ್ಟಣಕ್ಕೆ ಸಮಗ್ರ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ವಿನ್ಯಾಸ, ನಕ್ಷೆ ಮತ್ತು ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವುದು.

ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರರ ಕಚೇರಿ ದೂರವಾಣಿ 080-41106536 ಅಥವಾ ಕೆಪಿಪಿ ಪೋರ್ಟಲ್ ಮೂಲಕ ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ಮತ್ತು ಒಳ ಮಂಡಳಿ ವಿಭಾಗ, ಬೆಂಗಳೂರು.
ಜಾಅಸಂ/ಮಾಹಿತಿ/1352/2026-27

IN THE COURT OF THE PRINCIPAL CIVIL JUDGE & JMFC AT HOSKOTE

C.Misc. 275/2026

BETWEEN:
Smt. KONDAMMA AND OTHERS ...**PETITIONERS**

-VS-

The Tahsildar,
Register of Birth and Deaths
Hoskote Taluk, Hoskote. ...**RESPONDENT**

GENERAL NOTICE TO PUBLIC

Whereas, the petitioners have filed the above petition seeking the direction to the Tahsildar for issuance of death certificate of father of petitioner No.2 and 3 GOPALAPPA S/o late VENKATASWAMAPPA who died on 20/11/2011 at Ganagaluru Village, Anugondanahalli Hobli, Hosakote Taluk, Bengaluru Rural District and the case is posted for appearance of interested persons/ publics **on 04/08/2026 at 11 a.m.** before the above said court. Hence interested parties are hereby required to appear in person/ Advocate before the case will be disposed as expate.

Given under my hand and seal of the court this day of **20-6-2026.**

BY ORDER OF THE COURT
Sheristedar
Pri. Civil Judge & J.M.F.C., Court at HOSKOTE

G.A. Sampath Kurder
Advocate
Hosakote

IN THE COURT OF THE ADDL. CITY CIVIL & SESSIONS JUDGE BENGALURU CITY

Misc. No.474 of 2025 in O.S. No. 8312 of 2016 (CCH-2)

BETWEEN: Smt. Parvathamma, D/o A. Govindappa, aged about 35 years, R/a Horamavu Agara Village, Horamavu Post - 560 043, K.R. Puram Hobli, Bengaluru. ... **PLAINTIFF**

AND: Sri A. Govindappa and others ... **DEFENDANTS**

NAME AND ADDRESS OF DEFENDANT No.4 & 5

4. Sri S. Padmanabhan, S/o late G. Sundara Raj, aged about 44 years.

5. Smt. K. Niranjani, W/o Sri S. Padmanabhan, aged about 31 years, Respondents No.4 & 5 are R/o No.331/2, K.R. Puram Extension, Bengaluru 560 036.

Whereas, the above-named plaintiff has filed a Misc. Petition to set aside the impugned order passed in O. S. No.8132/2016 against the respondent No.4 and 5.

You are hereby called to appear before this Court in person or by Pleader duly instructed on **31/08/2026** at **11:00 A.M.** failing wherein the appearance will be heard and declared as Ex parte.

Given under my hand and seal of the court on this 23/06/2026

By order of the Court, Senior Sheristedar, City Civil Court, Bengaluru

SRI. SURESHA .M, Advocate
'Thanksha Nilaya', No.22/6, Thirumalashettihalli, Chikkathirupathi Main Road, Bengaluru-560 067.
Mob: 9448805060

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿವರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392-200293

ಸಂ: ಕಾನೀಅಂ/ಸನೀಅಂಅ.ವಿ/ಬ/ಟೆ.ಸಂ-2/2026-27/764 ದಿ:23.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ("KPPP" ಪೋರ್ಟಲ್ ಕೆಡಬ್ಲ್ಯೂ-3 ಮುಖಾಂತರ)

ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆಯಡಿ 4702 ಅಡಿಯ ಬಳ್ಳಾರಿ ಜಿಲ್ಲೆಯ ಕಾಮಗಾರಿಗೆ ... ಕಾರ್ಯನಿರ್ವಾಹಕ ಇಂಜಿನಿಯರವರು ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರನ್ನು ಮೊತ್ತ ರೂ.79.05 ಲಕ್ಷಗಳಾಗಿರುತ್ತದೆ. ಟೆಂಡರ್‌ನ್ನು ದಿನಾಂಕ: 23.06.2026 ರಿಂದ ದಿನಾಂಕ: 02.07.2026 ರ ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ತಾಂತ್ರಿಕ ಬಿಡ್‌ನ್ನು ದಿನಾಂಕ: 04.07.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 07.07.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬಳ್ಳಾರಿ
ವಾ.ಇ.ಸಂ.ಇ/ಬಳ್ಳಾರಿ/2026-27/ಕೆಪಿ.ಎಂ.ಪಿ/ಆರ್.ಓ.ಸಂಖ್ಯೆ/278

ಕರ್ನಾಟಕ ಸರ್ಕಾರ
ನಗರಸಭಾ ಕಾರ್ಯಾಲಯ, ದಾಂಡೇಲಿ

ಕಛೇರಿ ವಿಳಾಸ: ಸಿಟಿಜನ್ ಸೆಂಟರ್ ವಿಲ್ಯಾಜ್ ಜೆ.ಎನ್ ರಸ್ತೆ ದಾಂಡೇಲಿ-581325
ದೂರವಾಣಿ: 08284-231482
www.dandelicity.gov.in E-mail id: itstaff_ulb_dandeli@yahoo.co.in
ಸಂಖ್ಯೆ:ನಸದಾಂ/ತಾಂತ್ರಿಕ/ವಿವ/CMIDP/ಟೆಂಡರ/2026-27 ದಿನಾಂಕ: 23-06-2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ದಾಂಡೇಲಿ ನಗರಸಭೆಗೆ 2025-26 ನೇ ಸಾಲಿನ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ (CMIDP) ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆ ಹಾಗೂ ನಿಯಮಗಳು-2000 KPPP Portal ದ್ವಿ-ಲಕೋಟೆ ಪದ್ಧತಿಯಲ್ಲಿ ಬಿಡುಗಡೆ KW-3 ಅಡಿಯಲ್ಲಿ ನೋಂದಣಿಯಾಗಿರುವ ಅರ್ಹ ಗುತ್ತಿಗೆದಾರರಿಂದ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ 1) DMA/2025-26/OW/WORK_INDENT 55045/Call-2 (ಎರಡನೆ) 2) DMA/2025-26/OW/WORK_INDENT 55056/Call-2 (ಎರಡನೆ ಕರೆ) 3) DMA/2025-26/OW/WORK_INDENT 55061/Call-2 ಟೆಂಡರ್-2 (ಆ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. www.kppp.karnataka.gov.in ಮೂಲಕ ಟೆಂಡರ್ ಫಾರಂಗಳನ್ನು ಭರ್ತಿ ಮಾಡಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಯನ್ನು ನಗರಸಭೆಯ ವೆಬ್‌ಸೈಟ್ www.dandelicity.gov.in ನಲ್ಲಿ ಪಡೆಯಬಹುದು.

ಟೆಂಡರ್ ವಿವರ: (1) ಟೆಂಡರ್ ಪ್ರಕಟಣೆಗೊಳ್ಳುವ ಸಮಯ ದಿನಾಂಕ: 09-07-2026 11:30 ಗಂಟೆಗೆ
(2) ಟೆಂಡರ್ ಕುರಿತು ವಿಚಾರಣೆಗಳು ದಿನಾಂಕ: 10-07-2026 16:30 ಗಂಟೆಗೆ
(3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 13-07-2026 16:30 ಗಂಟೆಗೆ
(4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14-07-2026 17:00 ಗಂಟೆಗೆ
(5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 16-07-2026 17.00 ಗಂಟೆಗೆ

ಸಹಿ/- ಪೌರಾಯುಕ್ತರು
ನಗರಸಭೆ, ದಾಂಡೇಲಿ
DIPR/KWR/KSMCA/233/26-27 dt. 25.06.2026

ಕೃಷಿ ಮಗ್ಗ ಮತ್ತು ಜವಳಿ ಇಲಾಖೆ

ಜಿಲ್ಲಾ ಪಂಚಾಯತ್, ಬೆಂಗಳೂರು ದಕ್ಷಿಣ
ಸಹಾಯಕ ನಿರ್ದೇಶಕರ ಕಛೇರಿ, ಮೊದಲನೆ ಮಹಡಿ
ಜಿಲ್ಲಾ ಪಂಚಾಯತ್ ಭವನ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ-562159
ದೂರವಾಣಿ: 27272288 e-mail: adhistexrmg@gmail.com

ಸಂಖ್ಯೆ: ಕೈಮಗ್ಗ/ಬೆಂದಜಿಪಂ/ಸನಿ/ಹೊ.ಗು.ನೌ/2026-27/ಇ.ಆ.ಸಂ:50088
ದಿನಾಂಕ: 24.06.2026

ಇ-ಟೆಂಡರ್ ಪ್ರಕಟಣೆ

ಸಹಾಯಕ ನಿರ್ದೇಶಕರ ಕಛೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ಈ ಕಛೇರಿಗೆ ಅವಶ್ಯವಿರುವ **ಡಾಟಾ ಎಂಟ್ರಿ ಆಪರೇಟರ್ ಹುದ್ದೆ-01 ಮತ್ತು ಗ್ರೂಪ್-ಡಿ ನೌಕರರ-01 ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ** ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಪಡೆಯಲು ಇ-ಟೆಂಡರ್ ಆಹ್ವಾನಿಸಲಾಗಿದೆ. ಅಪ್‌ಲೋಡ್ ಪ್ರಾರಂಭ **ದಿನಾಂಕ: 20.06.2026,** ಕೊನೆಯ ದಿನಾಂಕ: **09.07.2026 ಆಗಿದ್ದು,** ಹೆಚ್ಚಿನ ವಿವರಗಳನ್ನು **(https://kppp.karnataka.gov.in)** ನಿಂದ ಪಡೆಯಬಹುದು. ಟೆಂಡರ್ ಸಂಖ್ಯೆ: DHT/2026-27/SE071, ದೂರವಾಣಿ ಸಂಖ್ಯೆ: 080-2727228 ಅಥವಾ ಕಛೇರಿಯ ವೇಳೆ **ಬೆಳಿಗ್ಗೆ 10.00 ರಿಂದ ಸಂಜೆ 5.30 ರೊಳಗೆ** ಸಂಪರ್ಕಿಸಬಹುದು.

ಸಹಿ/- ಸಹಾಯಕ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ ಇಲಾಖೆ
ಬೆಂಗಳೂರು ದಕ್ಷಿಣ ಜಿಲ್ಲೆ.
DIPR/BSD/140/SA/2026-27

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ಶಾಖಾ ವಿಭಾಗ, ಹೆಬ್ಬೂರು
ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ದೂರವಾಣಿ : 0816-2957008,
ಇ-ಮೇಲ್ : eehcidhebbur@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 07/2026-27 ದಿನಾಂಕ : 22-06-2026

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಹೇಮಾವತಿ ನಾಲಾ ಶಾಖಾ ವಿಭಾಗ, ಕಾ.ನೀ.ನಿ.ನಿ., ಹೆಬ್ಬೂರು ರವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 07 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟನ್ ಕೀ ಆಧಾರದ ಮೇಲೆ ಆಹ್ವಾನಿಸಲಾಗಿದೆ.

ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ : 24-06-2026
ಮತ್ತು ಅಂತಿಮ ದಿನಾಂಕ : 04-07-2026.

ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ : www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ಶಾಖಾ ವಿಭಾಗ,
ಕಾ.ನೀ.ನಿ.ನಿ., ಹೆಬ್ಬೂರು.

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ,

ದೂ.ಸಂ:080-29753356/54/56, e-mail: karbuildworkerswelfare@gmail.com
ಸಂಖ್ಯೆ:KBOCWWB/E-Auction/ FD-3&3(a)/CR-06/2026-27 ದಿನಾಂಕ:24.06.2026

ಇ-ಆಕ್ಷನ್ ಪ್ರಕಟಣೆ

ವಿಷಯ: ಮಂಡಳಿಯ ಠೇವಣಿಯ ಹಣವನ್ನು ಅವಧಿ ಠೇವಣಿಯಲ್ಲಿ ನಿಶ್ಚಿತ ಠೇವಣಿ/ Non- Callable & Callable ನಲ್ಲಿ ಹೂಡಿಕೆಗಾಗಿ ಇ-ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಮಂಡಳಿಯ ಉಳಿತಾಯ ಖಾತೆಯಲ್ಲಿ ಉಳಿದಿರುವ **ಮೊತ್ತ ರೂ.1700.00 ಕೋಟಿ** Non-Callable FD ಮತ್ತು **ರೂ.170.00 ಕೋಟಿಗಳು** Callable FD ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿ / Non-Callable & Callable ನಲ್ಲಿ ಹೂಡಿಕೆಗಾಗಿ ಇ-ಆಕ್ಷನ್ ಪದ್ಧತಿಗ ವ್ಯವಸ್ಥೆ ಮಾಡಿರುವಲ್ಲಿ KPPP ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕುಗಳ ಪ್ರಾದೇಶಿಕ / ವಲಯ / ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿದರವನ್ನು ಆಹ್ವಾನಿಸಲಾಗಿದೆ.

ಸದರಿ ಇ-ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://kppp.karnataka.gov.in/)** ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ 04.07.2026 ಸಂಜೆ 4.00 ರೊಳಗಾಗಿ** ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಉಪ ನಿಯಂತ್ರಕರು, **ಫೋನ್:080-29753350/54/56, ಫೋನ್:9739441766** ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಜಂಟಿ ಕಾರ್ಯದರ್ಶಿ
ಕ.ಕ.ಇ.ನಿ.ಕಾ.ಕ.ಮಂಡಳಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿ/ಜಿ-2/ಟಿಎಸ್‌ಟಿ-06/ಮು-01/2026-27 ದಿನಾಂಕ:24-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ 2, 3 & 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:25-06-2026 ರಿಂದ 02-07-2026 8443-00-117-0-14-542 ಠೇವಣಿ ವಂತಿಕೆ (ರಾಜ್ಯ ಉಪಕಾರ ನಿಧಿ)

ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿ

1. ಸಾಗರ ತಾಲ್ಲೂಕು 7 ಕಾಮಗಾರಿ (ಇ.ಸಂ.: 37018, 36984,36985,36981, 36521, 35700, 35699). ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ): 37018, 36984, 36985, 36981 ರ ಕಾಮಗಾರಿಗೆ 06 ತಿಂಗಳು ಹಾಗೂ ಇ.ಸಂ.36521, 35700, 35699 ರ ಕಾಮಗಾರಿಗೆ 09 ತಿಂಗಳು.

ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/ 080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ಕರ್ನಾಟಕ ಸರ್ಕಾರ
ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ, ಗದಗ-582101

ಜಿಲ್ಲಾ: ಗದಗ ರಾಜ್ಯ: ಕರ್ನಾಟಕ
ದೂ: 08372-278504 ಇ-ಮೇಲ್: ka.gadag.betageri.cmc@gmail.com
ಸಂಖ್ಯೆ: ಗಬೆನಸ/ಹೊರಕಲಿಸು/ಮು/24/2026-27 ದಿನಾಂಕ: 25-06-2026

ಟೆಂಡರ್ ಪ್ರಕಟಣೆ

TENDER INDENT NO:DMA/2026-27/SE8000

ಗದಗ ಬೆಟಗೇರಿ ನಗರಸಭೆಗೆ 2026-27ನೇ ಸಾಲಿಗಾಗಿ 6 ಜನ ಡಾಟಾ ಎಂಟ್ರಿ ಆಪರೇಟರ್ ಗಳನ್ನು ಒದಗಿಸುವ ಸಂಬಂಧ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಮತ್ತು ತಿದ್ದುಪಡಿ ನಿಯಮ 2000ರನ್ವಯ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆ/ಏಜೆನ್ಸಿಯವರು ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ವೆಬ್ ಸೈಟ್ ನೋಡಬಹುದು

1] ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 10-07-2026 ಸಮಯ ಅಪರಾಹ್ನ 4.30 ಗಂಟೆಗೆ
2] ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 13-07-2026 ಅಪರಾಹ್ನ 4.30 ಗಂಟೆಗೆ
3] ಆರ್ಥಿಕ ಬಿಡ್ ತೆರೆಯುವ ದಿನಾಂಕ: 14-07-2026 ಬೆಳಿಗ್ಗೆ 11.00 ಗಂಟೆಗೆ

ಸಹಿ/-
ಪೌರಾಯುಕ್ತರು,
ನಗರಸಭೆ ಗದಗ ಬೆಟಗೇರಿ

ಮಾನ್ಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರವರ ನ್ಯಾಯಾಲಯ, ಹೊನ್ನಾಳಿ/ಹರಿಹರ.

ಆರ್.ಎ.ನಂ.53/2024

ಅರ್ಜಿದಾರರು :- ಭರಮಗೌಡ ಪರವಾಗಿ ಜಿ.ಪಿ.ಎ. ಹೋಲ್ಡರ್ ...

ವಿರುದ್ಧ

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಶಿರಸ್ತೇದಾರರು,
ಸಿವಿಲ್ ಜಡ್ಜ್ ನ್ಯಾಯಾಲಯ, ಹೊನ್ನಾಳಿ
ದಿನಾಂಕ:24-06-2026

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು

ಕೆ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ 03/2026-27 ದಿನಾಂಕ: 22.06.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ ಇವರಿಂದ ನೋಂದಾಯಿತರಾಗಿರುವ ನಿಗದಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ 01 ಸಂಖ್ಯೆಯ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ ಪಿ ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್ ಗಿಟ್ಟ ಮೊತ್ತ ರೂ. 397.04 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ ಇರುತ್ತದೆ. ಕೆ ಪಿ ಪಿ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ 24.06.2026 ರಂದು ಬೆಳಿಗ್ಗೆ 10.00 ಗಂಟೆಯಿಂದ ದಿನಾಂಕ 03.07.2026 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗದಿತ ನಮೂನೆಗಳನ್ನು https://kppp.karnataka.gov.in/ ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ಅನ್ನು ದಿನಾಂಕ 04.07.2026 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಎಕ್ಸಿಕ್ಯೂಟಿವ್ ಇಂಜಿನಿಯರ್, ನಂ.1
ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು
ವಾಇಸಂ/ಹಾಸನ/ಜಾಹೀ/278/ಕೆಪಿಪಿಎಂಪಿ/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ ಕನೀನಿನಿ, ಮಲಪ್ರಭಾ ವಿಭಾಗ ನಂ. 3 ಬ್ಯಾಹಟ್ಟಿ ತಾ: ಹುಬ್ಬಳ್ಳಿ, ಜಿ: ಧಾರವಾಡ 580023.ಫೋನ್ : 0836-2315225 ಫ್ಯಾಕ್ಸ್ :2315226.
e-mail :- knnl@knnlindia.com e-mail :-eemrbcc3byt@gmail.com
Website:- www.knnlindia.com

ಸಂ:ಕನೀನಿನಿ/ಮಬಿವಿ-3/ಎ.ಇ-1/ಕೆಪಿಪಿ-ಟೆಂಡರ/2026-27/560
ದಿನಾಂಕ:25/06/2026

ಟೆಂಡರ ಪ್ರಕಟಣೆ

(ಕೆಪಿಪಿ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್ ಕನೀನಿನಿ, ಮಲಪ್ರಭಾ ವಿಭಾಗ ನಂ.3, ಬ್ಯಾಹಟ್ಟಿ ಲೆಕ್ಕಶೀರ್ಷಿಕೆ 4701 M & MI ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ಸಂಬಂಧ 01 ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕೆಪಿಪಿ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

Work Indent No :- KNNL/2025-26/LI/WORK_INDENT4153 (Turnkey Basis Tender)

ಕಾಮಗಾರಿಯ ಅಂದಾಜು ಮೊತ್ತ: ರೂ.1000.00 ಲಕ್ಷಗಳು
ಇ.ಎಂ.ಡಿ ಮೊತ್ತ: ರೂ.11.82 ಲಕ್ಷಗಳು

ಕೆಪಿಪಿ-ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ದಿನಾಂಕ: 30-07-2026ರ ಸಂಜೆ 4.00 ಗಂಟೆವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01-08-2026 ರಂದು ಮುಂಜಾನೆ 11.00 ಗಂಟೆಯಿಂದ ಮತ್ತು ಪ್ರಿ-ಬಿಡ್ ಸಭೆ ದಿನಾಂಕ: 17-07-2026 ರಂದು ಮುಂಜಾನೆ 11.00 ಗಂಟೆಯಿಂದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಕಾಫೀ ಬೋರ್ಡ್ 4ನೇ ಮಹಡಿ, ನಂ.1 ಡಾ. ಅಂಬೇಡ್ಕರ್ ವೀದಿ ಬೆಂಗಳೂರು ಕಚೇರಿಯಲ್ಲಿ ಹಾಗೂ ಕಾಮಗಾರಿಯ ಇತರೆ ವಿವರಗಳನ್ನು ಕೆಪಿಪಿ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಮುಖೇನ https://kppp.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 0836-2315225ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು
ಕನೀನಿನಿ, ಮಲಪ್ರಭಾ ವಿಭಾಗ ನಂ. 3 ಬ್ಯಾಹಟ್ಟಿ
ವಾಇಸಂ/ಧಾರವಾಡ/358/ಜಾಹೀರಾತ್/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಕನೀನಿನಿ, ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ-576229. ಉಡುಪಿ ಜಿಲ್ಲೆ

ಸಂ: ಕನೀನಿನಿ/ವಾಯೋವಿ/ಸಿದ್ದಾ/ವಿ.ಶಾ-32/ಫೈನಲ್ ಕ್ಲಾರ್ ದಪ್ತ/04/2026-27/
ದಿನಾಂಕ: 24-06-2026

ದರಪಟ್ಟಿ ಅಧಿಸೂಚನೆ

ಉಡುಪಿ ಜಿಲ್ಲೆ, ಕುಂದಾಪುರ ತಾಲೂಕಿನಲ್ಲಿ ವಾರಾಹಿ ನೀರಾವರಿ ಯೋಜನೆಯಡಿ ಕೈಗೊಳ್ಳುವ ವಿತರಣಾ ನಾಲೆ 32 ರ (Turnkey Basis) ಕಾಮಗಾರಿಗೆ ಸಂಬಂಧಿಸಿದ

Installing of 1200.00mm dia, 16.00mm thick product pipe by manual pipe jacking method including making of entry and exit pits, all related civil works like excavtion, shoring/ strutting, Etc., manual sheilded excavation, lowering of pipe segment in the jacking pit, laying and jointing of product piprlinr through jacking process from the jacking pit after project completion as per the instruction of the Engineer incharge all complete except the Cost of the pipe

ಕಾಮಗಾರಿಯನ್ನು ಕೈಗೊಳ್ಳಬೇಕಾಗಿದ್ದು, ದಿನಾಂಕ: 02/03/2026 ರಂದು ಜಾರಿಯಲ್ಲಿದ್ದ ದರವನ್ನು ತಿಳಿಯಬೇಕಾಗಿರುವ ಸಲುವಾಗಿ, ಕೇಂದ್ರೀಯ/ರಾಜ್ಯ ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಗುತ್ತಿಗೆದಾರರಾಗಿ ನೋಂದಾಯಿಸಿರುವ ಹಾಗೂ ರೈಲ್ವೆ ಇಲಾಖೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆದಾರರಿಂದ ದರಪಟ್ಟಿಯನ್ನು ಅಧಿಸೂಚನೆಯ ದಿನಾಂಕದಿಂದ 7 ದಿನಗಳೊಳಗೆ ಮುಚ್ಚಿದ ಲಕೋಟೆಯ ಮುಖಾಂತರ ಹಾಗೂ ಕೇಂದ್ರೀಯ/ರಾಜ್ಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಪ್ರಮಾಣ ಪತ್ರ ಮತ್ತು ರೈಲ್ವೆ ಇಲಾಖೆಯಲ್ಲಿ ಕಾಮಗಾರಿ ನಿರ್ವಹಿಸಿರುವ ಬಗ್ಗೆ ದೃಢೀಕರಣ ಪತ್ರದೊಂದಿಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಸೂಚನೆಯನ್ನು ಈ ಕಛೇರಿಯಿಂದ ಸಂಗ್ರಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ 08259-284240 ಮೂಲಕ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಕನೀನಿನಿ,
ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ಜಿಲ್ಲೆ
ವಾಇಸಂ/ಉಡುಪಿ/ಕೆಪಿಪಿಎಂಪಿ/189/26-27 ದಿ: 25-06-26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ:ಕಾ.ಇಂ/ಕನೀನಿನಿ/ಬಿಡಿಜಿಟಿ-4/ತಾ.ಸಂ/ಪಿ.ಬಿ 1/2700 ಮಾನವ ಸೇವೆ/2ನೇ ಟೆಂಡರ್ ಪ್ರಕಟಣೆ ಸಂಖ್ಯೆ: 02/2026-27 ದಿನಾಂಕ:22/06/2026

ಅಲ್ಪಾವಧಿ ಟೆಂಡರ್ ಪ್ರಕಟಣೆ - 2ನೇ ಕರೆ

Ref: No:EE:KNNL/No.4/BDVT/TA/PB-1/Man power supply/Tender Notification No.02/2026-27 Date: 30.04.2026

ಕೆ.ಪಿ.ಪಿ ವೇದಿಕೆಯಡಿಯಲ್ಲಿ 2700 ಭದ್ರಾ ಮತ್ತು ಗೊಂದಿ ಲೆಕ್ಕ ಶೀರ್ಷಿಕೆಯಡಿಯಲ್ಲಿ 05 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೋಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 24.06.2026 ರಿಂದ 07.07.2026 ರವರೆಗೆ 17.29 ಗಂಟೆಗೆ. 2) ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ : 08.07.2026 ರಂದು 17.30 ಗಂಟೆಗೆ. **Financial Bid will be opened for Sl No.01 and Technical Bid will be opened for Sl No.02 to 05 after obtaining approval of technical bid from competent authority financial bid will be opened.** 3) ಕಾಲಾವಧಿ : 12 ತಿಂಗಳು. 4) **Pre Bid Meeting : Dt: 02.07.2026 @ 11.00 Hrs at O/o Executive Engineer, No.4 BRLBC Division, Bhadravathi (For Sl No.05).** 5) ಟೆಂಡರ್‌ಗಳ ಮೊತ್ತ : ರೂ.36.28 ಲಕ್ಷಗಳಿಂದ ರೂ.95.76 ಲಕ್ಷಗಳವರೆಗೆ 6) ಇ.ಎಂ.ಡಿ ಮೊತ್ತ : ರೂ.72,600/- ರಿಂದ ರೂ. 1,92,000/- ವರೆಗೆ.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/-
ಕಾರ್ಯಪಾಲಕ ಇಂಜಿನಿಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವೆನೆಜುವೆಲಾ ಕಂಪನ | 164 ಮಂದಿ ಸಾವು

ಪ್ರಬಲ ಭೂಕಂಪ ಜನಜೀವನ ತತ್ತರ



• **ಕಾರಕಾಸ್:** ವೆನೆಜುವೆಲಾದ ಉತ್ತರ ಕರಾವಳಿ ಪ್ರದೇಶದಲ್ಲಿ 7.5 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ. ಇದಕ್ಕೂ ಮುನ್ನ ಕೇವಲ 40 ಸೆಕೆಂಡುಗಳಲ್ಲಿ 7.2 ತೀವ್ರತೆಯ ಮತ್ತೊಂದು ಭೂಕಂಪನ ನಡೆದಿದೆ. ಭೂಕಂಪನದಿಂದ ಕನಿಷ್ಠ 164 ಜನರು ಬಲಿಯಾಗಿದ್ದು, 1000ಕ್ಕೂ ಮಂದಿ ಗಾಯಗೊಂಡಿದ್ದಾರೆ. ತೀವ್ರವಾಗಿ ಹಾನಿಗೊಳಗಾದ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ. ಕುಸಿದಿರುವ ಕಟ್ಟಡಗಳ ಅಡಿಯಲ್ಲಿ ಸಿಲುಕಿರುವ ಜನರನ್ನು ಹೊರತೆಗೆಯಲು ಅತ್ಯಂತ ಹೆಚ್ಚು ಹಾನಿಗೊಳಗಾಗಿರುವ ಪ್ರದೇಶಗಳಿಗೆ ಆದ್ಯತೆಯ ಮೇರೆಗೆ ರಕ್ಷಣಾ ತಂಡಗಳನ್ನು ರವಾನಿಸಲಾಗುತ್ತಿದೆ ಎಂದು ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ತಿಳಿಸಿದ್ದಾರೆ. ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದು, ಭೂಕಂಪದಿಂದ ಹಾನಿಗೊಳಗಾದ ಆಸ್ಪತ್ರೆಗಳು ಮತ್ತು ಮನೆಗಳ ಪುನರ್ನಿರ್ಮಾಣಕ್ಕಾಗಿ 200 ಮಿಲಿಯನ್ ಯುಎಸ್ ಡಾಲರ್ ನಿಧಿಯನ್ನು ಪ್ರಕಟಿಸಿದ್ದಾರೆ.

» 11ಸಾವಿರ ಮಂದಿ ನಾಪತ್ತೆ
» ಸಾವಿನ ಸಂಖ್ಯೆ ಏರಿಕೆ ಸಾಧ್ಯತೆ

ಮುಂದುವರಿದ ರಕ್ಷಣಾ ಕಾರ್ಯಾಚರಣೆ: ವೆನೆಜುವೆಲಾದಲ್ಲಿ ಕಳೆದ ಒಂದು ಶತಮಾನದಲ್ಲೇ ಸಂಭವಿಸಿದ ಅತ್ಯಂತ ಶಕ್ತಿಶಾಲಿ ಭೂಕಂಪ ಇದಾಗಿದೆ. ಲಾ ಗ್ವೈರಾ ರಾಜ್ಯದಲ್ಲಿ ಮೂವರು ಮಕ್ಕಳನ್ನು ಅವಶೇಷಗಳ ಅಡಿಯಿಂದ ಜೀವಂತವಾಗಿ ರಕ್ಷಿಸಲಾಗಿದೆ. ಅತಿ ಹೆಚ್ಚು ಕಟ್ಟಡಗಳು ಕುಸಿದಿರುವುದರಿಂದ ಲಾ ಗ್ವೈರಾ ಅತ್ಯಂತ ತೀವ್ರವಾಗಿ ಹಾನಿಗೊಳಗಾದ ಪ್ರದೇಶ ಎಂದು ಘೋಷಿಸಲಾಗಿದೆ. ದೇಶದ ಇತರ ಭಾಗಗಳಿಂದ ರಕ್ಷಣಾ ತಂಡಗಳನ್ನು ಲಾ ಗ್ವೈರಾಕ್ಕೆ ಸ್ಥಳಾಂತರಿಸಲಾಗಿದೆ. ವಿಶ್ವಸಂಸ್ಥೆಯ ಪ್ರಮಾಣೀಕೃತ ಶೋಧನೆ ಮತ್ತು ರಕ್ಷಣಾ ತಂಡಗಳು ಸಹಾಯಕ್ಕಾಗಿ ವೆನೆಜುವೆಲಾಕ್ಕೆ ಪ್ರಯಾಣ ಬೆಳೆಸಿವೆ.

ದೇಶಾದ್ಯಂತ ಹಾನಿ: ಭೂಕಂಪದಿಂದಾಗಿ ದೇಶದ ಪ್ರಮುಖ ವಿಮಾನ ನಿಲ್ದಾಣವಾದ ಸೈಮನ್ ಬೊಲಿವರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾನಿಗೊಳಗಾಗಿದ್ದು, ಅದನ್ನು ಮುಚ್ಚಲಾಗಿದೆ. ರಾಜಧಾನಿ ಕಾರಕಾಸ್‌ನ ಹಲವು ಭಾಗಗಳಲ್ಲಿ ವಿದ್ಯುತ್ ಮತ್ತು ಮೊಬೈಲ್ ನೆಟ್‌ವರ್ಕ್ ಸೇವೆಗಳು ಸ್ಥಗಿತಗೊಂಡಿವೆ. ಸುರಂಗಮಾರ್ಗ (ಸಬ್ ವೇ) ಕಾರ್ಯಾಚರಣೆಯನ್ನು ಅಮಾನತುಗೊಳಿಸಲಾಗಿದೆ. ನೈಸರ್ಗಿಕ ಅನಿಲ ಪೂರೈಕೆಯನ್ನು ಸ್ಥಗಿತಗೊಳಿಸಲಾಗಿದೆ. ಶಾಲಾ ಕಟ್ಟಡಗಳನ್ನು ಆಶ್ರಯ ತಾಣಗಳಾಗಿ ಮತ್ತು ದೇಣಿಗೆ ಕೇಂದ್ರಗಳಾಗಿ ಬಳಸಲಾಗುತ್ತಿದ್ದು, ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.ಮತ್ತೆ ಭೂಕಂಪ ಸಂಭವಿಸುವ ಭೀತಿಯಿಂದಾಗಿ ಅನೇಕ ನಿವಾಸಿಗಳು ಮನೆಗಳಿಂದ ಹೊರಗೇ ಉಳಿದಿದ್ದಾರೆ. ಇನ್ನು ಕೆಲವರು ನಿಲ್ಲಿಸಿದ ಕಾರುಗಳು, ಸಬ್‌ವೇ ನಿಲ್ದಾಣಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿ ಕಳೆದಿದ್ದಾರೆ. ಸಂವಹನ ಸೇವೆಗಳು ಅಸ್ತವ್ಯಸ್ತಗೊಂಡಿರುವುದರಿಂದ ಕಾಣೆಯಾದ ಸಂಬಂಧಿಕರ ಬಗ್ಗೆ ಮಾಹಿತಿ ಪಡೆಯಲು ಸಾಮಾಜಿಕ ಮಾಧ್ಯಮಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ.

ಮೋದಿ ಸಂತಾಪ: ನೆರವಿನ ಭರವಸೆ

ವೆನೆಜುವೆಲಾವನ್ನು ಪ್ರಾಕೃತಿಕ ನಡುಗಿಸಿರುವ , ಸುಮಾರು 32ಜನರನ್ನು ಆಹುತಿ ತೆಗೆದುಕೊಂಡ ಮತ್ತು ಅಂದಾಜು 700ಕ್ಕೂ ಅಧಿಕ ಮಂದಿ ಗಾಯಗೊಂಡ ಭಯಾನಕ ಭೂಕಂಪನ ಬಗ್ಗೆ ಗಾಢ ಸಂತಾಪ ವ್ಯಕ್ತಪಡಿಸಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ, ಸಂತ್ರಸ್ತ ಲ್ಯಾಟಿನ್ ಅಮೆರಿಕನ್ ರಾಷ್ಟ್ರಕ್ಕೆ ಎಲ್ಲಾ ರೀತಿಯ ನೆರವು ನೀಡಲು ಭಾರತ ಸಿದ್ಧವಿದೆ ಎಂದು ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಭರವಸೆ ನೀಡಿದ್ದಾರೆ. ವೆನೆಜುವೆಲಾ ಸರಕಾರ ಮತು ಅಲ್ಲಿನ ಜನರಿಗೆ, ಮುಖ್ಯವಾಗಿ ಭೂಕಂಪನದಲ್ಲಿ ತಮ್ಮ ಪ್ರೀತಿಪಾತ್ರರನ್ನು ಕಳೆಕೊಂಡ ಕುಟುಂಬಗಳಿಗೆ ನನ್ನ ಹೃದಯಪೂರ್ವಕ ಗಾಢ ಸಂತಾಪ ವ್ಯಕ್ತಪಡಿಸುತ್ತೇನೆ. ಗಾಯಾಳುಗಳ ಶೀಘ್ರ ಚೇತರಿಕೆಗೆ ಭಾರತ ಪ್ರಾರ್ಥಿಸುವುದು. ಇಂತಹ ಸಂಕಷ್ಟದ ಸ್ಥಿತಿಯಲ್ಲಿ ಸಂತ್ರಸ್ತರ ಜತೆ ಭಾರತ ಏಕತೆಯಿಂದ ನಿಲ್ಲುವುದು. ಸಂತ್ರಸ್ತ ರಾಷ್ಟ್ರಕ್ಕೆ ಎಲ್ಲಾ ರೀತಿಯ ನೆರವು ವಿಸ್ತರಿಸಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ಮೋದಿ ಪೋಸ್ಟ್‌ನಲ್ಲಿ ಭರವಸೆ ನೀಡಿದ್ದಾರೆ.

ಅಂತಾರಾಷ್ಟ್ರೀಯ ನೆರವು

ದುರಂತದ ಈ ಸಂದರ್ಭದಲ್ಲಿ ಭಾರತ ವೆನೆಜುವೆಲಾಕ್ಕೆ ಸಹಾಯ ಹಸ್ತ ಚಾಚಿದ್ದು, ಆಗತ್ಯ ನೆರವು ಮತ್ತು ಬೆಂಬಲವನ್ನು ಪ್ರಕಟಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಕ್ರೇನ್ ಮಾನವೀಯ ನೆರವನ್ನು ಘೋಷಿಸಿದ್ದರೆ, ಕತಾರ್, ಮೆಕ್ಸಿಕೋ ಮತ್ತು ಎಲ್ ಸಾಲ್ವಡಾರ್ ರಕ್ಷಣಾ ಸಿಬ್ಬಂದಿಯನ್ನು ಕಳುಹಿಸಿವೆ. ಅಮೆರಿಕದ ಶೋಧನೆ ಮತ್ತು ರಕ್ಷಣಾ ತಂಡಗಳು, ವೈದ್ಯಕೀಯ ಸಂಪನ್ಮೂಲಗಳು ಮತ್ತು ಮಾನವೀಯ ಸಹಾಯವನ್ನು ಶೀಘ್ರವೇ ನಿಯೋಜಿಸುವುದಾಗಿ ಯುಎಸ್ ವಿದೇಶಾಂಗ ಕಾರ್ಯದರ್ಶಿ ರೂಬಿಯೋ ಪ್ರಕಟಿಸಿದ್ದಾರೆ.

ಐತಿಹಾಸಿಕ ಉದ್ಘಾಟನೆ

ಬುಧವಾರ ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಈ ಐತಿಹಾಸಿಕ ಗಣಿಗಾರಿಕೆ ಯೋಜನೆಯನ್ನು ಅಧಿಕೃತವಾಗಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಗಣಿಯ ಎರಡನೇ ಹಂತದ ವಿಸ್ತರಣಾ ಕಾಮಗಾರಿಗಳಿಗೂ ಚಾಲನೆ ನೀಡಿದರು. ಈ ಯೋಜಿತ ವಿಸ್ತರಣೆ ಮುಂದಿನ ಕೆಲವು ವರ್ಷಗಳಲ್ಲಿ ಗಣಿಯ ವಾರ್ಷಿಕ ಚಿನ್ನದ ಉತ್ಪಾದನಾ ಸಾಮರ್ಥ್ಯವನ್ನು ಹಂತಹಂತವಾಗಿ ಗಣನೀಯವಾಗಿ ಹೆಚ್ಚಿಸಲು ರೂಪಿಸಲ್ಪಟ್ಟಿದೆ.

ಆಂಧ್ರದ ಸ್ವರ್ಣಗಿರಿ

ಭಾರತದ ಮೊದಲ ಖಾಸಗಿ ಚಿನ್ನದ ಗಣಿ ಆಂಧ್ರಪ್ರದೇಶದಲ್ಲಿ ಪ್ರಾರಂಭ



ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಸ್ವರ್ಣಗಿರಿ ಚಿನ್ನದ ಗಣಿಯಲ್ಲಿ ವಾಣಿಜ್ಯ ಉತ್ಪಾದನೆ ಅಧಿಕೃತವಾಗಿ ಆರಂಭವಾಗಿದ್ದು, ಇದು ಕಾರ್ಯಾಚರಣೆಯಲ್ಲಿರುವ ಭಾರತದ ಮೊದಲ ಖಾಸಗಿ ಚಿನ್ನದ ಗಣಿಯಾಗಿದೆ. ಈ ಐತಿಹಾಸಿಕ ಯೋಜನೆ, ದೇಶದ ಆಂತರಿಕ ಚಿನ್ನದ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸುವ ನಿರೀಕ್ಷೆಯಿದೆ. ಜತೆಗೆ 2,000 ವರ್ಷಗಳಿಗಿಂತಲೂ ಹೆಚ್ಚು ಹಳೆಯದಾದ ಗಣಿಗಾರಿಕೆಯ ಇತಿಹಾಸ ಹೊಂದಿರುವ ಈ ಸ್ಥಳಕ್ಕೆ ಮರುಜೀವ ನೀಡಲಿದೆ.

405 ಕೋಟಿ ರೂ. ಒಟ್ಟು ಹೂಡಿಕೆ ಮೊತ್ತ

400 ಕಿಲೋಗ್ರಾಂ 2026–27ರ ಉತ್ಪಾದನಾ ಗುರಿ

700 ಸ್ಥಳೀಯ ಉದ್ಯೋಗ ಸೃಷ್ಟಿ

600 ಹೆಕ್ಟರ್ ಒಟ್ಟು ವ್ಯಾಪ್ತಿ

ಸುದ್ದಿ ಸಮಗ್ರ



ಸ್ವರ್ಣಗಿರಿ ಎಂದು ಮರುನಾಮ

ಹಿಂದೆ ಜೊನ್ನಗಿರಿ ಎಂದು ಕರೆಯಲ್ಪಡುತ್ತಿದ್ದ ಈ ಗಣಿಗಾರಿಕೆ ಪ್ರದೇಶವನ್ನು ವಾಣಿಜ್ಯ ಕಾರ್ಯಾಚರಣೆ ಪ್ರಾರಂಭವಾಗುವ ಮುನ್ನ ಆಂಧ್ರಪ್ರದೇಶ ಸರ್ಕಾರ ಸ್ವರ್ಣಗಿರಿ ಎಂದು ಅಧಿಕೃತವಾಗಿ ಮರುನಾಮಕರಣ ಮಾಡಿದೆ. ಹೊಸದಾಗಿ ಹೆಸರಿಸಲಾದ ಈ ಪದದ ಅರ್ಥ 'ಚಿನ್ನದ ಪರ್ವತ' ಎಂದಾಗಿದ್ದು, ಈ ಪ್ರದೇಶ ಚಿನ್ನದ ಗಣಿಗಾರಿಕೆಯೊಂದಿಗೆ ಹೊಂದಿರುವ ಸುದೀರ್ಘ ಐತಿಹಾಸಿಕ ಸಂಬಂಧವನ್ನು ಪ್ರತಿಬಿಂಬಿಸಲು ಈ ಹೆಸರನ್ನು ಆಯ್ಕೆ ಮಾಡಲಾಗಿದೆ.



ಭವಿಷ್ಯದ ವಿಸ್ತರಣೆ

ಮೂಲ ಗಣಿಗಾರಿಕೆಯ ಜೊತೆಗೆ, ಆಂಧ್ರಪ್ರದೇಶ ಸರ್ಕಾರ ಸ್ವರ್ಣಗಿರಿ ಗಣಿಯ ಸಮೀಪದಲ್ಲೇ ವಿಶೇಷ ಚಿನ್ನದ ಆಭರಣ ತಯಾರಿಕಾ ಪಾರ್ಕ್ ಅನ್ನು ಸ್ಥಾಪಿಸುವ ಸಮಗ್ರ ಯೋಜನೆಯನ್ನು ಪ್ರಕಟಿಸಿದೆ. ಕಚ್ಚಾ ವಸ್ತುಗಳನ್ನು ಹೊರತೆಗೆಯುವ ಪ್ರಮುಖ ಮೂಲದ ಬಳಿಯೇ ಆಭರಣ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ಮೌಲ್ಯವರ್ಧನೆಗೆ ಪ್ರೋತ್ಸಾಹ ನೀಡಲು ಈ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ. ಇದು ಸಂಸ್ಕರಣೆಗಾಗಿ ದೂರದ ಕೇಂದ್ರಗಳಿಗೆ ಲೋಹವನ್ನು ಸಾಗಿಸುವ ಅಗತ್ಯವನ್ನು ತಪ್ಪಿಸುತ್ತದೆ. ಆಂಧ್ರಪ್ರದೇಶ, ಪ್ರಸ್ತುತ ಸಕ್ರಿಯ ಪರಿಶೋಧನೆಯ ಹಂತದಲ್ಲಿರುವ ಇನ್ನೂ ಹಲವಾರು ಭರವಸೆಯ ಚಿನ್ನದ ನಿಕ್ಷೇಪಗಳನ್ನು ಹೊಂದಿದೆ ಎಂದು ರಾಜ್ಯದ ಅಧಿಕಾರಿಗಳು ತಿಳಿಸಿದ್ದಾರೆ. ಭವಿಷ್ಯದಲ್ಲಿ ಈ ಹೆಚ್ಚುವರಿ ಖನಿಜ ನಿಕ್ಷೇಪಗಳನ್ನು ಯಶಸ್ವಿಯಾಗಿ ಗುರುತಿಸಿ ಅಭಿವೃದ್ಧಿಪಡಿಸಿದರೆ, ಆಂಧ್ರಪ್ರದೇಶ ಭಾರತದ ಪ್ರಮುಖ ಚಿನ್ನದ ಗಣಿಗಾರಿಕೆ ತಾಣವಾಗಿ ಹೊರಹೊಮ್ಮಲಿದೆ.

ಉತ್ಪಾದನೆಯ ಗುರಿಗಳು

ಕಾರ್ಯಾಚರಣೆಯ ಮುನ್ಸೂಚನೆಗಳ ಪ್ರಕಾರ, ಸ್ವರ್ಣಗಿರಿ ಗಣಿ 2026–27ರ ಹಣಕಾಸು ವರ್ಷದಲ್ಲಿ ಸುಮಾರು 400 ಕಿಲೋಗ್ರಾಂ ಚಿನ್ನವನ್ನು ಉತ್ಪಾದಿಸುವ ನಿರೀಕ್ಷೆಯಿದೆ. ಹೊಸದಾಗಿ ಪ್ರಾರಂಭಿಸಲಾದ ಎರಡನೇ ಹಂತದ ವಿಸ್ತರಣೆ ಯಶಸ್ವಿಯಾಗಿ ಪೂರ್ಣಗೊಂಡ ನಂತರ, ಈ ಸ್ಥಳದಲ್ಲಿ ವಾರ್ಷಿಕ ಚಿನ್ನದ ಉತ್ಪಾದನೆ ಸುಮಾರು ಎರಡು ಟನ್‌ಗಳಿಗೆ ಏರಲಿದೆ. ಈ ಪ್ರಮಾಣದ ಬೆಳವಣಿಗೆಯು ಈ ಗಣಿಯನ್ನು ದೇಶದ ಅತಿ ದೊಡ್ಡ ಚಿನ್ನ ಉತ್ಪಾದನಾ ಕೇಂದ್ರಗಳಲ್ಲಿ ಒಂದನ್ನಾಗಿ ಮಾಡಲಿದೆ. ಈ ಬೃಹತ್ ಯೋಜನೆಯನ್ನು ಸುಮಾರು 405 ಕೋಟಿ ರೂ. ಗಳ ಅಂದಾಜು ಹೂಡಿಕೆಯೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಈ ಸಂಪೂರ್ಣ ಮೂಲಸೌಕರ್ಯ ಮತ್ತು ಗಣಿಗಾರಿಕೆ ಗುತ್ತಿಗೆ ಪ್ರದೇಶವು ಕರ್ನೂಲು ಜಿಲ್ಲೆಯ ಸುಮಾರು 600 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತರಿಸಿದೆ. ಇದರ ಪರಿಣಾಮವಾಗಿ, ಆಂಧ್ರಪ್ರದೇಶ ರಾಜ್ಯ ಸರ್ಕಾರ ಹೊರತೆಗೆಯಲಾದ ಚಿನ್ನದ ಪ್ರಮಾಣದ ಆಧಾರದ ಮೇಲೆ ಪ್ರತಿವರ್ಷ ಗಣನೀಯ ರಾಯಲ್ಟಿ ಆದಾಯ ಪಡೆಯುವ ನಿರೀಕ್ಷೆಯಲ್ಲಿದೆ.

ಸುಧಾರಿತ ತಂತ್ರಜ್ಞಾನಗಳ ಬಳಕೆ

ಪ್ರಾಚೀನ ಸಾಂಪ್ರದಾಯಿಕ ವಿಧಾನಗಳಿಂದ ಆಧುನಿಕ ಖಾಸಗಿ ಉದ್ಯಮದ ಕಡೆಗಿನ ಈ ಪರಿವರ್ತನೆ, ಭಾರತದ ಖನಿಜ ಸಂಪನ್ಮೂಲ ನಿರ್ವಹಣಾ ನೀತಿಯಲ್ಲಿ ಪ್ರಮುಖ ಬದಲಾವಣೆಯನ್ನು ಸೂಚಿಸುತ್ತದೆ. ಚಿನ್ನದ ಗಣಿಗಾರಿಕೆ ವಲಯವನ್ನು ಖಾಸಗಿ ಬಂಡವಾಳ ಹೂಡಿಕೆಗೆ ಮುಕ್ತಗೊಳಿಸುವ ಮೂಲಕ, ಶತಮಾನಗಳಿಂದ ಅನ್ವೇಷಿಸಲ್ಪಡದೆ ಉಳಿದಿರುವ ಆಳವಾದ ನಿಕ್ಷೇಪಗಳನ್ನು ಸುರಕ್ಷಿತವಾಗಿ ಹೊರತೆಗೆಯಲು ಸುಧಾರಿತ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಉದ್ದೇಶವನ್ನು ಸರ್ಕಾರ ಹೊಂದಿದೆ.

ಐತಿಹಾಸಿಕ ಹಿನ್ನೆಲೆ

ಇತಿಹಾಸಕಾರರು ಮತ್ತು ಪುರಾತತ್ವ ತಜ್ಞರ ಪ್ರಕಾರ, ಕರ್ನೂಲು ಪ್ರದೇಶ ಐತಿಹಾಸಿಕ ಮೌರ್ಯ ಸಾಮ್ರಾಜ್ಯದ ಅವಧಿಯಲ್ಲಿ ಅತ್ಯಂತ ಪ್ರಮುಖ ಚಿನ್ನ ಉತ್ಪಾದನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿತ್ತು. ಈ ಗಣಿಗಾರಿಕೆ ಚಟುವಟಿಕೆಯು ಪ್ರಮುಖವಾಗಿ ಕ್ರಿ.ಪೂ 3ನೇ ಶತಮಾನದಲ್ಲಿ ಸಾಮ್ರಾಟ್ ಅಶೋಕನ ಆಳ್ವಿಕೆಯ ಅವಧಿಯಲ್ಲಿ ವ್ಯಾಪಕವಾಗಿ ನಡೆದಿತ್ತು. ಈ ಪ್ರದೇಶದ ಸುತ್ತಮುತ್ತ ಪತ್ತೆಯಾಗಿರುವ ಪ್ರಾಚೀನ ಶಿಲಾಶಾಸನಗಳು ಇಲ್ಲಿ ನಡೆದಿದ್ದ ಐತಿಹಾಸಿಕ ಗಣಿಗಾರಿಕೆ ಚಟುವಟಿಕೆಗಳಿಗೆ ಸ್ಪಷ್ಟ ಪುರಾವೆಗಳನ್ನು ಒದಗಿಸುತ್ತವೆ.

ಆರ್ಥಿಕ ಪರಿಣಾಮಗಳು

ನೇರ ಖನಿಜ ಆದಾಯದ ಜೊತೆಗೆ, ಈ ಕೈಗಾರಿಕಾ ಯೋಜನೆ ಸುಮಾರು 700 ನೇರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ಈ ಉದ್ಯೋಗಾವಕಾಶಗಳಲ್ಲಿ ಹೆಚ್ಚಿನ ಪಾಲನ್ನು ಹತ್ತಿರದ ಗ್ರಾಮಗಳ ನಿವಾಸಿಗಳಿಗೆ ನೀಡಲು ಉದ್ದೇಶಿಸಲಾಗಿದೆ. ಇದರಿಂದಾಗಿ ಸ್ಥಳೀಯ ಗ್ರಾಮೀಣ ಆರ್ಥಿಕತೆಗೆ ಪ್ರಮುಖ ಆರ್ಥಿಕ ಉತ್ತೇಜನ ಸಿಗಲಿದೆ. ಐತಿಹಾಸಿಕವಾಗಿ, ನೆರೆಯ ಕರ್ನಾಟಕದಲ್ಲಿರುವ ಹಟ್ಟಿ ಚಿನ್ನದ ಗಣಿ ಭಾರತದ ಆಂತರಿಕ ಚಿನ್ನದ ಉತ್ಪಾದನೆಯ ಬಹುಪಾಲು ಪಾಲನ್ನು ಹೊಂದಿತ್ತು. ಆದ್ದರಿಂದ ಸ್ವರ್ಣಗಿರಿ ಯೋಜನೆ, ದೇಶೀಯ ಪೂರೈಕೆ ಸರಪಳಿಯನ್ನು ವೈವಿಧ್ಯಗೊಳಿಸಲು, ದೇಶದ ಒಟ್ಟು ಆಂತರಿಕ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಭಾರತ ಆಮದು ಮಾಡಿಕೊಳ್ಳುವ ಚಿನ್ನದ ಮೇಲಿನ ದೀರ್ಘಕಾಲೀನ ಅವಲಂಬನೆಯನ್ನು ಹಂತಹಂತವಾಗಿ ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಅಂದಾಜಿಸಲಾಗಿದೆ.

ಕಿರು ಸುದ್ದಿ

ನಾಳೆಯಿಂದ ಪ್ರಧಾನಿ ಸೀಶೆಲ್ಸ್ ಪ್ರವಾಸ ಶುರು

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಸೀಶೆಲ್ಸ್ ಪ್ರವಾಸ ಕೈಗೊಳ್ಳಲಿದ್ದು, ಸೀಶೆಲ್ಸ್ ರಾಷ್ಟ್ರೀಯ ದಿನದ ಸುವರ್ಣ ಮಹೋತ್ಸವದಲ್ಲಿ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ(ಎಂಇಎ) ತಿಳಿಸಿದೆ. ಈ ಸಂಭ್ರಮಾಚರಣೆಯಲ್ಲಿ ಭಾರತೀಯ ಸೇನಾ ತುಕಡಿ ಹಾಗೂ ನೌಕಾಪಡೆಯ ಎರಡು ಯುದ್ಧನೌಕೆಗಳು ಪಾಲ್ಗೊಳ್ಳಲಿವೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ಜೂ.27ರಿಂದ 29ರವರೆಗೆ ಪ್ರಧಾನಿ ಮೋದಿ ಸೀಶೆಲ್ಸ್‌ನಲ್ಲಿಯೇ ಇದ್ದು, ಅಲ್ಲಿನ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರೊಂದಿಗೆ ಎಲ್ಲಾ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಒಪ್ಪಂದ ಬಲವರ್ಧನೆಗಾಗಿ ಚರ್ಚಿಸಲಿದ್ದಾರೆ.

ಪ್ರಾಜೆಕ್ಟ್ ಹಾಕ್ ಐ: ಅಮರನಾಥ ಯಾತ್ರೆ ಸುರಕ್ಷತೆಗೆ ಚಾಲನೆ

• **ಶ್ರೀನಗರ:** ಪಹಲ್ಗಾಮ್ ಮೂಲಕ ಸಾಗುವ ಸಾಂಪ್ರದಾಯಿಕ ಅಮರನಾಥ ಯಾತ್ರಾ ಮಾರ್ಗದ ಸುರಕ್ಷತೆಗಾಗಿ ಪೊಲೀಸರು ಪ್ರಾಜೆಕ್ಟ್ ಹಾಕ್ ಐ ಯೋಜನೆಗೆ ಚಾಲನೆ ನೀಡಿದ್ದಾರೆ. ಈ 57 ದಿನಗಳ ಸುದೀರ್ಘ ತೀರ್ಥಯಾತ್ರೆ ಜುಲೈ 3ರಂದು ಪ್ರಾರಂಭವಾಗಿ ಆ.28ರಂದು ಮುಕ್ತಾಯಗೊಳ್ಳಲಿದೆ.ಅನಂತನಾಗ್ ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಈ ಭದ್ರತಾ ಯೋಜನೆ, ಐದು ಡ್ರೋನ್ ತಂಡಗಳು, 28 ಎತ್ತರದ ವೀಕ್ಷಣಾ ಗೋಪುರಗಳು ಮತ್ತು 22 ಸ್ನೈಪರ್ ತಂಡಗಳನ್ನು ಒಳಗೊಂಡಿದೆ. ನಿರಂತರ ನೈಜ-ಸಮಯದ ಕಣ್ಗಾವಲಿಗಾಗಿ ಅಧಿಕಾರಿಗಳು 416 ಪೈ-ಟಿಲ್ಟ್-ಜೂಮ್ ಸಿಸಿಟಿವಿ ಕ್ಯಾಮೆರಾಗಳು ಮತ್ತು ಮುಖ ಗುರುತಿಸುವಿಕೆ ತಂತ್ರಜ್ಞಾನ ಮೂಲಸೌಕರ್ಯವನ್ನು ಅಳವಡಿಸಿದ್ದಾರೆ.

ಚೀನಾ ಮೂಲದ ಹೂಡಿಕೆಗೆ ಕೇಂದ್ರ ಅನುಮತಿ ಸಾಧ್ಯತೆ

• **ಹೊಸದಿಲ್ಲಿ:** ಕೆಲದಿನಗಳ ದಶಕದಲ್ಲಿ ಮೊದಲ ಬಾರಿಗೆ ಆಟೋಮೊಬೈಲ್ ಉದ್ಯಮದಲ್ಲಿ ಚೀನಾ ಬೆಂಬಲಿತ ಕಂಪನಿಯ ಹೂಡಿಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡುವ ಸಾಧ್ಯತೆಯಿದೆ. ಚೀನಾ ಬೆಂಬಲಿತ ಆಟೋಮೊಬೈಲ್ ಹೈಬ್ರಿಡ್ ಕಾರು ಇಂಜಿನ್ ತಯಾರಕ ಹಾರ್ಸ್ ಪವರ್‌ಟ್ರೈನ್ ಲಿ. ದೇಶದಲ್ಲಿ 370 ದಶಲಕ್ಷ ಡಾಲರ್ ಹೂಡಿಕೆ ಮಾಡಲು ಮುಂದಾಗಿದೆ. ಚೆನ್ನೈನ ರೆನೋ ಘಟಕದಲ್ಲಿ ಹೈಬ್ರಿಡ್ ಇಂಜಿನ್‌ಗಳನ್ನು ಹಾರ್ಸ್ ಪವರ್‌ಟ್ರೈನ್ ಲಿ. ನಿರ್ಮಿಸುವ ಸಾಧ್ಯತೆಯಿದೆ. ದೇಶೀಯ ಉತ್ಪಾದನೆಗೆ ಉತ್ತೇಜನ ನೀಡುವ ಹಾಗೂ ಹೈಬ್ರಿಡ್ ವಾಹನಗಳಿಗೆ ಹೆಚ್ಚುತ್ತಿರುವ ಬೇಡಿಕೆಯಿಂದ ಕೇಂದ್ರ ಸರ್ಕಾರ ತನ್ನ ನೀತಿಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದು, ಈ ಹೂಡಿಕೆಗೆ ಅನುಮತಿ ನೀಡುವ ಸಾಧ್ಯತೆಯಿದೆ.

ಸುಂಕ ಲಾಭ ಚೌಕಟ್ಟಿಲ್ಲದೆ ಒಪ್ಪಂದವಿಲ್ಲ: ಗೋಯಲ್

• **ಹೊಸದಿಲ್ಲಿ:** ಇತರ ಸ್ಪರ್ಧಾತ್ಮಕ ದೇಶಗಳಿಗಿಂತ ಭಾರತದ ರಫ್ತುಗಳಿಗೆ ತುಲನಾತ್ಮಕ ಸುಂಕ ಅನುಕೂಲ ಖಾತ್ರಿಯ ಚೌಕಟ್ಟೊಂದನ್ನು ಹೊಂದುವ ವರೆಗೆ ಅಮೆರಿಕದ ಜೊತೆಗೆ ಯಾವುದೇ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಭಾರತ ಮುಂದಾಗುವುದಿಲ್ಲ ಎಂಬುದಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಸ್ಪಷ್ಟಪಡಿಸಿದ್ದಾರೆ. ಅಮೆರಿಕದ ಜೊತೆಗಿನ ಸಂಧಾನ ಕುರಿತಂತೆ ಮಾತನಾಡಿದ ಅವರು, ಚರ್ಚೆಗಳು ಮುಂದುವರಿದಿದ್ದು, ಈಗ ಭಾರತಕ್ಕೆ ಅಮೆರಿಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆಯಲ್ಲಿ ಮೇಲುಗೈ ಲಭಿಸುವಂತಹ ತುಲನಾತ್ಮಕ ಸುಂಕ ಚೌಕಟ್ಟೊಂದನ್ನು ರೂಪಿಸುವುದಕ್ಕೆ ಹೆಚ್ಚು ಒತ್ತು ನೀಡಿದ್ದೇವೆ .ಸ್ಪರ್ಧಾತ್ಮಕತೆಯ ಅನುಕೂಲತೆಯನ್ನು ಹೊಂದುವ ಚೌಕಟ್ಟೊಂದು ರೂಪುಗೊಳ್ಳದ ಹೊರತು ನಾವು ಅಮೆರಿಕದ ಜತೆ ಒಪ್ಪಂದಕ್ಕೆ ಮುಂದಾಗುವುದಿಲ್ಲ ಎಂದಿದ್ದಾರೆ.



ಕಳೆದ ಫೆ.6ರಂದು ಉಭಯ ದೇಶಗಳು ವ್ಯಾಪಾರ ಒಪ್ಪಂದ ಕುರಿತ ವಿಶಾಲ ರೂಪುರೇಷೆಗಳ ಬಗ್ಗೆ ಒಪ್ಪಿಕೊಂಡಿವೆ. ಆನಂತರ ಉಭಯ ದೇಶಗಳು ಸೂಕ್ಷ್ಮ ಅಂಶಗಳ ಕುರಿತು ಕೆಲಸ ಮಾಡುತ್ತಿವೆ .ಅಮೆರಿಕವು ಸ್ಪರ್ಧಾತ್ಮಕತೆಯ ಅನುಕೂಲವನ್ನು ಭಾರತಕ್ಕೆ ಒದಗಿಸಬಹುದಾಗಿದ್ದು , ಈಗ ಕಾನೂನು ಮತ್ತು ನೀತಿ ವ್ಯವಸ್ಥೆಗಳ ಚರ್ಚೆಗಳು ನಡೆಯುತ್ತಿವೆ .ಭಾರತಕ್ಕೆ ಕಾನೂನಾತ್ಮಕ ಮತ್ತು ನೀತಿಯ ನೆಲೆಯಲ್ಲಿ ಬಲ ಅಗತ್ಯವಿದೆ ಎಂದು ಅವರು ವಿವರಿಸಿದರು. ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ(ಬಿಟಿಎ)ದ ಮೊದಲ ಹಂತವನ್ನು ಅಂತಿಮಗೊಳಿಸಿದಾಗ ಭಾರತಕ್ಕೆ ವಿಧಿಸಲಾಗಿರುವ ಸುಂಕವನ್ನು ಶೇ.25ರಿಂದ ಶೇ.18ಕ್ಕೆ ಇಳಿಸಲು ಅಮೆರಿಕ ಒಪ್ಪಿತ್ತು.

ದಂಗೆ ಎದ್ದ ಪಿಒಕೆಗೆ ಪಾಕಿಸ್ತಾನ ದಿಗ್ಬಂಧನ

• **ಇಸ್ಲಾಮಾಬಾದ್:** ಸ್ವಾರ್ಥಿ ಪಾಕಿಸ್ತಾನ ತನ್ನ ನಾಗರಿಕರನ್ನೇ ಉಪವಾಸಕ್ಕೆ ತಳ್ಳುತ್ತಿರುವುದು ವಿಪರ್ಯಾಸ. ಸರ್ಕಾರದ ವಿರುದ್ಧ ದಂಗೆ ಎದ್ದ ಒಂದೇ ಒಂದು ಕಾರಣಕ್ಕೆ ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಆಹಾರ, ಔಷಧ ನೀಡದೇ ದಿಗ್ಬಂಧನ ಹೇರಿದೆ. ಈ ಬಗ್ಗೆ ನಿವಾಸಿಗಳು, ಟ್ರಕ್ ಚಾಲಕರು ಸ್ಥಳೀಯ ಮಾಧ್ಯಮಗಳಿಗೆ ತಿಳಿಸಿದ್ದು, ಅಗತ್ಯ ಸರಕುಗಳನ್ನು ಸಾಗಿಸುವ ವಾಹನಗಳನ್ನು ಪ್ರದೇಶವನ್ನು ಪ್ರವೇಶಿಸದಂತೆ ತಡೆಯಲಾಗುತ್ತಿದೆ ಎಂದಿದ್ದಾರೆ. ಈ ಪ್ರದೇಶದಲ್ಲಿ ಆರ್ಥಿಕ ಮತ್ತು ರಾಜಕೀಯ ಕುಂದುಕೊರತೆಗಳನ್ನು ಪ್ರಸ್ತಾಪಿಸಿ, ಪ್ರತಿಭಟನೆಗಳನ್ನು ಮುನ್ನಡೆಸುತ್ತಿರುವ ಪ್ರಮುಖ ನಾಗರಿಕ ಸಮಾಜದ ಒಕ್ಕೂಟವಾದ ಜಂಟಿ ಅವಾಮಿ ಕ್ರಿಯಾ ಸಮಿತಿ (ಜೆಎಎಸಿ)ಯನ್ನು ನಿಷೇಧಿಸಿದ ಬಳಿಕ ಪ್ರತಿಭಟನೆ ಭುಗಿಲೆದ್ದಿತ್ತು. ಆದರೇ ಪಾಕಿಸ್ತಾನಿ ಅಧಿಕಾರಿಗಳು ದಿಗ್ಬಂಧನ ಆರೋಪವನ್ನು ತಳ್ಳಿ ಹಾಕಿದ್ದಾರೆ. ಕೆಲವು ಮಾಧ್ಯಮಗಳ ಪ್ರಕಾರ, ಪ್ರತಿಭಟನೆಗಳು, ಧರಣಿಗಳು ಮತ್ತು ವ್ಯಾಪಾರ ಮುಷ್ಕರಗಳಿಂದ ಈ ಪ್ರದೇಶದ ಹಲವಾರು ಪಟ್ಟಣಗಳಲ್ಲಿ ದೈನಂದಿನ ಜೀವನವನ್ನು ಸ್ಥಗಿತಗೊಳಿಸಿವೆ. ಪ್ರತಿಭಟನೆ ಭುಗಿಲೆದ್ದ ದಿನದಿಂದ ಪಿಒಕೆಯ ದೈನಂದಿನ ಜೀವನವು ತೀವ್ರವಾಗಿ ಅಸ್ತವ್ಯಸ್ತಗೊಂಡಿದೆ. ಸಾರಿಗೆ ಜಾಲಗಳನ್ನು ದುರ್ಬಲಗೊಳಿಸಲಾಗಿದ್ದು, ಸರಕು ಮತ್ತು ಸೇವೆಗಳ ಸಂಚಾರವನ್ನು ಅಡ್ಡಿಪಡಿಸಿದೆ. ಪಾಕಿಸ್ತಾನಿ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಈ ಪ್ರದೇಶಕ್ಕೆ ಆಹಾರ, ಇಂಧನ ಮತ್ತು ವೈದ್ಯಕೀಯ ಸರಬರಾಜುಗಳ ಸಾಗಣೆಯನ್ನು ನಿರ್ಬಂಧಿಸುತ್ತಿರುವುದರಿಂದ ಬಿಕ್ಕಟ್ಟು ಉಲ್ಬಣಗೊಂಡಿದೆ ಎಂದು ನಿವಾಸಿಗಳು ಮತ್ತು ವಿರೋಧ ಪಕ್ಷಗಳು ಆರೋಪಿಸಿವೆ.


ಕನಿಷ್ಕಾ ಸ್ಫೋಟ ಖಲಿಸ್ತಾನಿ ಉಗ್ರರ ಕುಕೃತ್ಯ: ಕೆನಡಾ

• **ಒಟ್ಟಾವಾ:** ಏರ್ ಇಂಡಿಯಾದ ಕನಿಷ್ಕಾ ವಿಮಾನವನ್ನು 1985ರಲ್ಲಿ ಬಾಂಬ್ ಸ್ಫೋಟಿಸಿ 329 ಮಂದಿಯನ್ನು ಹತ್ಯೆಗೈದ ಕುಕೃತ್ಯದ ಹಿಂದೆ ಕೆನಡಾ ಮೂಲದ ಖಲಿಸ್ತಾನಿ ಉಗ್ರರ ಕೈವಾಡವಿತ್ತು ಎಂದು ಕೆನಡಾದ ಭದ್ರತಾ ಗುಪ್ತಚರ ಸೇವೆ ಮೊದಲ ಬಾರಿಗೆ ಸ್ಪಷ್ಟವಾಗಿ ಒಪ್ಪಿಕೊಂಡಿದೆ. ಭಾರತವು ಆರಂಭದಿಂದಲೂ ಇದು ಖಲಿಸ್ತಾನಿ ಉಗ್ರರ ಸಂಚು ಎಂದು ಪ್ರತಿಪಾದಿಸುತ್ತಲೇ ಬಂದಿದ್ದರೂ, ಕೆನಡಾದ ಸರ್ಕಾರಗಳು ಈವರೆಗೆ ಅಧಿಕೃತ ಹೇಳಿಕೆಗಳಲ್ಲಿ ಖಲಿಸ್ತಾನಿ ಎಂಬ ಪದವನ್ನು ನೇರವಾಗಿ ಬಳಸಲು ಹಿಂದೇಟು ಹಾಕುತ್ತಿದ್ದವು. ಇದೀಗ ಕೆನಡಾದ ಪ್ರಮುಖ ಗುಪ್ತಚರ ಸಂಸ್ಥೆಯ ಹೇಳಿಕೆಯು ಖಲಿಸ್ತಾನಿ ಉಗ್ರವಾದದ ಬಗ್ಗೆ ಭಾರತ ವ್ಯಕ್ತಪಡಿಸುತ್ತಿದ್ದ ಕಳವಳಕ್ಕೆ ಪುಷ್ಟಿ ನೀಡಿದೆ. ದುರಂತದ ಸ್ಮರಣಾರ್ಥ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿರುವ ಸಂದೇಶದಲ್ಲಿ, 1985ರ ಜೂ.23ರಂದು ಕೆನಡಾ ಮೂಲದ ಖಲಿಸ್ತಾನಿ ಉಗ್ರರು ಇರಿಸಿದ್ದ ಬಾಂಬ್‌ನಿಂದ ಏರ್ ಇಂಡಿಯಾ ವಿಮಾನ ಸ್ಫೋಟವಾಗಿದ್ದು, ಅದರಲ್ಲಿದ್ದ ಎಲ್ಲರೂ ಮೃತಪಟ್ಟಿದ್ದರು. ಕೆನಡಾದ ಇತಿಹಾಸದಲ್ಲಿಯೇ ಇದು ಅತ್ಯಂತ ಭೀಕರ ಭಯೋತ್ಪಾದಕ ದಾಳಿ ಎಂದು ಗುಪ್ತಚರ ಸಂಸ್ಥೆ ತಿಳಿಸಿದೆ.

ಬೋಯಿಂಗ್ 747 ಮಾದರಿಯ ಏರ್ ಇಂಡಿಯಾ ವಿಮಾನಕ್ಕೆ ಎಂಪರರ್ ಕನಿಷ್ಕಾ ಎಂದು ಹೆಸರಿಡಲಾಗಿತ್ತು. ವಿಮಾನದ ಸರಕು ವಿಭಾಗದಲ್ಲಿ ಇರಿಸಲಾಗಿದ್ದ ಬಾಂಬ್ ಅಟ್ಲಾಂಟಿಕ್ ಸಾಗರದ ಮೇಲೆ ಸ್ಫೋಟಗೊಂಡಿತ್ತು. ವಿಮಾನದಲ್ಲಿದ್ದ ಪ್ರಯಾಣಿಕರು ಹಾಗೂ ಸಿಬ್ಬಂದಿ ಸೇರಿದಂತೆ 329 ಮಂದಿ ಮೃತಪಟ್ಟಿದ್ದರು. ಮೃತರಲ್ಲಿ 268 ಮಂದಿ ಕೆನಡಾ ನಾಗರಿಕರಾಗಿದ್ದರು.

ಐಎಎಫ್ ನೇತ್ರಾ ಕಣ್ಗಾವಲು ವ್ಯವಸ್ಥೆಗೆ ಅಂತಿಮ ಅನುಮತಿ

• **ಹೊಸದಿಲ್ಲಿ:** ಸ್ವದೇಶಿ ನಿರ್ಮಿತ ನೇತ್ರಾ ಕಣ್ಗಾವಲು ಮತ್ತು ನಿಯಂತ್ರಣ ವ್ಯವಸ್ಥೆಗೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಅಂತಿಮ ಕಾರ್ಯಾಚರಣಾ ಅನುಮತಿ(ಎಫ್‌ಒಸಿ) ನೀಡಿದೆ. ಇದರೊಂದಿಗೆ ಭಾರತೀಯ ವಾಯುಪಡೆ (ಐಎಎಫ್) ವೈಮಾನಿಕ ಕಣ್ಗಾವಲು ಮತ್ತು ಯುದ್ಧ ನಿರ್ವಹಣಾ ಸಾಮರ್ಥ್ಯ ಬಲವರ್ಧನೆಯಲ್ಲಿ ಹೊಸ ಮೈಲಿಗಲ್ಲು ಬರೆದಿದೆ. ಇದು ಆಪರೇಷನ್ ಸಿಂದೂರ ಮತ್ತು ಬಾಲಾಕೋಟ್ ದಾಳಿಗಳಲ್ಲಿ ಬಳಕೆಯಾಗಿತ್ತು ಎಂದು ವಾಯು ಸಿಬ್ಬಂದಿ ಉಪ ಮುಖ್ಯಸ್ಥ ಏರ್ ಮಾರ್ಷಲ್ ಅವಧೇಶ್ ಕುಮಾರ್ ಭಾರ್ತಿ ತಿಳಿಸಿದ್ದಾರೆ. ನೇತ್ರಾಗೆ ಆರಂಭಿಕ ಕಾರ್ಯಾಚರಣಾ ಅನುಮತಿ(ಐಒಸಿ)ಯನ್ನು 2017ರಲ್ಲಿ ನೀಡಲಾಗಿತ್ತು. ವೈಮಾನಿಕ ಕಣ್ಗಾವಲು, ಸಂದರ್ಭದ ಅರಿವು ಮತ್ತು ಯುದ್ಧ ನಿರ್ವಹಣಾ ಸಾಮರ್ಥ್ಯದೊಂದಿಗೆ ವಿನ್ಯಾಸಗೊಳಿಸಲಾಗಿದೆ.



ಮೋದಿ ಭೇಟಿ ಬಳಿಕ ಅಮೆಜಾನ್ ಸಿಇಒ ಘೋಷಣೆ

48 ಶತಕೋಟಿ ಡಾಲರ್ ಹೂಡಿಕೆ

• **ಹೊಸದಿಲ್ಲಿ:** ಮುಂದಿನ 5 ವರ್ಷಗಳಲ್ಲಿ ಭಾರತದಲ್ಲಿ ಹೆಚ್ಚುವರಿಯಾಗಿ 48 ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಅಮೆಜಾನ್ ಘೋಷಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರುವಾರ ಭೇಟಿಯಾದ ಬಳಿಕ ಅಮೆಜಾನ್ ಸಿಇಒ ಆ್ಯಂಡಿ ಜೆಸ್ಸಿ ಈ ಘೋಷಣೆಯನ್ನು ಮಾಡಿದ್ದಾರೆ. ಈ ಬಾರಿ ಅಮೆಜಾನ್ 13 ಶತಕೋಟಿ ಡಾಲರ್ ಹೆಚ್ಚುವರಿ ಹೂಡಿಕೆ ಮಾಡಲಿದೆ. ಅಮೆಜಾನ್ ಕಂಪನಿಯ ಪಾಲಿಗೆ ಭಾರತವು ಜಾಗತಿಕ ಮಟ್ಟದಲ್ಲೇ ಅತ್ಯಂತ ಪ್ರಮುಖ ಮಾರುಕಟ್ಟೆಯಾಗಿದೆ. ಕಂಪನಿಯ ಹೊಸ ಹೂಡಿಕೆಗಳು ಭಾರತೀಯ ಮಾರುಕಟ್ಟೆಗೆ ಅಮೆಜಾನ್ ಬದ್ಧತೆಯನ್ನು ತೋರಿಸುತ್ತದೆ. ಅಮೆಜಾನ್‌ನ ಭಾರತದ ವ್ಯವಹಾರವು ಅತ್ಯಂತ ಅವೇಗದಲ್ಲಿ ಮುನ್ನುಗ್ಗುತ್ತಿದೆ. ಭಾರತದಲ್ಲಿ ಅಮೆಜಾನ್‌ನ ಇ-ಕಾಮರ್ಸ್, ಅಮೆಜಾನ್ ವೆಬ್ ಹಾಗೂ ಕ್ಲೌಡ್ ಕಂಪ್ಯೂಟಿಂಗ್ ಸೇವೆಗಳಿಗೆ ಅತ್ಯಂತ ಗ್ರಾಹಕ ಬೇಡಿಕೆಯಿದೆ ಎಂದು ಸಿಇಒ ಜೆಸ್ಸಿ ಹೇಳಿದ್ದಾರೆ.



ಕೇಂದ್ರ ಸರ್ಕಾರ ಡಿಜಿಟಲ್ ಆರ್ಥಿಕತೆ ವಿಸ್ತರಿಸಿದ್ದು, ಅಮೆಜಾನ್ ಕ್ಲೌಡ್ ಮತ್ತು ಎಐ ಸೇವೆಗಳ ಗ್ರಾಹಕರ ಸಂಖ್ಯೆ ಮತ್ತು ಬೇಡಿಕೆಗಳೂ ಹೆಚ್ಚುತ್ತಿವೆ. ಇದರಿಂದ ಜಾಗತಿಕ ಟೆಕ್ ದೈತ್ಯ ಅಮೆಜಾನ್ ಭಾರತದಲ್ಲಿ ಹೂಡಿಕೆಯನ್ನು ಹೆಚ್ಚಿಸುವುದಾಗಿ ಘೋಷಿಸಿದೆ. ಕಳೆದೊಂದು ದಶಕದಿಂದ ಕಂಪನಿ ಭಾರತದಲ್ಲಿ ತನ್ನ ಹೂಡಿಕೆಯನ್ನು ಹೆಚ್ಚಿಸುತ್ತಲೇ ಬಂದಿದೆ. ವಿಶ್ವದ ಅತಿ ವೇಗದ ಪ್ರಗತಿ ಕಾಣುತ್ತಿರುವ ಆರ್ಥಿಕತೆಯಲ್ಲಿ ಲಾಜಿಸ್ಟಿಕ್ಸ್, ಸಂಪರ್ಕಜಾಲ, ತಂತ್ರಜ್ಞಾನ ಮೂಲಸೌಕರ್ಯ, ಎಐ ಹಾಗೂ ಡಿಜಿಟಲ್ ಸೇವೆಗಳಲ್ಲಿ ಆಳವಾಗಿ ಬೇರೂರುವಲ್ಲಿ ಅಮೆಜಾನ್ ಯಶಸ್ವಿಯಾಗಿದೆ.

ಅಮೆಜಾನ್ ಹೂಡಿಕೆಗೆ ಪ್ರಧಾನಿ ಸ್ವಾಗತ: ಅಮೆಜಾನ್‌ನ ದಾಖಲೆಯ 48 ಶತಕೋಟಿ ಡಾಲರ್ ಹೂಡಿಕೆ ಘೋಷಣೆಯನ್ನು ಪ್ರಧಾನಿ ಮೋದಿ ಸ್ವಾಗತಿಸಿದ್ದಾರೆ. ಅಲ್ಲದೆ, ಅಮೆಜಾನ್ ಹೂಡಿಕೆಯಿಂದ ದೇಶದ ಯುವಜನತೆಗೆ ಹೊಸ ಅವಕಾಶಗಳನ್ನು ಒದಗಿಸಲಿದೆ ಎಂದು ಪ್ರಧಾನಿ ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಪ್ರಧಾನಿ ಮೋದಿಯವರ ಭೇಟಿಯ ಬಳಿಕ ಭಾರತದಲ್ಲಿನ ದೀರ್ಘಕಾಲದ ಹೂಡಿಕೆ ಬದ್ಧತೆಯನ್ನು ಸಿಇಒ ಜೆಸ್ಸಿ ಪುನರುಚ್ಚರಿಸಿದ್ದಾರೆ.

ಎನ್‌ಸಿಇಆರ್‌ಟಿ ನಿರ್ಧಾರಕ್ಕೆ ಸಚಿವ ಪ್ರಧಾನ್ ಶ್ಲಾಘನೆ

ಸಮಾಜ ವಿಜ್ಞಾನದಲ್ಲಿ ತುರ್ತು ಪರಿಸ್ಥಿತಿ ಪಾಠ

• **ಹೊಸದಿಲ್ಲಿ :** ತುರ್ತು ಪರಿಸ್ಥಿತಿಗೆ ಸಂಬಂಧಪಟ್ಟ ಪಾಠವನ್ನು 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಕ್ಕೆ ಎನ್‌ಸಿಇಆರ್‌ಟಿ ಸೇರ್ಪಡೆ ಮಾಡಿದೆ. ತುರ್ತು ಪರಿಸ್ಥಿತಿ ಭಾರತದ ಪ್ರಜಾಸತ್ತೆಗೊಂದು ಪ್ರಮುಖ ಸವಾಲಾಗಿದೆ ಎಂದು ಎನ್‌ಸಿಇಆರ್‌ಟಿ ವಿಶ್ಲೇಷಿಸಿದೆ. ದೇಶದಲ್ಲಿ ಹಿಂದೆ ನಡೆದಿರುವ ಕರಾಳ ಕೃತ್ಯಗಳನ್ನು ಭಾವೀ ಪೀಳಿಗೆ ಅರಿಯಬೇಕು ಎಂದು ಎನ್‌ಸಿಇಆರ್‌ಟಿಯ ಯೋಜನೆಯನ್ನು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಶ್ಲಾಘಿಸಿದ್ದಾರೆ. 1970ರ ಆರಂಭದಲ್ಲಿ ಇಂದಿರಾಗಾಂಧಿ ನೇತೃತ್ವದ ಸರಕಾರದ ಆಡಳಿತ ವೈಖರಿ ಬಗ್ಗೆ ಸಾರ್ವಜನಿಕ ಅಸಂತೃಪ್ತಿ ತೀವ್ರವಾಗಿತ್ತು. ಹೆಚ್ಚಿದ್ದ ನಿರುದ್ಯೋಗ ಸಮಸ್ಯೆ, ಹಣದುಬ್ಬರ ಮತ್ತು ತಪ್ಪು ಆಡಳಿತ ನೀತಿ ವಿರುದ್ಧ ಜನರಿಂದ ವ್ಯಾಪಕ ಪ್ರತಿಭಟನೆಗಳು ವ್ಯಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ ಆಂತರಿಕ ಕ್ಷೋಭೆಯ ನೆಪವೊಡ್ಡಿ ಸರಕಾರ 1975 ಜೂನ್‌ನಲ್ಲಿ ರಾಷ್ಟ್ರೀಯ ತುರ್ತುಪರಿಸ್ಥಿತಿಯನ್ನು ದೇಶದ ಮೇಲೆ ಹೇರಿತು. ತುರ್ತು ಪರಿಸ್ಥಿತಿ ಅವಧಿಯಲ್ಲಿ ಜನತೆಯ ಮೂಲಭೂತ ಹಕ್ಕುಗಳು ಅಮಾನತಾಗಿದ್ದವು. ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗಿತ್ತು. ಸಾಕಷ್ಟು ಸಂಖ್ಯೆಯಲ್ಲಿ ರಾಜಕೀಯ ನಾಯಕರು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ವಿಚಾರಣಾ ಬಂಧಿಸಲಾಗಿತ್ತು. ಪ್ರಜಾತಾಂತ್ರಿಕ ಸಂಸ್ಥೆಗಳ ಮೇಲೆ ಅನಗತ್ಯ ಒತ್ತಡ ಹೇರಲಾಗಿತ್ತು ಮತ್ತು ಜನರ ಸ್ವಾತಂತ್ರ್ಯಕ್ಕೆ ಕತ್ತರಿ ಹಾಕಲಾಗಿತ್ತು ಎಂದು ಹೊಸದಾಗಿ ರಚಿತ ಸಮಾಜ ವಿಜ್ಞಾನ ಪಠ್ಯಪುಸ್ತಕ 'ಅಂಡರ್‌ಸ್ಟ್ಯಾಂಡಿಂಗ್ ಸೊಸೈಟಿ : ಇಂಡಿಯಾ ಅಂಡ್ ಬಿಯಾಂಡ್'ನ ಪಾಠದಲ್ಲಿ ವಿವರಿಸಲಾಗಿದೆ.

ಸಸ್ಯಾಹಾರ ಪ್ರಚಾರ ಮಾಡಿಲ್ಲ ಕೃಷ್ಣಾನದಿ ಹೆಸರು, ದೇವರದ್ದಲ್ಲ

• **ಹೊಸದಿಲ್ಲಿ:** 6ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಸಸ್ಯಾಹಾರ ಪ್ರಚಾರವಿಲ್ಲ, ಕೃಷ್ಣ ಎಂಬ ಪದ ಕೃಷ್ಣಾ ನದಿಯಿಂದ ಪ್ರೇರಿತವಾಗಿದ್ದು, ಇದು ಭಗವಾನ್ ಶ್ರೀ ಕೃಷ್ಣನನ್ನು ಉಲ್ಲೇಖಿಸುವುದಿಲ್ಲ ಎಂದು ಎನ್‌ಸಿಇಆರ್‌ಟಿ ಸ್ಪಷ್ಟನೆ ನೀಡಿದೆ. ಎನ್‌ಸಿಇಆರ್‌ಟಿಯು ಆರ್3 ಭಾಷೆಯ ಪಠ್ಯಪುಸ್ತಕಗಳನ್ನು ಒಳಗೊಂಡಂತೆ ತನ್ನ ಭಾಷಾ ಪಠ್ಯಪುಸ್ತಕಗಳಿಗೆ ನದಿಗಳ ಹೆಸರಿಡುವ ಅಭ್ಯಾಸವನ್ನು ಅಳವಡಿಸಿಕೊಂಡಿದೆ. ಕೃಷ್ಣ ಎಂಬ ಹೆಸರು ಭಾರತದ ಪ್ರಮುಖ ನದಿಗಳಲ್ಲಿ ಒಂದಾದ ಕೃಷ್ಣಾ ನದಿಯಿಂದ ಸ್ಫೂರ್ತಿ ಪಡೆದಿದೆ. ಇದು ಕರ್ನಾಟಕದಲ್ಲಿಯೂ ಹರಿಯುತ್ತದೆ. ಇನ್ನೊಂದೆಡೆ, ಪಠ್ಯಪುಸ್ತಕದಲ್ಲಿ ಸಸ್ಯಾಹಾರವನ್ನು ಉತ್ತೇಜಿಸಲಾಗಿದೆ ಹಾಗೂ ಮಾಂಸಾಹಾರವನ್ನು ಕಡೆಗಣಿಸಲಾಗಿದೆ ಎಂಬ ಆರೋಪಕ್ಕೂ ಎನ್‌ಸಿಇಆರ್‌ಟಿ ಸ್ಪಷ್ಟನೆ ನೀಡಿದೆ. 6ನೇ ಅಧ್ಯಾಯದಲ್ಲಿ 'ಸಮತೋಲಿತ ಆಹಾರ' ಕುರಿತು ವಿವರವಾಗಿ ಪಾಠವಿದ್ದು, 63ನೇ ಪುಟದಲ್ಲಿ ಇದೇ ವಿಷಯವನ್ನು ಪ್ರತ್ಯೇಕ ಶೀರ್ಷಿಕೆಯಲ್ಲಿ ವಿವರಿಸಲಾಗಿದೆ ಎಂದು ತಿಳಿಸಿದೆ.

ಸಂಪಾದಕೀಯ

ಕಠಿಣ ಕಾನೂನಿನ ಅವಶ್ಯಕತೆ ಇದೆ

ಪ್ರತಿ ದಿನ ಎಲ್ಲಾ ಪತ್ರಿಕೆ-ಮಾಧ್ಯಮಗಳಲ್ಲಿ ನೂರಾರು ಸಂಗತಿಗಳು ಗಮನ ಸೆಳೆಯುತ್ತವೆ. ಆದರೆ ಸಮಾಜೋವಿಜ್ಞಾನದ ದೃಷ್ಟಿಯಿಂದ ಕೆಲವು ಮುಖ್ಯವೆನಿಸುತ್ತವೆ. ಇತ್ತೀಚಿನ ಹೆಚ್ಚಿನ ಆಯುಕ್ತರೊಬ್ಬರ ಮನೆ ಮತ್ತು ಕಚೇರಿಯ ಮೇಲೆ ನಡೆದ ಜಾರಿ ನಿರ್ದೇಶನಾಲಯ(ಇಡಿ) ನಡೆಸಿದ ದಾಳಿ ಒಂದು ಸುದ್ದಿಯಾದರೆ, ದಾವಣಗೆರೆ ಜಿಲ್ಲೆಯ ಹರಿಹರದ ಪುಟ್ಟ ಗ್ರಾಮವೊಂದರಲ್ಲಿ ಸೋಹೆಲ್ ಎಂಬ ಉಗ್ರನ ಬಂಧನ ಇನ್ನೊಂದು. ಅದೂ ಉತ್ತರ ಪ್ರದೇಶ ಮೂಲದ ಉಗ್ರನಿಗೆ ಪಾಕಿಸ್ತಾನದ ಉಗ್ರ ಸಂಘಟನೆಗಳೊಂದಿಗೆ ನಂಟಿರುವುದು, ಅಯೋಧ್ಯೆ ರಾಮಮಂದಿರದ ಸ್ಫೋಟಕ್ಕೆ ಸಂಚು ರೂಪಿಸಿರುವ ಆಘಾತಕಾರಿ ಸಂಗತಿ. ಸಾಮಾನ್ಯವಾಗಿ ಈ ರೀತಿಯ ಸುದ್ದಿಗಳು ಪದೇ ಪದೇ ಪ್ರಕಟವಾಗುತ್ತಿರುತ್ತವೆ. ಕೆಲವೊಮ್ಮೆ ಭ್ರಷ್ಟ ಅಧಿಕಾರಿಗಳ ಅಕ್ರಮ ಸಂಪಾದನೆಯ ಚಿತ್ರಗಳು ಪ್ರಕಟವಾಗಿ ಅವರ ಬಂಧನವಾಗಿದೆ ಎಂದು ಜನರು ಹಗುರವಾಗುತ್ತಾರೆ. ಭ್ರಷ್ಟಾಚಾರಿಗಳಿಗೆ ಈ ರೀತಿಯಲ್ಲಿ ಭಯಹುಟ್ಟಿಸಿದರೆ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎಂದು ಜನಸಾಮಾನ್ಯರು ಮಾತಾಡಿಕೊಳ್ಳುತ್ತಾರೆ. ಅದೇ ರೀತಿ ಸೆರೆಸಿಗುತ್ತಿರುವ ಉಗ್ರರು ಮತ್ತೆಮತ್ತೆ ಉತ್ತರಪ್ರದೇಶದಿಂದಲೇ ಸಿಕ್ಕಿಬೀಳುತ್ತಿರುತ್ತಾರೆ. ಅದೂ ಅವರೆಲ್ಲರೂ ಸಹರಾನ್‌ಪುರದಂಥ ಜಿಲ್ಲೆಗಳವರೇ ಆಗಿರುತ್ತಾರೆ! ಹಿಂದೆಲ್ಲೋ ಯೋಗಿ ಸರ್ಕಾರ ಇಂಥ ಶಂಕಿತ ಉಗ್ರರ ಮನೆಗಳನ್ನು ಬುಲ್ಡೋಜರ್ ಬಳಸಿ ನಾಶಮಾಡಿದೆ ಎಂಬ ಸುದ್ದಿಗಳು ಬರುತ್ತಿದ್ದವು. ಆಗಲೂ ದೇಶವನ್ನು ಪ್ರೀತಿಸುವವರು ನಿರಾಳವಾಗುತ್ತಿದ್ದ, ಭಯೋತ್ಪಾದಕ ಸಂಘಟನೆಗಳನ್ನು ಹುಟ್ಟಡಗಿಸಲು ಇಂಥ ನಿರ್ದಾಕ್ಷಿಣ್ಯ ಕ್ರಮಗಳು ಮಾತ್ರ ಅಗತ್ಯ ಎಂದುಕೊಳ್ಳುತ್ತಿದ್ದ.

ಈಗೇಕೋ ಭ್ರಷ್ಟ ಮತ್ತು ಉಗ್ರರ ದಮನಕ್ಕೆ ಇವು ಸಾಕಾಗದು ಎನಿಸುತ್ತಿದೆ. ರಕ್ತಬೀಜಾಸುರನಂತೆ ಇವರು ಸತತವಾಗಿ ಹುಟ್ಟುವುದಕ್ಕೆ ಕಾರಣವೇನು? ಅದರಲ್ಲೂ ಉತ್ತರ ಪ್ರದೇಶದಂಥ ರಾಜ್ಯದ ಕಟ್ಟುನಿಟ್ಟಿನ ಕಾನೂನುಗಳು ಮತಾಂಧತೆಯನ್ನು ಇನ್ನೂ ತಡೆಯಲು ಸಾಧ್ಯವಾಗಿಲ್ಲವೆಂದರೆ ಅದಕ್ಕೇನಾಗಬೇಕೋ ತಿಳಿಯುತ್ತಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಭಯೋತ್ಪಾದನೆಗೆ ತೆರಳಲು ಬಡತನ ಅಥವಾ ಇನ್ನಾವುದೋ ಕಾರಣ ಅಲ್ಲ, ಉತ್ತರ ಪ್ರದೇಶದ ಕಾನೂನು ಸುವ್ಯವಸ್ಥೆ ಅದನ್ನು ಅಂತಿರಬಹುದು. ಆದರೆ ಬುದ್ಧಿಜೀವಿ ವರ್ಗ ಮತ್ತು ಕೆಲ ಕಾನೂನು ಪರಿಣತರು ಉಗ್ರರಿಗೆ ಬೆಂಬಲವಾಗಿಯೇ ಇದ್ದಾರೆ. ಸಮರ್ಥರಾದ ಯಾವ ಕಟ್ಟಡಗಳನ್ನೂ ಉರುಳಿಲ್ಲ, ಆ ಕಾರ್ಯ ಆರಂಭಗೊಂಡರೆ ಇದು ಹದ್ದುಬಸ್ತಿಗೆ ಬರಬಹುದೇನೋ! ಹಾಗೆಯೇ ಭ್ರಷ್ಟಾಚಾರಿಗಳ ವಿರುದ್ಧ ಭಾರತದ ಎಲ್ಲ ಕಠಿಣ ಕಾನೂನು ಇಲ್ಲ, ಅಕ್ರಮ ಸಂಪತ್ತಿನ ಮೇಲಿನ ದಾಳಿಗಳು ರೋಚಕವಾಗಿ ಸುದ್ದಿಯಾಗುವಷ್ಟು ಅದರ ಫಲಶ್ರುತಿ ಸುದ್ದಿಯಾಗುವುದಿಲ್ಲ, ದೇಶದ ಉದ್ದಗಲಕ್ಕೆ ಹರಡಿರುವ ಈ ಜಾಲ ವಿಶಾಲವಾಗಿದೆ. ಕಾನೂನಿನ ಕಣ್ಣಿಂದ ಸುಲಭವಾಗಿ ನುಸುಳಬಲ್ಲ ಮಾರ್ಗಗಳು ಅವರಿಗೆ ತಿಳಿದಿವೆ.

ಇವೆರಡನ್ನು ಹತ್ತಿಕ್ಕದವರೆಗೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ, ಎರಡನ್ನು ಹತ್ತಿಕ್ಕಲು ಈಗಿರುವ ಮಾರ್ಗಗಳೇ ಆಗಿಲ್ಲ. ಮತಾಂಧತೆಯಿಂದ ತನ್ನ ಜೀವವನ್ನೇ ಪಣಕ್ಕಿಡಬಲ್ಲ ದುರುಳರು ಇನ್ನು ಕಾನೂನು ಮತ್ತು ತನ್ನ ಮನೆಯನ್ನು ಲೆಕ್ಕಿಸಿ ಬದುಕುತ್ತಾನೆ ಎನ್ನುವಂತಿಲ್ಲ, ಕಾನೂನು ತಯಾರಕರು ಮತ್ತು ನೀತಿನಿರೂಪಕರು ಇವೆರಡರ ಬಗ್ಗೆ ಸೂಕ್ತವಾದ ಕಾನೂನುಗಳನ್ನು ತರುವುದೊಂದೇ ಇಂಥ ಘಟನೆಗಳು ಮರುಕಳಿಸದಿರುವಂತೆ ಮಾಡಲು ಸಾಧ್ಯ.



ಮನುಷ್ಯನನ್ನು ಮೃತ್ಯು ಕೊಲ್ಲುವುದಿಲ್ಲ

ಅತಿಮಾನೋಽತಿವಾದಶ್ಚ ತಥಾತ್ಯಾಗೋ ನರಾಧಿಪ।
ಕ್ರೋಧಶ್ಚಾತ್ಮವಿಧಿತ್ಸಾ ಚ ಮಿತ್ರದ್ರೋಹಶ್ಚ ತಾನಿ ಷಟ್।
ಏತ ಏವಾಸಯಸ್ತೀಕ್ಷ್ಣಾಃ ಕೃಂತಂತ್ಯಾಯೂಂಷಿ ದೇಹಿನಾಮ್।
ಏತಾನಿ ಮಾನವಾನ್ ಘ್ನಂತಿ ನ ಮೃತ್ಯುಃ ಭದ್ರಮಸ್ತು ತೇ ॥ -ಮಹಾಭಾರತ

ಮನುಷ್ಯನ ಆಯುಸ್ಸನ್ನು ಅವನ ಅತಿಮಾನ,ಅತಿವಾದ, ಅತ್ಯಾಗ, ಕ್ರೋಧ, ಆತ್ಮವಿಧಿತ, ಮಿತ್ರದ್ರೋಹ- ಈ ಆರು ತೀಕ್ಷ್ಣವಾದ ಚೂರಿಗಳು ಕತ್ತರಿಸುತ್ತವೆ. ಇವೇ ಮನುಷ್ಯನನ್ನು ಕೊಲ್ಲುವುವು. ಮೃತ್ಯು ಅಲ್ಲ - ಎಂಬುದು ಶ್ಲೋಕಾರ್ಥ.

ಮನುಷ್ಯರ ಪ್ರಾಣವನ್ನು ಮೃತ್ಯು ಬಂದು ಕೊಂಡೊಯ್ಯುತ್ತದೆ ಎಂಬುದು ಲೋಕದ ತಿಳುವಳಿಕೆ. ಶಾಸ್ತ್ರಾದಿಗಳೂ ಇದನ್ನೇ ಹೇಳುತ್ತವೆ. ಆಯುಷ್ಯ ತೀರಿದ ಮೇಲೆ ಮುಂದಿನ



ಕೆಲಸ ಮೃತ್ಯುವಿನದು ಎಂಬ ನಂಬಿಕೆ. ಆದರೆ ಪ್ರಕೃತ ಶ್ಲೋಕ ಇದಕ್ಕೆ ವಿರುದ್ಧವಾದ ವಾದವನ್ನು ಮುಂದಿಡುತ್ತದೆ.

ಮನುಷ್ಯನ ಆಯುಷ್ಯವನ್ನು ಕತ್ತರಿಸುವ ಹರಿತವಾದ ಆರು ಚೂರಿಗಳಿವೆ. ಇವೇ ಮನುಷ್ಯನ ಅಂತ್ಯಕ್ಕೆ ಕಾರಣ ಎನ್ನುವ ಈ ಸುಭಾಷಿತ ಅದಾವುವೆಂದೂ ಹೇಳುತ್ತದೆ.

ಅತಿಮಾನ ಮನುಷ್ಯನ ಆಯುಸ್ಸನ್ನು ಕೊಲ್ಲುವ ಮೊದಲ ಚೂರಿ. ಈ ಚೂರಿ ಬಾಹ್ಯ ನೋಟಕ್ಕೆ ಕಾಣದಿರಬಹುದು. ಆದರೆ ಗೊತ್ತಿಲ್ಲದಂತೆ ಇರಿಯುತ್ತದೆ. ಅಂದರೆ ಅತಿಯಾದ ದುರಹಂಕಾರ. 'ಅಹಂ' ಸಾವಿಗೆ ಕಾರಣವಾಗುತ್ತವೆ. ಅಹಂಕಾರ, ದುರಭಿಮಾನಗಳು ಹೆಚ್ಚಾದಾಗ ಸಮಾಜವೇ ಅಂಥವರನ್ನು ದೂರವಿರಿಸುತ್ತದೆ. ಎಲ್ಲವನ್ನೂ ಎಲ್ಲರನ್ನೂ ಕಳೆದುಕೊಂಡ ಮೇಲೆ ಇದ್ದೂ ಸತ್ತಂತೆ. ತನ್ನ ನಡೆಯೇ ತನಗೆ ಸಾವಾಗಿ ಪರಿಣಮಿಸುತ್ತದೆ.

ಅತಿವಾದ ಎರಡನೆಯ ಚೂರಿ. ಎಲ್ಲವೂ ಒಂದು ಹಂತದಲ್ಲಿದ್ದರೆ ಚಂದ. ಪರಿಧಿಯಿಂದ ಮೀರಿ ಹೋದನಂತರ ಅಲ್ಲಿಗೆ ಮುಗಿಯಿತು. ಮಾತಿಗೊಂದು ಮಿತಿಯಿರಬೇಕು. ಸಂಸ್ಕಾರವಿರಬೇಕು. ಎಲ್ಲರನ್ನೂ ಆಕರ್ಷಿಸುವಂತೆ ಮಧುರವಾಗಿರಬೇಕು ನಮ್ಮ ಮಾತು. ಮಾತಿನ ಮಿತಿಯನ್ನು ಮೀರಿ ಅತಿಯಾಗಿ ಮಾತನಾಡಲು ಪ್ರಾರಂಭಿಸಿದರೆ ನಮ್ಮ ಮಾತು ಅಸ್ತಿತ್ವಕ್ಕೇ ಧಕ್ಕೆ ತರಬಹುದು. ಅತ್ಯಾಗ ಎಂದರೆ ದಾನ ಮಾಡದಿರುವುದು. ಎಲ್ಲರೂ ಗಳಿಕೆಯ ಒಂದು ಭಾಗವನ್ನು ಫಲಾಪೇಕ್ಷೆಯಿಲ್ಲದೆ ದಾನ ಮಾಡಬೇಕು. ಪ್ರೀತಿಯಿಂದ ಸರಿಯಾದ ಕ್ರಮದಲ್ಲಿ, ಸರಿಯಾದ ವ್ಯಕ್ತಿಗೆ ನೀಡಬೇಕು. ಈ ಬಗೆಯ ತ್ಯಾಗವೇ ಆಯುಷ್ಯ ವೃದ್ಧಿಗೆ ಕಾರಣವಾಗುತ್ತದೆ. ಅತ್ಯಾಗ ಆಯುಃ ಕ್ಷೀಣತೆಗೆ ಕಾರಣವಾಗುತ್ತದೆ.

ಕ್ರೋಧ ಮನುಷ್ಯನ ಮೊದಲ ವೈರಿ. ಸೋಲಿಗೂ, ಸಾವಿಗೂ ಕಾರಣವಾಗಬಲ್ಲ ಗುಣ ಇದ್ದಕ್ಕಿರುವುದರಿಂದ ಚೂರಿಯಾಗಿಯೂ ಪರಿಣಮಿಸಬಹುದು. ಕ್ರೋಧ ಕಟ್ಟಿಕೊಂಡು ದೀರ್ಘಕಾಲ ಬದುಕಲು ಸಾಧ್ಯವಿಲ್ಲ, ಅಕ್ರೋಧವೇ ಜೀವನಕ್ಕೆ ಬಂಧನವನ್ನು ಒದಗಿಸಬಲ್ಲದು. ಕ್ರೋಧ ನಮ್ಮನ್ನೇ ಕೊಲ್ಲಬಲ್ಲ ಆರು ವೈರಿಗಳಲ್ಲೊಂದು.

ಮಿತ್ರದ್ರೋಹದಂತಹ ಪಾಪ ಮತ್ತೊಂದಿಲ್ಲ, ನಮ್ಮ ಒಳಿತಿಗಾಗಿ ತಮ್ಮನ್ನು ಸಮರ್ಪಿಸಿಕೊಂಡು, ಸುಖ-ದುಃಖಗಳಲ್ಲಿ ಭಾಗಿಗಳಾಗಿ ಸದಾ ನಮ್ಮೊಂದಿಗಿರುವವರು ಸ್ನೇಹಿತರು ಮಾತ್ರ. ಇವರನ್ನು ನಮ್ಮಂತೆಯೇ ಪ್ರೀತಿಸಬೇಕೆ ವಿನಾ ದ್ರೋಹವೆಸಗಬಾರದು. ಮಿತ್ರದ್ರೋಹ ದೊರೆಯಲ್ಲ, ಸಾವು ದೊರೆಯಲ್ಲ, ಆತ್ಮವಿಧಿತ್ಸಾ ಎಂದರೆ ತನ್ನನ್ನು ತಾನು ತಿಳಿದುಕೊಳ್ಳದೇ, ತನ್ನ ಕರ್ತವ್ಯವನ್ನು ಅನುಷ್ಠಾನಿಸದೆ ತನ್ನ ಬಗ್ಗೆ ಕೀಳರಿಮೆ, ತಾತ್ಸಾರ ಹೊಂದಿರುವುದು. ಯಾವಾಗಲೂ ತನ್ನನ್ನು ತಾನೇ ಹಳಿದುಕೊಳ್ಳುವುದು. ಇದಿದ್ದರೆ ಇದ್ದೂ ಸತ್ತಂತೆ. ನಮ್ಮ ಉನ್ನತಿಗೆ ಮಾರಕವಾದ ಈ ಆರನ್ನು ಪ್ರತಿಯೊಬ್ಬರೂ ತ್ಯಜಿಸಬೇಕು. ಆಗ ಮಾತ್ರ ಬದುಕು ಆನಂದಮಯವಾಗುತ್ತದೆ. ಬದುಕಿಗೆ ಬೆಲೆ ಬರುತ್ತದೆ. ಅದಿಲ್ಲದಿದ್ದರೆ ಕೊಲ್ಲುವುದಕ್ಕೆ ಮೃತ್ಯು ಬೇಕಾಗಿಲ್ಲ, ನಾವೇ ನಮ್ಮನ್ನು ಕೊಂದುಕೊಳ್ಳುತ್ತೇವೆ.

ಕಿರುಕುಳ ಆರೆಸ್ಸೆಸ್‌ಗೆ ಹೊಸದೇನಲ್ಲ...

ರಾಜ್ಯದ ಸಚಿವರು ಮತ್ತು ಕಾಂಗ್ರೆಸಿನ ರಾಜ್ಯಾಧ್ಯಕ್ಷರು ಆರೆಸ್ಸೆಸ್ ವಿರುದ್ಧ ನಿರಂತರ ಹೇಳಿಕೆಗಳನ್ನು ನೀಡುತ್ತಿರುವುದನ್ನು ನೋಡಿದರೆ ಅವರು, ಆರೆಸ್ಸೆಸ್‌ಗೆ ಎಲ್ಲ ರೀತಿಯಲ್ಲೂ ಕಿರುಕುಳ ನೀಡಲು ಮುಂದಾಗಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ಸರಕಾರಗಳಿಂದ ವಿರೋಧಿಗಳಿಂದ ನಿರಂತರ ನಿಂದಾಸ್ತ್ರ, ದ್ವೇಷ, ಸುಳ್ಳು ಪ್ರಚಾರಗಳನ್ನು, ಕಿರುಕುಳಗಳನ್ನು ಎದುರಿಸುತ್ತಲೇ ಬಂದ ಆರೆಸ್ಸೆಸ್‌ಗೆ ಇದು ಹೊಸದೇನಲ್ಲ, ದೇಶ ಮತ್ತು ಜನತೆಯ ನಿರಂತರ ನಿಸ್ವಾರ್ಥ ಸೇವೆಯಲ್ಲಿ



ಸಮರ್ಪಣಾ ಭಾವದಿಂದ ತೊಡಗಿರುವ ಆರೆಸ್ಸೆಸ್ ಮತ್ತು ಸಂಘದ ಸ್ವಯಂಸೇವಕರು ನಿತ್ಯದ ಪ್ರಾರ್ಥನೆಯಲ್ಲಿ ತಾಯಿ ಭಾರತಿಯನ್ನು ಪರಮವೈಭವಕ್ಕೇರಿಸುವಲ್ಲಿ ನಿರಂತರ ಸವಾಲುಗಳನ್ನು ಎದುರಿಸುತ್ತಲೇ ಬಂದಿದ್ದಾರೆ. ಆದಾಗ್ಯೂ ಸತ್ಯದ ಹಾದಿಯಲ್ಲಿ, ಧರ್ಮದ ಹಾದಿಯಲ್ಲಿ ಸಂಘ ಮುನ್ನಡೆಯಲಿದೆ ಎಂಬುದರಲ್ಲಿ ಸಂಶಯವಿಲ್ಲ.

ದೇಶ-ಸಮಾಜಕ್ಕೆ ಆಪತ್ತು, ವಿಪತ್ತು ಬಂದಾಗಲೆಲ್ಲ ಜಾತಿ, ಮತ, ಧರ್ಮ ನೋಡದೆ ನೊಂದವರ ಕಣ್ಣೀರೊರೆಸುವುದೊಂದನ್ನೇ ಗುರಿಯಾಗಿರಿಸಿ ಸಂಘ-ಸಂಘಸ್ವಯಂಸೇವಕರು ಕಾರ್ಯಾಚರಿಸುತ್ತಿರುವುದನ್ನು ದೇಶ ನೋಡುತ್ತಲೇ ಬಂದಿದೆ. ಕೇವಲ ರಾಜಕೀಯ ಕಾರಣಕ್ಕಾಗಿ ಸಂಘದ ಮೇಲೆ ದ್ವೇಷ ಸಾಧಿಸುವ ಯತ್ನಗಳಿಗೆ ಯಶಸ್ಸು ಸಿಗದು. ಹಾಗೆಯೇ ಯಾವುದೇ ಜಾತಿಭೇದ ಕಾಣದ ಒಂದೇ ಒಂದು ಸ್ಥಳ ಇದ್ದರೆ ಅದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆ ಎಂಬ ಅಂಶವನ್ನು ಪ್ರತ್ಯಕ್ಷದರ್ಶಿಗಳು ಗುರುತಿಸಲಾರಂಭಿಸಿರುವುದು ಗಮನಾರ್ಹ.

-ಕಿರಣ್, ಮಂಗಳೂರು

ಪೆರಿಯಾರ್ ನಾಸ್ತಿಕ್ಯಕ್ಕೂ ತಮಿಳುನಾಡು ವಿಶಿಲ್!

ಉಘೇ ವೀರಭೂಮಿಗೆ
• ಸಂತೋಷ್ ತಮ್ಮಯ್ಯ
santoshthammaiah@gmail.com



ಬೆಂಜಮಿನ್ ಡಿಸ್ರೇಲಿ. ಹಲವರಿಗೆ ಹೆಸರನ್ನೆಲ್ಲೋ ಕೇಳಿರುವಂತಿದೆಯಲ್ಲಾ ಎಂದೆನಿಸಬಹುದು. ಆದರೆ ವಿಕಿಪೀಡಿಯಾ ಕೂಡ ಆತನನ್ನು ಯು.ಕೆ.ಯ ರಾಜಕಾರಣಿ, ಕವಿ ಮತ್ತು ಸಾಹಿತಿ ಎಂದಷ್ಟೇ ಪರಿಚಯಿಸುತ್ತದೆ. ಕೇವಲ ಯುನೈಟೆಡ್ ಕಿಂಗ್ಡಮಿನ ಸಾಹಿತಿ ಎಂಬ ಒಂದೇ ಕಾರಣಕ್ಕೆ ಬೆಂಜಮಿನ್ ಡಿಸ್ರೇಲಿ ಖ್ಯಾತನಲ್ಲ, ಆತ ಎರಡೆರಡು ಬಾರಿ ಯುಕೆಯ ಪ್ರಧಾನಮಂತ್ರಿ ಕೂಡ ಆಗಿದ್ದ! ಸಕ್ರೀಯ ರಾಜಕಾರಣಿಯಾಗಿ, ಹೋರಾಟಗಾರನಾಗಿ ಇಂದಿಗೂ ಆತ ಜಗತ್ತಿನ ನೆನಪಿನಲ್ಲಿದ್ದಾನೆ. ಆತ ಹುಟ್ಟಿದ್ದು 1804ರಲ್ಲಿ, ಅಪ್ಪ ಇಟಲಿ ಮೂಲದವನು, ಅಪ್ಪ ಯಹೂದಿ. ಮಕ್ಕಳೆಲ್ಲಾ ಯಹೂದಿಗಳಾಗಿ ಬೆಳೆದರು. ಹೊಟ್ಟೆಪಾಡಿಗೆ ಇಂಗ್ಲೆಂಡಿಗೆ ವಲಸೆ ಬಂದ ಅಪ್ಪ ಬುದ್ಧಿವಂತಿಕೆ ಉಪಯೋಗಿಸಿ ತನ್ನನ್ನು ಮತ್ತು ತನ್ನ ಕುಟುಂಬವನ್ನು ಕ್ರೈಸ್ತಮತಕ್ಕೆ ಒಪ್ಪಿಸಿಕೊಂಡ. ಅಂದರೆ ಹದಿನೈದನೇ ಶತಮಾನದಿಂದಲೂ ಉದಾರವಾದಿ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ ಯುಕೆಯಲ್ಲಿ ಯಹೂದಿಯೊಬ್ಬ ಬದುಕಲು ಕ್ರೈಸ್ತನಾಗಿ ಮತಾಂತರವಾಗಬೇಕಿತ್ತು!

ಬೆಂಜಮಿನ್ 17 ವರ್ಷದವನಿದ್ದಾಗ ಬ್ಲೂಮ್ಸ್‌ಬರಿಯಲ್ಲಿ ವಕೀಲರೊಬ್ಬರ ಬಳಿ ಕೆಲಸಕ್ಕೆ ಸೇರಿಕೊಂಡ. ವಕೀಲರ ಬಳಿ ಬರುತ್ತಿದ್ದ ವ್ಯಾಜ್ಯಗಳಿಂದ ಆತನಿಗೆ ಲೋಕದಲ್ಲಿ ಹೀಗೆಲ್ಲಾ ನಡೆಯುತ್ತವೆಯೇ ಎನಿಸತೊಡಗಿತು. ಆತನ ಲೋಕಜ್ಞಾನ ಬೆಳೆಯಿತು. ಆದರೆ ಯಾಕೋ ಆ ಕೆಲಸ ಆತನಿಗೆ ಬೇಗನೆ ಸಾಕೆನಿಸಿತು. ಮುಂದೆ ಗೆಳೆಯರೊಂದಿಗೆ ವ್ಯಾಪಾರಕ್ಕೆ ಕೈ ಹಾಕಿದ, ಆದರೆ ಕೈ ಸುಟ್ಟುಕೊಂಡು ಸಾಲಗಾರನಾದ. ಆದರೆ ಧೈರ್ಯಗೆಡಲಿಲ್ಲ, ತನ್ನ ಗೆಳೆಯ ಜಾನ್ ಮರ್ರೆ ಎಂಬಾತನೊಂದಿಗೆ ಪತ್ರಿಕೆ ಆರಂಭಿಸಲು ಹೊರಟ. ಆದರೆ ಪಾಲುದಾರನಾಗಿದ್ದ ಬೆಂಜಮಿನ್‌ಗೆ ಬಂಡವಾಳ ಸಿಗಲಿಲ್ಲ, ಅದರಿಂದ ಮರ್ರೆ ಮುನಿಸಿಕೊಂಡ. ಇಬ್ಬರು ಕಿತ್ತಾಡಿಕೊಂಡರು. ನಿನ್ನ ಮಾತು ಕೇಳಿ ನಾನು ಹಾಳಾದೆ ಎಂದು ಮರ್ರೆ, ಬೆಂಜಮಿನ್‌ನಿಗೆ ಬಿದ್ದ ವೈರಿಯೇ ಆದ. ಕೆಲ ದಿನಗಳವರೆಗೆ ಸುದ್ದಿ ಇಲ್ಲದಿದ್ದ ಬೆಂಜಮಿನ್ 'ವಿವಿಯನ್ ಗ್ರೇ' ಎಂಬ ಕಾದಂಬರಿಯೊಂದನ್ನು ಬರೆದ. ಅದರಲ್ಲಿ ಭರಪೂರ ಬಯ್ಗುಳಗಳಿದ್ದವು. ತನಗಾಗದವರನ್ನು, ತನ್ನೊಡನೆ ಜಗಳವಾಡಿದವರನ್ನು ಅದರಲ್ಲಿ ಮನಸೋ ಇಚ್ಛೆ ಬೆಂಜಮಿನ್ ಬಯ್ದಿದ್ದ. ಆ ಕಾರಣಕ್ಕೆ ಪುಸ್ತಕದಲ್ಲಿ ಬರೆದವನ ಹೆಸರಿರಲಿಲ್ಲ! ಆದರೆ 'ವಿವಿಯನ್ ಗ್ರೇ'ಯಲ್ಲಿ ಜಾನ್ ಮರ್ರೆಯನ್ನು ಬೆಂಜಮಿನ್ ಸಾಕಷ್ಟು ಹುರಿದು ಉಪ್ಪುಖಾರ ಸೇರಿಸಿದ್ದರಿಂದ ಆತ ಬೆಂಜಮಿನ್ ಡಿಸ್ರೇಲಿಯೇ ಆಗಿರಬೇಕೆಂದು ಜನ ಮಾತಾಡಿಕೊಂಡರು. ಕಾದಂಬರಿಯಲ್ಲಿ ಸತ್ವವೇನೂ ಇಲ್ಲದಿದ್ದರೂ ಮೊನಚು ಭಾಷೆ, ವ್ಯಂಗ್ಯ, ವಿಡಂಬನೆ ಮತ್ತು ಸೃಜನಶೀಲ ಬಯ್ಗುಳಗಳಿಗಾಗಿ ಅದು ಸಾಕಷ್ಟು ಚರ್ಚೆಗೊಳಗಾಯಿತು. ಮುಂದೆ ಕೆಲ ಕಾಲ ಮತ್ತೆ ಬೆಂಜಮಿನ್ ಭೂಗತನಾದ. ಒಂದಿನ ಏಕಾಏಕಿ ಮೂರು ಸಂಪುಟಗಳ 'ದಿ ಯಂಗ್ ಡ್ಯೂಕ್' ಎಂಬ ಕಾದಂಬರಿಯನ್ನು ಪ್ರಕಟಿಸಿ ಮತ್ತೆ ಸುದ್ದಿಯಾದ. ಈ ಪುಸ್ತಕದಲ್ಲೂ ಎಂದಿನಂತೆ ಮೊನಚಿತ್ತು, ಬಯ್ಗುಳಗಳಿದ್ದವು. ವ್ಯವಸ್ಥೆಯನ್ನು, ಧೂರ್ತ ವ್ಯಕ್ತಿತ್ವದವರನ್ನು, ಕಪಟಗಳನ್ನು ಅದರಲ್ಲಿ ಸಾಕಷ್ಟು ಟೀಕಿಸಿದ್ದ. ವಿನೂತನ ಭಾಷಾಶೈಲಿ ಮತ್ತು ನೇರವಂತಿಕೆಗಳಿಂದ ಈ ಎರಡು ಕಾದಂಬರಿಗಳು ಆತನಿಗೊಂದು ಪರಿಚಯವನ್ನು ತಂದುಕೊಟ್ಟವು. ಅದುವರೆಗೆ ಬೆಂಜಮಿನ್‌ನಂತೆ ಕಾದಂಬರಿಯಲ್ಲಿ ಬಯ್ಗುಳವನ್ನು ತುಂಬಿದವರಿರಲಿಲ್ಲ, ಲೋಕದ ಡೊಂಕನ್ನು ನೇರವಾಗಿ ಹೇಳಿದ ಶೈಲಿ ಆ ದಿನಗಳಲ್ಲಿ ಹೊಸದಾಗಿತ್ತು. ಕಾದಂಬರಿಯಲ್ಲಿದ್ದ ಮಹತ್ವಾಕಾಂಕ್ಷೆ, ಹಠಮಾರಿತನ ಮತ್ತು ಸೇಡಿನ ಧೋರಣೆಗಳು ಯುವ ಓದುಗರನ್ನು ಸಹಜವಾಗಿ ಸೆಳೆದಿತ್ತು. ಈ ಗುಣಗಳಿಂದಲೇ ಮುಂದೆ ಬೆಂಜಮಿನ್‌ನ ಬದುಕು ಆತನನ್ನು ಎಲ್ಲೆಲ್ಲೋ ಎಳೆದುಕೊಂಡುಹೋಯಿತು. ಆತ ರಾಜಕೀಯ ಪ್ರವೇಶಿಸಿದ. ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಮೂರು ಬಾರಿ ಸೋತ. ನಂತರ ಕನ್ಸರ್ವೇಟಿವ್ ಪಕ್ಷ ಸೇರಿ ಅದರಲ್ಲಿ ಗೆದ್ದು ಹೌಸ್ ಆಫ್ ಕಾಮನ್ಸ್ ಪ್ರವೇಶಿಸಿದ. ಪತ್ರಿಕೆಗಳಲ್ಲಿ ಸತತವಾಗಿ ಬರೆಯತೊಡಗಿದ ಬೆಂಜಮಿನ್ ದೇಶಾದ್ಯಂತ ಜನಪ್ರೀಯ ರಾಜಕಾರಣಿಯಾದ. ರಾಜಕೀಯ ನಾಯಕರ ಧೋರಣೆಗಳನ್ನು ಟೀಕಿಸಿ ಮೂರು ಕಾದಂಬರಿಗಳನ್ನು ಬರೆದ. ಹಣಬಲದ ಚೆನ್ನಾಗಿದ್ದ ಡಿಸ್ರೇಲಿ ರಾಜಕೀಯದ ಸ್ಥಿತ್ಯಂತರದ ಕಾಲದಲ್ಲಿ (1868) ಇಂಗ್ಲೆಂಡಿನ ಪ್ರಧಾನಿಯೂ ಆದ. 1874ರಲ್ಲಿ ಎರಡನೆ ಬಾರಿಯೂ ಪ್ರಧಾನಿಯಾದ. ಇಂಗ್ಲೆಂಡಿನ ಸುಧಾರಣೆ ಮತ್ತು ಹಲವು ಜಾಗತಿಕ ವಿದ್ಯಮಾನಗಳಲ್ಲಿ ಹೆಸರು ಮಾಡಿದ ಬೆಂಜಮಿನ್ ಡಿಸ್ರೇಲಿ ಬದುಕಿನುದ್ದಕ್ಕೂ ನಿರಂತರವಾಗಿ ಕಾದಂಬರಿಗಳನ್ನು ಬರೆದ. ವಿಶ್ವದ ನಾನಾ ಭಾಗಗಳಲ್ಲಿ ಆತನ ಕಾದಂಬರಿಗಳಿಂದ ಪ್ರೇರಿತರಾದವರಿದ್ದರು. ಬಿಡುವಿಲ್ಲದ ರಾಜಕಾರಣಿಯಾಗಿದ್ದರೂ ಆತನ ಕಾದಂಬರಿ ಪ್ರೇಮ, ಜೀವಂತಿಕೆ, ನೇರವಂತಿಕೆಗಳಿಂದ ಆತನಿಗೆ ಜಗತ್ತಿನಾದ್ಯಂತ ಅಭಿಮಾನಿಗಳಿದ್ದರು.

ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದು ಭಾರತದ ಅಧಿಕಾರ ಈಸ್ಟ್ ಇಂಡಿಯಾ ಕಂಪನಿ ಕೈಯಿಂದ ಇಂಗ್ಲೆಂಡ್ ಸಂಸತ್ತಿಗೆ ಹಸ್ತಾಂತರವಾದ ಕೆಲವೇ ವರ್ಷಗಳಲ್ಲಿ, ಅಂದರೆ 1868ರಲ್ಲಿ ಬೆಂಜಮಿನ್ ಮೊದಲ ಬಾರಿ ಇಂಗ್ಲೆಂಡಿನ ಪ್ರಧಾನಿಯಾಗಿದ್ದನೆಂಬುದು ವಿಶೇಷ. ಈ ಎಲ್ಲಾ ವಿವರಗಳಲ್ಲಿ ಅಪ್ರಸ್ತುತ. ಆದರೆ ಬೆಂಜಮಿನನಿಗೆ ಸಿಕ್ಕ ಸ್ಟಾರ್ ಡಂ ಯಾವ ಪರಿಯ ಅಧ್ವಾನವನ್ನು ಸೃಷ್ಟಿಸಿಟ್ಟಬುದಕ್ಕೆ ಇತರ ವಿವರಗಳ ಅವಲೋಕನವೂ ಅಗತ್ಯ. ಆತನ ಪ್ರೇರಣೆಯಿಂದ ಕೇವಲ ಬಯ್ಯುವ ಪದಗಳಿಂದಲೇ ಯುವಕರು ಕಾವ್ಯ ರಚನೆಗೆ ಮುಂದಾದರು. ಲೋಕದ ಡೊಂಕನ್ನು ತಿದ್ದುವುದರ ಹೊರತಾಗಿ ಸಾಹಿತ್ಯಕ್ಕೆ ಬೇರೆ ಉದ್ದೇಶವಿಲ್ಲವೆಂಬ ಧೋರಣೆ ಹರಡತೊಡಗಿತು. ಸಾಹಿತ್ಯ ವಿಮರ್ಶೆಗಳೆಲ್ಲವನ್ನೂ ಟೀಕೆಗಳೆಂದು ಪರಿಭಾವಿಸುವ ವರ್ಗ ಸೃಷ್ಟಿಯಾಯಿತು. ಮತ್ತೊಬ್ಬರಿಗೆ ನೋವು ನೀಡದ ವಾಕ್ಯಗಳಿಂದೇನುಪಯೋಗ ಎನ್ನುವ ವಿಚಿತ್ರ ಮಾನಸಿಕತೆಯೂ ಬೆಳೆಯಲಾರಂಭಿಸಿತು. ಬೆಂಜಮಿನ್ ಡಿಸ್ರೇಲಿ ಬರೆಯುತ್ತಿದ್ದಾಗಲೇ ಬ್ರಿಟನ್‌ನಲ್ಲಿ ಬದಲಾವಣೆಗೆ ತಹತಹಿಸುತ್ತಿದ್ದ ಮತ್ತು ಸಾಹಿತ್ಯಕ್ಕೆ ತಕ್ಕ ಭಾವುಕತೆಯ ಮಿಶ್ರಣವನ್ನು ಹದವಾಗಿ ಮಾಡುತ್ತಿದ್ದ ಸಾಹಿತ್ಯ ಚಳವಳಿಯ ಕಾಲಘಟ್ಟವಾಗಿತ್ತು. ಬ್ರಿಟಿಷ್ ಸಾಮ್ರಾಜ್ಯದ ಹೆಮ್ಮೆಯ ಜೊತೆಜೊತೆಗೆ ವಾಸ್ತವವಾದ, ಸಾಮಾಜಿಕ ವಿಮರ್ಶೆ, ನೈತಿಕತೆ, ವಿಜ್ಞಾನ-ಧರ್ಮ ಸಂಘರ್ಷಗಳೂ ಅತಿಯಾಗಿ ಕಾಣಿಸುತ್ತಿದ್ದ ವಿಕ್ಟೋರಿಯನ್ ಯುಗದ ಉಚ್ಛ್ರಾಯ ಕಾಲಮಾನವೂ ಅದಾಗಿತ್ತು. ಡಿಕನ್ಸ್ ಮತ್ತು ಈಲಿಯಟ್ ನಂಥವರು ಬರೆಯುತ್ತಿದ್ದ ಅದೇ ಕಾಲದಲ್ಲಿ ಬೆಂಜಮಿನ್‌ನ ಸಾಹಿತ್ಯಗಳು ಅತಿಯಾದ ಜನಪ್ರೀಯತೆ ಗಳಿಸಿದ್ದರ ಜೊತೆಗೆ ಬ್ರಿಟಿಷ್ ವಿರೋಧಾಭಾಸದ ಮಾನಸಿಕತೆಯ ಅನಾವರಣವನ್ನೂ ಮಾಡಿತು. ಏಕೆಂದರೆ ತನ್ನ ರಂಜಕ ಪುಸ್ತಕಗಳಿಂದ ಬೆಂಜಮಿನ್ ಎಲ್ಲರಿಗಿಂತ ಖ್ಯಾತನಾಗಿದ್ದ. ಆ ಖ್ಯಾತಿ ಮತ್ತು ರಾಜಕಾರಣಿಯ ಪೋಷಾಕಿನಿಂದ ಆತನಿಗೆ ಆದಾಗಲೇ ಸುಧಾರಕನೆಂಬ ವ್ಯಕ್ತಿತ್ವವೂ ಹೇರಿಕೆಯಾಗಿಬಿಟ್ಟಿದ್ದವು. ಮುಖ್ಯವಾಗಿ ಅಂದಿನ ಕನ್ಸರ್ವೇಟಿವ್ ಪಕ್ಷದ ರಾಷ್ಟ್ರೀಯವಾದಿ ವಿಚಾರಗಳಿಗೆ ಆತನೇ ಹೀರೋ ಆಗಿಬಿಟ್ಟ, ಕನ್ಸರ್ವೇಟಿವ್ ಪಕ್ಷದ ಜನಪ್ರೀಯ one-nation ಥಿಯರಿಯನ್ನು ಬೆಂಜಮಿನ್ ಡಿಸ್ರೇಲಿಯೇ ಕಂಡುಹಿಡಿದ ಎಂದು ಜನ ನಂಬತೊಡಗಿದರು. ಬೆಂಜಮಿನ್‌ನ ರಾಷ್ಟ್ರೀಯವಾದಿ ಚಿಂತನೆಗಳಲ್ಲಿ ಜಳ್ಳೇ ತುಂಬಿರುತ್ತಿದ್ದರೂ ಆತ ಇನ್ನಾರಿಗೋ ಬಯ್ಯುತ್ತಿದ್ದ ಮಾತುಗಳು ಜನರಿಗೆ ಆಕರ್ಷಕ ರಾಷ್ಟ್ರೀಯವಿಚಾರಗಳಾಗಿ ಕೇಳಿಸುತ್ತಿದ್ದವು. ಆತನ ಪ್ರತಿಮೆ ಸ್ಥಾಪನೆಯಾಯಿತು. ಆತ ಜೀವಂತವಿದ್ದಾಗಲೇ ಆತ ದೇಶದ ಸ್ಮೃತಿ ಚಿಹ್ನೆಯ ಭಾಗವಾದ. ಪ್ರಮುಖ ಪ್ರಧಾನಿಯಾಗಿ ದಾಖಲಾದ. ಎಲ್ಲಕ್ಕಿಂತ ಹೆಚ್ಚಾಗಿ ಕನ್ಸರ್ವೇಟಿವ್ ಪಕ್ಷ ಬೆಂಜಮಿನ್ ಡಿಸ್ರೇಲಿಯನ್ನು ಪ್ರಮುಖ ಪೂರ್ವಜ ಎಂದೇ ಭಾವಿಸುತ್ತದೆ. ಬೆಂಜಮಿನ್ ಆ ದೇಶದ ಮರೆಯಲಾಗದ ವ್ಯಕ್ತಿಯೇನಾಗಿದ್ದರೂ ಆತನ ರಾಜಕೀಯ ಜೀವನ ಮತ್ತು ಮರಣಾನಂತರದ ಕೆಲವು ವರ್ಷಗಳವರೆಗಾದರೂ ಬೃಹದಾಕಾರಕ್ಕೆ ಬೆಳೆದ ಪ್ರಮುಖ ರಾಜಕಾರಣಿಯಂತೂ ಆಗಿದ್ದ. ಆದರೆ ಇಂಗ್ಲಿಷರು ಪಕ್ಕಾ ವ್ಯವಹಾರಸ್ಥ ವರ್ಗ. ನೀರು ನುಂಗಿದಾಗ ತಮ್ಮ ಮಂಗಗಳನ್ನೇ ಕೆಳಗಿಟ್ಟು, ತಾನು ಮೇಲೆ ನಿಂತು ಬದುಕುವ ಜಾಯಮಾನದ ಅವರಿಗೆ ಬೆಂಜಮಿನ್ ಡಿಸ್ರೇಲಿ ಮುಂದಿನ ಕೆಲವೇ ವರ್ಷಗಳಲ್ಲಿ ಮಹತ್ವಪೂರ್ಣನಾಗಿರಲಿಲ್ಲ, ಜೊತೆಗೆ ಬೆಂಜಮಿನನ ಗಟ್ಟಿತನವಿರದ ವಿಚಾರಧಾರೆಗಳು ಆತನ ಹೆಸರಿಗೆ ಗೆದ್ದಲು ಹಿಡಿಸಿದ್ದವು. ಒಂದು ದಿನ ಆತ ಜನರ ಮನದಿಂದ ಮರೆಯಾದ. ಇಂದಿನ ಯು.ಕೆ.ಗೆ ಆತನ ಬಗ್ಗೆ ಗೌರವಾಗಳವೆಯಾದರೂ ಆತನನ್ನೇನೂ ಐತಿಹಾಸಿಕ ವ್ಯಕ್ತಿಯಾಗಿ ನೋಡುತ್ತಿಲ್ಲ, ಬ್ರಿಟಿಷ್ ರಾಜಕೀಯ ಇತಿಹಾಸದ ಆತ ಅಲ್ಲಲ್ಲಿ ಕಂಡುಬರುತ್ತಾನಾದರೂ ಅದು ಕೇವಲ ಸಾರ್ವಜನಿಕ ಸ್ಮರಣೆಯ ಭಾಗವಾಗಿ ಮಾತ್ರ ಇದೆ. ಅಂದರೆ ಇಂದಿನ ಯುಗದಲ್ಲಿ ರಾಜಕೀಯ ಪಿತಾಮಹನ ಸ್ಥಾನಮಾನವನ್ನೇನೂ ನೀಡುವ ಸ್ಥಿತಿ ಇಂದಿನ ಕನ್ಸರ್ವೇಟಿವ್ ಪಕ್ಷದೊಳಗೂ ಇಲ್ಲ, ಇಂದಿನ ಯಾವ ರೀತಿನೀತಿಗಳಿಗೂ ಆತನು ಮಾದರಿಯಾಗಿ ಉಳಿದಿಲ್ಲ.

ಬರಗಾಲದ ಹೊತ್ತಲ್ಲಿ ಈ ಆಂಗ್ಲನ ನೆನಪಾಗಲೊಂದು ಕಾರಣವಿದೆ! ಈ ಸಿದ್ಧಾಂತಗಳು, ಚಳವಳಿಗಳ ಹಿಂದಿನ ತತ್ತ್ವಗಳೆಲ್ಲವೂ ಯುಗಯುಗಗಳಿಗೂ ಇರಲೇಬೇಕಾದ ಗ್ಯಾರಂಟಿ ವಸ್ತುಗಳೇನಲ್ಲ, ಒಂದು ಕಾಲದಲ್ಲಿ ರಾಮನ ಆಡಳಿತವಿತ್ತು. ಆದರೆ ನಮ್ಮ ಪೀಳಿಗೆ ಸಿದ್ದರಾಮಯ್ಯ ಆಡಳಿತವನ್ನೂ ನೋಡಿದೆವು. ಮುಂದೊಂದು ದಿನ ಈ ಆಡಳಿತವೂ ಬದಲಾಗಲಿದೆ. ಸೃಷ್ಟಿ ಬದಲಾಗಲಿದೆ ಎಂಬುದನ್ನು ಒಪ್ಪಿಕೊಳ್ಳುವವರೆಲ್ಲರೂ ಸಮಾಜ ಬದಲಾಗುವುದೇ ಶತಸಿದ್ಧ ಎಂಬುದನ್ನೂ ಒಪ್ಪಿಕೊಳ್ಳಬೇಕು. ನಿರ್ಮಿಸಿಕೊಂಡ ಕೆಲವು ಸಿದ್ಧಸೂತ್ರಗಳು ಕಣ್ಣಮುಂದೆಯೇ ಮುರಿದುಬೀಳುವುದನ್ನೂ ನಾವು ನೋಡಿದ್ದೇವೆ. ಯಾವುದೋ ದೇಶದಲ್ಲಿ ಆಕಸ್ಮಿಕವಾಗಿ ಹುಟ್ಟಿದ ಕಮ್ಯುನಿಸಂ ಎಂಬ ಆಕ್ರೋಶ ಎಷ್ಟೆಲ್ಲಾ ಆರ್ಭಟಿಸಿರಲಿಲ್ಲ, ಆದರೆ ಇಂದು? ದೇಶವನ್ನು ಕಿತ್ತುತಿನ್ನುತ್ತಿದ್ದ ನಕ್ಸಲಿಸಂ ನಾಶವಾಗಿದೆ. ಈಗಿನ ಪರಿಸ್ಥಿತಿಗೆ ತಕ್ಕಂತೆ ಜಗತ್ತು ಓಡುತ್ತಿದೆ. ಸದ್ಯಕ್ಕೆ ಜಗತ್ತು ಅದರಲ್ಲೇ ಒಗ್ಗಿದೆ.

ಇಷ್ಟೆಲ್ಲಾ ಹೇಳಲು ಕಾರಣ ತಮಿಳುನಾಡಿನಲ್ಲಿ ಕೊನೆಗೂ ದ್ರಾವಿಡ ಪಕ್ಷಗಳು ಮೈ ತೊಳೆದುಕೊಂಡಿವೆ ಎಂಬುದಕ್ಕಾಗಿ. ಅಲ್ಲಿ ಹುಟ್ಟಿದ ಬಹುತೇಕ ಪಕ್ಷಗಳಿಗೆ ದ್ರಾವಿಡ ಬೇರುಗಳನ್ನು ಸಂಪೂರ್ಣವಾಗಿ ಕಳಚಿಕೊಳ್ಳಲಿಕ್ಕೂ ಸಾಧ್ಯವಾಗಿಲ್ಲ, ಆದರೆ ದ್ರಾವಿಡ ಚಿಂತನೆಯನ್ನೇ ಪ್ರತಿಪಾದಿಸುವ ಜೋಸೆಫ್ ವಿಜಯ್ ಅವರ ಟಿವಿಕೆ ಕೊನೆಗೂ, "ನಾವು ಪೆರಿಯಾರ್ ಹೇಳಿದ ಸಾಮಾಜಿಕ ಹೋರಾಟಗಳನ್ನು ಪಾಲಿಸುವವರೇ ಹೊರತು ನಾಸ್ತಿಕ್ಯವನ್ನು ಪಾಲಿಸುವವರಲ್ಲ" ಎಂಬ ಹೇಳಿಕೆಯೇ ಕಾಲನ ನಡೆಯಲ್ಲಿ ಪೆರಿಯಾರನೂ ಶಾಶ್ವತನಲ್ಲ ಎಂಬುದಕ್ಕೆ ಸಾಕ್ಷಿ, ಕೆಲವು ವರ್ಷಗಳ ಹಿಂದೆ ತಮಿಳುನಾಡಿನ ಯಾವ ರಾಜಕಾರಣಿಯ ಬಾಯಿಂದಲೂ ಇಂಥ ಮಾತುಗಳು ಬರುತ್ತದೆಂದು ಊಹಿಸಲಾಗುತ್ತಿರಲಿಲ್ಲ, ವಿಚಿತ್ರವೆಂದರೆ ತಮಿಳುಜನರ ಕಣ್ಣಲ್ಲಿ ನಾಸ್ತಿಕ್ಯವನ್ನು ಕಾಣಲಾಗುತ್ತಿರಲಿಲ್ಲ! ಆದರೆ ಪೆರಿಯಾರರ ಹೆಸರಿನಲ್ಲಿ ಹುಚ್ಚಾಟಗಳು ನಡೆಯುತ್ತಲೇ ಇದ್ದವು. ಪೆರಿಯಾರರ ತಲೆಬುಟ್ಟಿಗೆ ಮೊಳೆ ಹೊಡೆಯುವ ಪ್ರಕ್ರಿಯೆ ವಿಧ್ಯುಕ್ತವಾಗಿ ಚಾಲನೆಗೊಂಡಾಗ ಯಾಕೋ ಒಂದು ಕಾಲದಲ್ಲಿ ಮೆರೆದ ಬೆಂಜಮಿನ್ ಡಿಸ್ರೇಲಿ ನೆನಪಾದ.

ಶಿಕ್ಷಣ ತಜ್ಞರ ವಿಶ್ವರೂಪ ದರ್ಶನ ಮಾಡಿಸಿದ ಕೃಷ್ಣ

▸ ರಾಜೀವ ಹೆಗಡೆ



ಅ ಆ ಇ ಈ ಹೇಳೋಣ ಕನ್ನಡಕ್ಕೆ ಜೈ ಎನ್ನೋಣ
ಉ ಊ ಋ ಹೇಳೋಣ ಕನ್ನಡದ ಋಣ ನೆನೆಯೋಣ.....

ಇದು ಎನ್‌ಸಿಇಆರ್‌ಟಿಯ ಆರನೇ ತರಗತಿ ಪುಸ್ತಕದ ಮೊದಲ ಅಧ್ಯಾಯದ ಆರಂಭಿಕ ಸಾಲು. ಕನ್ನಡಕ್ಕೆ ಜೈ ಎಂದು ಭಾಷೆಯ ಋಣವನ್ನು ಮಕ್ಕಳಿಗೆ ನೆನಪಿಸುತ್ತಾ, ನಮ್ಮ ಕನ್ನಡ ಭಾಷೆಯನ್ನು ಕಲಿಸುವ ಪಠ್ಯವನ್ನು ನೀಡಲಾಗಿದೆ. ಆದರೆ ಈ ಪಠ್ಯದ ಹೆಸರನ್ನು ಅರ್ಥೈಸಿಕೊಳ್ಳದೇ ಸಹಿಸಿಕೊಳ್ಳಲಾಗದ ಒಂದಿಷ್ಟು ಎಡಪಂಥೀಯ ಬುದ್ಧಿಜೀವಿಗಳಿಗೆ ಸಸ್ಯಾಹಾರ-ಮಾಂಸಾಹಾರ, ಬಸವಣ್ಣ, ಕುವೆಂಪು, ಕರಾವಳಿ, ಮಲೆನಾಡು, ಉತ್ತರ ಕರ್ನಾಟಕವೆಲ್ಲ ಕಣ್ಣಿಗೆ ರಾಚಲು ಆರಂಭಿಸಿದೆ. ಆದರೆ ಇವೆಲ್ಲ ತಾಪಕ್ಕೆ ಕಾರಣವಾಗಿದ್ದು, ಕೇವಲ ಕೃಷ್ಣ ಎನ್ನುವ ಪುಸ್ತಕದ ಹೆಸರು.

ಈ ಬಗ್ಗೆ ಎನ್‌ಸಿಇಆರ್‌ಟಿ ಕೂಡ ಸ್ಪಷ್ಟನೆ ನೀಡಿದೆ. ಆದಾಗ್ಯೂ ಪಠ್ಯದ ಬಗ್ಗೆ ಎತ್ತಿರುವ ವಿರೋಧಕ್ಕೆ ಸಂಬಂಧಿಸಿದ ನಾಲ್ಕು ಆಯಾಮಗಳನ್ನು ಪರಿಶೀಲಿಸೋಣ. ಕೃಷ್ಣ ಎನ್ನುವ ಹೆಸರು, ಸಸ್ಯಾಹಾರ-ಮಾಂಸಾಹಾರ ಹಾಗೂ ಕರ್ನಾಟಕದ ಅಸ್ಮಿತೆಗಳಾದ ಪಂಪ, ಕುವೆಂಪು, ಬಸವಣ್ಣರನ್ನು ಕಡೆಗಣಿಸಲಾಗಿದೆ. ಇದರೊಟ್ಟಿಗೆ ಕರ್ನಾಟಕದ ಸಾಮಾಜಿಕ ಹಾಗೂ ಪ್ರಾದೇಶಿಕ ವೈವಿಧ್ಯತೆ ಬಗ್ಗೆ ವಿವರ ನೀಡಿಲ್ಲ ಎನ್ನುವುದು ಒಂದಿಷ್ಟು ಜನರ ಕೊಂಕು ಮಾತಾಗಿದೆ.

ಕೃಷ್ಣ ಎಂಬ ಹೆಸರು

ಎಂದಿಗೂ ನಮ್ಮ ಗ್ರಹಿಕೆಯು ನೇರವಾಗಿ ಆಲೋಚನೆಯನ್ನೇ ಅವಲಂಬಿಸಿರುತ್ತದೆ. ನರೇಂದ್ರ ಮೋದಿ ಸರ್ಕಾರದ ಎಲ್ಲ ಕೆಲಸವನ್ನು ಒಂದೇ ಕನ್ನಡಕದಿಂದ ನೋಡಿದಾಗ ಆಗುವ ಎಡವಟ್ಟುಗಳೇ ಇಲ್ಲಿಯೂ ಆಗಿವೆ. ಕೃಷ್ಣ ಎನ್ನುವ ಹೆಸರನ್ನು ದೇವರು-ಧರ್ಮದ ನಂಟಿನೊಂದಿಗೆ ನೋಡಿ ಒಂದಿಷ್ಟು ಜನರು ಅಸಲಿ ಗುಣವನ್ನು ಪ್ರದರ್ಶನ ಮಾಡಿದ್ದಾರೆ. ಟೀಕಾಕಾರರು ಹಾಗೂ ದೇವರನ್ನೇ ನಂಬದವರಿಗೆ ಕೃಷ್ಣ ಎನ್ನುವುದು ದೇವರಾಗಿ ಕಾಣಿಸಿಕೊಂಡಿದ್ದರೆ, ಪಠ್ಯ ರಚನಕಾರರಿಗೆ ಅದು ನಮ್ಮ ರಾಜ್ಯದ ಕೋಟ್ಯಂತರ ಜನರ ದಾಹ ನೀಗಿಸುವ ನದಿಯಾಗಿ ಗೋಚರಿಸಿದೆ. ಮಾಡಿರುವ ಪ್ರಮಾದವನ್ನು ಮುಚ್ಚಿಕೊಳ್ಳಲು ಈ ರೀತಿ ಸ್ಪಷ್ಟನೆಗಳು ಬಂದಿಲ್ಲ, ಇಂತಹ ಟೀಕೆಗಳು ಮುನ್ನೆಲೆಗೆ ಬರುವ ಮೊದಲೇ, ಹಿಂದಿ, ಇಂಗ್ಲಿಷ್ ಹಾಗೂ ಉರ್ದು ಪುಸ್ತಕಗಳಿಗೆ ಕ್ರಮವಾಗಿ ಗಂಗಾ, ಕಾವೇರಿ, ಯಮುನಾ ಎಂದು ಹೆಸರಿಡಲಾಗಿದೆ. ಇವೆಲ್ಲವೂ ದೇಶದ ಹಲವು ರಾಜ್ಯಗಳ ಜನರಿಗೆ ಹಸಿರು, ಉಸಿರು ಹಾಗೂ ಹೊಟ್ಟೆಯನ್ನು ತುಂಬಿಕೊಡುವ ಜೀವನದಿಗಳಾಗಿವೆ. ಈ ದೇಶದ ಅನಕ್ಷರಸ್ಥ ವ್ಯಕ್ತಿ ಕೂಡ ಈ ಗಂಗಾ, ಕಾವೇರಿ, ಯಮುನಾ, ಕೃಷ್ಣಾ ನದಿಯನ್ನು ಧರ್ಮ, ಜಾತಿ ಹಾಗೂ ದೇವರೊಂದಿಗೆ ಅಂಟಿಸಿಕೊಂಡು ನೋಡುವುದಿಲ್ಲ, ಈ ನದಿಯನ್ನು ಕಂಡಾಗ ದೇಶದ ಪ್ರತಿಯೊಬ್ಬ ಪ್ರಜ್ಞಾವಂತರು ಗೊತ್ತಿಲ್ಲದೇ ನಮಿಸುತ್ತಾರೆ. ವಿಶೇಷವೆಂದರೆ ಈ ದೇಶದ ಅನಕ್ಷರಸ್ಥರು ಕೂಡ ಶಿಕ್ಷಣ ತಜ್ಞರಿಗಿಂತ ಹೆಚ್ಚು ಪ್ರಾಜ್ಞರಾಗಿರುತ್ತಾರೆ. ಕೃಷ್ಣಾ ನದಿಯು ಕರ್ನಾಟಕದ 5 ಜಿಲ್ಲೆ ಒಂದು ಕೋಟಿಗೂ ಹೆಚ್ಚು ಜನಕ್ಕೆ ಜೀವನ ನೀಡಿದೆ. ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲೂ ಇದರ ಪಾತ್ರ ದೊಡ್ಡದು. ಹಾಗೆಯೇ ಈ ಕೃಷ್ಣ ಎನ್ನುವ ಕಲ್ಪನೆಯನ್ನು ಮೇಲ್ಜಾತಿಗೆ ಸೇರಿಸಿ, ಅದರಿಂದ ವರ್ಗಕ್ಕೆ ಅನ್ಯಾಯವಾಗಿದೆ ಎಂಬ ಬುದ್ಧಿವಂತರ ಮಾತನ್ನೂ ಕೇಳಿದೆ. ಆದರೆ ನಾವೆಲ್ಲ ಕೃಷ್ಣನನ್ನು ಗೊಲ್ಲ ಎಂದು ಪೂಜಿಸುವ ಅಂಶವನ್ನು ರಾಜಕೀಯ ಅರಿವಿಲ್ಲದ ಜನಸಾಮಾನ್ಯರು ಮರೆಯುವುದಿಲ್ಲ.

ಇದರ ಇನ್ನೊಂದು ಆಯಾಮವನ್ನು ನೋಡೋಣ. ಜನರಿಗೆ ದಿಕ್ಕು ತಪ್ಪಿಸುವ ಸಲುವಾಗಿಯೇ ಇಂತಹ ಕುತರ್ಕ ಮಾಡಲಾಗಿದೆ ಎಂದು ಕೆಲ ಶಿಕ್ಷಣ ತಜ್ಞರು ವಾದಿಸಬಹುದು. ಆದರೆ ಅಂತಹ ವಾದಕ್ಕೂ ಯಾವುದೇ ಜಾಗವಿಲ್ಲದಷ್ಟು ಅಚ್ಚುಕಟ್ಟಾಗಿ ಮುಖಪುಟ ರಚಿಸಲಾಗಿದೆ. ಹರಿಯುವ ನದಿಯ ಜೊತೆಗೆ ಮೈಸೂರು ಅರಮನೆ ಹಾಗೂ ಹಂಪಿಯ ಕಲ್ಲಿನ ರಥವನ್ನು ತೋರಿಸಲಾಗಿದೆ. ಅದರೊಟ್ಟಿಗೆ ಒಂದಿಷ್ಟು ಮಕ್ಕಳು ಪಾಠದೊಂದಿಗೆ ಆಟವಾಡುತ್ತಿರುವುದನ್ನು ಕಾಣಬಹುದು. ಎಲ್ಲಿಯೂ ಧರ್ಮ ಅಥವಾ ಜಾತಿಯ ಸೂಚಕಗಳನ್ನು ಬಳಸಲಾಗಿಲ್ಲ, ದೇವಾಲಯ ಅಥವಾ ದೇವರು ಕೃಷ್ಣನನ್ನು ಹೋಲುವ ಚಿತ್ರದ ಬಳಕೆಯಾಗಿಲ್ಲ, ಇಷ್ಟಾದ ಮೇಲೂ ಪಠ್ಯದಲ್ಲಿ ಕೊಂಕು ಕಾಣುವವರಿಗೆ, ಆ ಕೃಷ್ಣನೇ ಬಂದು ಬುದ್ಧಿ ಹೇಳಿದರೂ ಅರ್ಥವಾಗುವುದಿಲ್ಲ.

ಸಸ್ಯಾಹಾರ-ಮಾಂಸಾಹಾರದ ವಿವಾದ

ಪಠ್ಯದ ಆರನೇ ಅಧ್ಯಾಯ ಅಥವಾ ಘಟಕದಲ್ಲಿ ಆರೋಗ್ಯವೇ ಭಾಗ್ಯ



ಎನ್ನುವ ವಿಚಾರವಿದೆ. ಸಮತೋಲನ ಆಹಾರ ಸೇವನೆ ಎನ್ನುವ ವಿಚಾರವನ್ನು ಪ್ರಸ್ತಾಪಿಸುತ್ತಾ, ಯೋಗದ ಚಿತ್ರದ ಜೊತೆಗೆ ಒಂದು ತಟ್ಟೆಯಲ್ಲಿ ಕೆಲ ಆಹಾರಗಳನ್ನು ತೋರಿಸಲಾಗಿದೆ. ಅದರಲ್ಲಿ ಹಾಲು, ಹಣ್ಣು, ಹಂಪಲು ಹಾಗೂ ರೊಟ್ಟಿಯ ಚಿತ್ರಗಳಿವೆ. ಹಾಗೆಯೇ ಮುಂದುವರಿದು ನಮ್ಮ ದೇಹಕ್ಕೆ ಶಕ್ತಿ ದೊರಕಲು ಸಮತೋಲನ ಆಹಾರಗಳಾದ ಹಾಲು, ಸೊಪ್ಪು, ತರಕಾರಿ, ಹಣ್ಣು, ಹಂಪಲುಗಳು ಅಗತ್ಯ. ಇವು ನಮ್ಮ ದಿನ ನಿತ್ಯದ ಆಹಾರದ ಭಾಗವಾಗಬೇಕು ಎಂದು ಪ್ರಕಟಿಸಲಾಗಿದೆ. ಇಲ್ಲಿ ಪ್ರಕಟವಾಗಿರುವ ಪ್ರತ್ಯೇಕ ಚಿತ್ರದಲ್ಲಿ ಮೊಟ್ಟೆಯೂ ಇದೆ. ಹಾಗೆಯೇ ಅಧ್ಯಾಯದ ಕೊನೆಯಲ್ಲಿ ಮನೆಯ ಆಹಾರ ಆರೋಗ್ಯಕರ ಎಂದು ಸಾಮಾನ್ಯ ಊಟದ ಚಿತ್ರವನ್ನು ತೋರಿಸಲಾಗಿದೆ. ಅದರೊಟ್ಟಿಗೆ ಅನಾರೋಗ್ಯಕರ ಆಹಾರವನ್ನು ಕಡಿಮೆ ಸೇವಿಸಬೇಕು ಎಂದು ಇನ್ನೊಂದು ಸಾಲು ಸೇರಿಸಲಾಗಿದೆ. ಇಲ್ಲೇನಾದರೂ ಮಾಂಸಾಹಾರವನ್ನು ತೋರಿಸಲಾಗಿದೆಯೇ ಎಂದು ಕನ್ನಡಕ ಹಾಕಿಕೊಂಡು ಹತ್ತಾರು ಬಾರಿ ಹುಡುಕಿದೆ. ಆದರೆ ಅಲ್ಲಿರುವುದು ಬರ್ಗರ್, ಫಿಂಗರ್ ಚಿಪ್ಸ್ ಹಾಗೂ ಕೋಕ್ ರೀತಿಯ ಪಾನೀಯ. ಇವ್ಯಾವುದೂ ಮಾಂಸಾಹಾರಕ್ಕೆ ಸೇರುವುದಿಲ್ಲ, ಒಂದೊಮ್ಮೆ ಬರ್ಗರ್‌ನಲ್ಲಿ ಮಾಂಸವಿದ್ದರೂ, ಅದನ್ನು ಆರೋಗ್ಯಕರ ತಿಂಡಿ ಎಂದೂ ಈ ದೇಶದಲ್ಲಿನ ಯಾವೊಬ್ಬ ಆರೋಗ್ಯ ತಜ್ಞ ಕೂಡ ಹೇಳಲು ಸಾಧ್ಯವಿಲ್ಲ, ನಾನು ದೇಶ ಪ್ರೇಮಿ ಎಂದು ಹೇಳಿಕೊಂಡಾಕ್ಷಣ, ಉಳಿದವರೆಲ್ಲ ದೇಶದ್ರೋಹಿಗಳಾಗುವುದಿಲ್ಲ, ಹಾಗೆಯೇ ಸಮತೋಲನ ಆಹಾರದಲ್ಲಿ ಕೇವಲ ಸಸ್ಯಾಹಾರದ ಉಲ್ಲೇಖವಿದ್ದಾಕ್ಷಣ, ಮಾಂಸಾಹಾರ ಹಾಗೂ ಅದನ್ನು ಸೇವಿಸುವವರು ಕೆಟ್ಟವರು ಎಂದಾಗುವುದಿಲ್ಲ, ಅಂದ್ಹಾಗೆ ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ, ಆಹಾರದ ಉಲ್ಲೇಖಗಳಲ್ಲಿ ಎಲ್ಲಿಯೂ ಆರೋಗ್ಯಕರ ಆಹಾರದ ಪಟ್ಟಿಯಲ್ಲಿ ಯಾವುದೇ ಮಾಂಸಾಹಾರಗಳಿರಲಿಲ್ಲ, ಹಾಗಿದ್ದರೆ ಆಗಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೂಡ ಮಾಂಸಾಹಾರದ ವಿರೋಧಿಯಾಗಿತ್ತು ಎಂದು ವಾದಿಸಲು ಸಾಧ್ಯವೇ? ಅದರೊಟ್ಟಿಗೆ ಆಧುನಿಕ ಜಗತ್ತಿನಲ್ಲಿ ಯಾವುದೊಂದು ಜಾತಿ, ಧರ್ಮವು ನಿರ್ದಿಷ್ಟ ಆಹಾರ ಪದ್ಧತಿಗೆ ಸೀಮಿತವಾಗಿಲ್ಲ, ಎಲ್ಲೆಡೆಯೂ ಎಲ್ಲ ರೀತಿಯ ಆಹಾರ ಸೇವಿಸುವವರು ಸಿಗುತ್ತಾರೆ. ಒಂದೇ ಮನೆಯಲ್ಲಿ ಇಂತಹ ವೈರುಧ್ಯಗಳು ಸಿಗುತ್ತವೆ. ಹಾಗೆಯೇ ಪ್ರತಿದಿನ ಮಾಂಸಾಹಾರವನ್ನು ಸೇವಿಸುವ ಜನರು ಕೂಡ ಸಣ್ಣ ಮಕ್ಕಳಿಗೆ, ವಾರಪೂರ್ತಿ ಅದನ್ನೇ ತಿನ್ನಿಸುವುದಿಲ್ಲ, ಆದರೆ ಆಹಾರವನ್ನು ಜಾತಿಯ ಕನ್ನಡಕದಲ್ಲಿ ನೋಡಿದಾಗ ಇಂತಹ ಸಮಸ್ಯೆ ಶುರುವಾಗುತ್ತದೆ. ಮಾಂಸಾಹಾರವನ್ನು ಸಮತೋಲನದ ಆಹಾರಕ್ಕೆ ಸೇರಿಸದಿರಲು, ಜಾತಿಯ ಬದಲಿಗೆ ಕೊಬ್ಬಿನ ಅಂಶ ಕಾರಣವಾಗಿರುತ್ತದೆ. ಅಷ್ಟಕ್ಕೂ ಇಡೀ ಪುಸ್ತಕದಲ್ಲಿ ಎಲ್ಲಿಯೂ ಮಾಂಸಾಹಾರ ಸೇವಿಸಬೇಡಿ, ಅಪಾಯಕಾರಿ ಎಂದು ಎಲ್ಲಿಯೂ ಹೇಳಿಲ್ಲ, ಅಂದ್ಹಾಗೆ ಜೀವ ಉಳಿಸಿಕೊಳ್ಳಲು ಉಸಿರಾಡಬೇಕು ಎನ್ನುವುದನ್ನು ಕೂಡ ಉಲ್ಲೇಖಿಸಿಲ್ಲ, ಇದನ್ನು ನೋಡಿ, ಕೆಲವರು ಉಸಿರಾಟ ನಿಲ್ಲಿಸದಿದ್ದರೆ ಸಾಕಿತ್ತು.

ಕನ್ನಡ ಅಸ್ಮಿತೆಯ ಗಣ್ಯರು

ಸಿಬಿಎಸ್‌ಇ ಪಠ್ಯಕ್ರಮದ ಮೂರನೇ ಭಾಷೆಯ ಆರನೇ ತರಗತಿ ಪಠ್ಯವೆಂದರೆ, ಅವರಿಗೆ ಕನ್ನಡ ಕಲಿಕೆಯ ಆರಂಭದ ದಿನಗಳಿರಬಹುದು. ಮೊದಲ ವರ್ಷವೇ ಎಲ್ಲರನ್ನೂ ಪಠ್ಯದಲ್ಲಿ ಸೇರಿಸಬೇಕು ಎಂದು ಶಿಕ್ಷಣ ತಜ್ಞರೆನಿಸಿಕೊಂಡವರು ವಾದ ಮಾಡಿದರೆ, ಬಾಲಿಶ ಎನಿಸುತ್ತದೆ. ಒಂದು ತರಗತಿಗೆ ಕನ್ನಡ ಮುಗಿದು ಹೋಗುವುದಿಲ್ಲ, ಇನ್ನೂ ನಾಲ್ಕೈದು ತರಗತಿಗೆ ಕನ್ನಡದ ಪಠ್ಯ ಬರುವುದು ಬಾಕಿಯಿದೆ. ಅಲ್ಲಿಯವರೆಗೆ ಕಾದು ನೋಡಿದರೆ ಚಿತ್ರ ಸ್ಪಷ್ಟವಾಗುತ್ತದೆ. ಒಂದೊಮ್ಮೆ ಆಗಲೂ ಕನ್ನಡದ ಶ್ರೇಷ್ಠರನ್ನು ಕಡೆಗಣಿಸಿದರೆ, ಆಗ ಧ್ವನಿ ಎತ್ತುವುದರಲ್ಲಿ ಅರ್ಥವಿದೆ. ಹಾಗೆಯೇ ಶ್ರೇಷ್ಠ ಕನ್ನಡಿಗರನ್ನು ನಿರ್ಲಕ್ಷಿಸಿ, ಇನ್ಯಾವುದೋ ಭಾಷೆ, ರಾಜ್ಯ, ದೇಶದ ವ್ಯಕ್ತಿಗಳಿಗೆ ಪಠ್ಯದ ಯಾವುದೇ ಅಧ್ಯಾಯದಲ್ಲಿ ಮಣೆಯನ್ನು ಹಾಕಲಾಗಿಲ್ಲ ಎನ್ನುವುದನ್ನು ಕೂಡ ಅರ್ಥೈಸಿಕೊಳ್ಳಬೇಕು.

ಪ್ರಾದೇಶಿಕ ವೈವಿಧ್ಯತೆ

ಪಠ್ಯದಲ್ಲಿ ಕರಾವಳಿ, ಉತ್ತರ ಕರ್ನಾಟಕ, ಮಲೆನಾಡು, ಹಳೆಯ ಮೈಸೂರು ಭಾಗದ ಜನಪದ, ಸಾಹಿತ್ಯ ಬದುಕು ಕಾಣೆಯಾಗಿದೆ ಎನ್ನುವ ವಾದವನ್ನು ಕೆಲವರು ಇರಿಸಿದ್ದಾರೆ. ಯಾರೋ ಕಿಡಿಗೇಡಿಗಳು ಕಳುಹಿಸಿದ ಸ್ಕ್ರೀನ್‌ಶಾಟನ್ನು ನೋಡಿಕೊಂಡು ಇಂತಹ ಆರೋಪ ಮಾಡಬಹುದು. ಏಕೆಂದರೆ ನಾನು ಮುದ್ದಾಗಿ ಪುಸ್ತಕವನ್ನು ಎನ್‌ಸಿಇಆರ್‌ಟಿ ವೆಬ್‌ಸೈಟ್‌ನಲ್ಲಿ ನೋಡಿದ್ದೇನೆ. ಪಠ್ಯದಲ್ಲಿ ಅಕ್ಷರ ಮಾಲೆ, ನನ್ನ ಕುಟುಂಬ ಮತ್ತು ನಮ್ಮ ದಿನಚರಿ, ಸಮುದಾಯ ಸಹಾಯಕರು, ನಮ್ಮ ಹವ್ಯಾಸ-ನಮ್ಮ ಆಭರಣ, ಕರುನಾಡ ಕಸ್ತೂರಿ, ಆರೋಗ್ಯವೇ ಭಾಗ್ಯ, ಕೆಟ್ಟದ ದಿನಸಿ ಅಂಗಡಿ, ಚನ್ನಪಟ್ಟಣದ ಗೊಂಬೆಗಳು, ಅಜ್ಜಿಯ ಹಂಪಿ, ಹಾಯಿ ಋಣ, ಜನಪದ ಸೊಬಗು ಎನ್ನುವ ಅಧ್ಯಾಯಗಳಿವೆ. ಕೊಡಗಿನ ಬಗೆಗೆ ಕರುನಾಡ ಕಸ್ತೂರಿ, ಹಳೇ ಮೈಸೂರು ಭಾಗದ ಚನ್ನಪಟ್ಟಣದ ಗೊಂಬೆಗಳು, ಉತ್ತರ ಕರ್ನಾಟಕದ ಅಜ್ಜಿಯ ಹಂಪಿ ಹಾಗೂ ಕರಾವಳಿ ಮಲೆನಾಡು ಭಾಗದ ಜನಪದ ಸೊಬಗು ಎನ್ನುವ ಅಧ್ಯಾಯಗಳಿವೆ. ಜನಪದ ಸೊಬಗು ಅಧ್ಯಾಯದಲ್ಲಿ ವಿಶೇಷವಾಗಿ ಕಂಬಳ ಹಾಗೂ ಯಕ್ಷಗಾನದ ಉಲ್ಲೇಖಗಳಿವೆ. ಹಾಗೆ ನೋಡಿದರೆ ಕರ್ನಾಟಕದ ನಾಲ್ಕೂ ದಿಕ್ಕಿನಿಂದ ಒಂದಿಷ್ಟು ಅಂಶಗಳನ್ನು ಎತ್ತಿಕೊಳ್ಳಲಾಗಿದೆ. ಆದರೆ ಕೀಬಲೆಯನ್ನೇ ಉದ್ದೇಶವಾಗಿಸಿಕೊಂಡವರ ಪ್ರಕಾರ ಕರ್ನಾಟಕದ ಎಲ್ಲ ವೈವಿಧ್ಯತೆಯನ್ನು ಒಂದೇ ತರಗತಿಯ ಪಠ್ಯದಲ್ಲಿ ಕೊಡಬೇಕು ಎನ್ನುವುದು ನಗೆಪಾಟಲಿನ ವಿಚಾರವಾಗುತ್ತದೆ. ಏಕೆಂದರೆ ಕರುನಾಡು ಅಷ್ಟೊಂದು ವೈವಿಧ್ಯತೆಯನ್ನು ಹೊಂದಿದ ಭೂಮಿಯಾಗಿದೆ. ಅಂದ್ಹಾಗೆ ನೀವು ಕೂಡ www.ncert.nic.in/textbook.php ವೆಬ್‌ಸೈಟ್‌ನಲ್ಲಿ ಈ ಪುಸ್ತಕವನ್ನು ಪರಿಶೀಲಿಸಬಹುದು.

ಕೇಸರೀಕರಣ ಎಲ್ಲಿದೆ?

ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಶಿಕ್ಷಣ ಎಂದಾಕ್ಷಣ ಕೇಸರೀಕರಣ ಎನ್ನುವುದು ಕೆಲವರಿಗೆ ಚೋಕಿಯಾಗಿದೆ. ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿರೋಧಿಸುವಾಗಲೂ ಇದೇ ಹೊಲಸು ರಾಜಕೀಯ ನಡೆಯಿತು. ಈಗ ಎನ್‌ಸಿಇಆರ್‌ಟಿಯ ಹೊಸ ಪಠ್ಯದ ವಿಚಾರದಲ್ಲೂ ಇಂತಹದ್ದೇ ರಾಜಕೀಯ ಶುರುವಾಗಿದೆ. ಮೇಲೆ ಉಲ್ಲೇಖಿಸಿದಂತೆ ಅಕ್ಷರ ಮಾಲೆ, ನನ್ನ ಕುಟುಂಬ ಮತ್ತು ನಮ್ಮ ದಿನಚರಿ, ಸಮುದಾಯ ಸಹಾಯಕರು, ನಮ್ಮ ಹವ್ಯಾಸ-ನಮ್ಮ ಆಭರಣ, ಕರುನಾಡ ಕಸ್ತೂರಿ, ಆರೋಗ್ಯವೇ ಭಾಗ್ಯ, ಕೆಟ್ಟದ ದಿನಸಿ ಅಂಗಡಿ, ಚನ್ನಪಟ್ಟಣದ ಗೊಂಬೆಗಳು, ಅಜ್ಜಿಯ ಹಂಪಿ, ಹಾಯಿ ಋಣ, ಜನಪದ ಸೊಬಗು ಎನ್ನುವ ಈ ಹನ್ನೊಂದು ಅಧ್ಯಾಯಗಳಲ್ಲಿ ಒಂದೇ ಒಂದು ಧರ್ಮ, ಜಾತಿ, ದೇವರು ಅಥವಾ ಸೈದ್ಧಾಂತಿಕ ವಿಚಾರಗಳ ಪ್ರಸ್ತಾಪವೇ ಆಗಿಲ್ಲ, ಕುಟುಂಬ, ಕರುನಾಡಿನ ಕಸ್ತೂರಿ, ದಿನಸಿ ಅಂಗಡಿ, ಗೊಂಬೆ, ಹಂಪಿ, ಹಾಯಿ, ಜನಪದದಲ್ಲಿ ಕೇಸರೀಕರಣವು ಕಾಣಿಸಿದರೆ, ಕೂಡಲೇ ನಿಮ್ಮ ಕನ್ನಡಕವನ್ನು ಬದಲಿಸಿಕೊಂಡು ಸಮಾಜವನ್ನು ನೋಡಲು ಆರಂಭಿಸಿ.



ಕಿರುಸುದ್ದಿ

ಮಾವು ಪ್ರತಿ ಕ್ವಿಂಟಾಲ್‌ಗೆ 1,750 ರೂ. ಸಹಾಯಧನ

• **ಬೆಂಗಳೂರು:** ಕರ್ನಾಟಕದ ತೋತಾಪುರಿ ಮಾವು ಬೆಳೆಗಾರರ ನೆರವಿಗೆ ಕೇಂದ್ರ ಸರ್ಕಾರ ಧಾವಿಸಿದ್ದು, ಮಾರುಕಟ್ಟೆ ಹಸ್ತಕ್ಷೇಪ ಯೋಜನೆ (MIS) ಯಲ್ಲಿ 1.30 ಲಕ್ಷ ಮೆಟ್ರಿಕ್ ಟನ್ ಮಾವಿಗೆ ಪ್ರತಿ ಕ್ವಿಂಟಾಲ್‌ಗೆ 1,750 ರೂ. ಸಹಾಯಧನ ಘೋಷಿಸಿದೆ. ಹವಾಮಾನ ವೈಪರೀತ್ಯ ಹಾಗೂ ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದ ಕಂಗಾಲಾಗಿರುವ ಕರ್ನಾಟಕದ ಮಾವು ಬೆಳೆಗಾರರ ಸಂಕಷ್ಟಕ್ಕೆ ಕೇಂದ್ರ ಸರ್ಕಾರ ಮಿಡಿದಿದ್ದು, ಮಾರುಕಟ್ಟೆ ಹಸ್ತಕ್ಷೇಪ ಯೋಜನೆ (Market Intervention Scheme & MIS) ಯಲ್ಲಿ 1,30,000 ಮೆಟ್ರಿಕ್ ಟನ್ ತೋತಾಪುರಿ ಮಾವಿಗೆ ಪ್ರತಿ ಕ್ವಿಂಟಾಲ್‌ಗೆ 1,750 ರೂಪಾಯಿ ಸಹಾಯಧನವನ್ನು ರೈತರಿಗೆ ನೀಡಲು ಅನುಮೋದನೆ ನೀಡಿದೆ. ಈ ಕುರಿತು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಾಹಿತಿ ಹಂಚಿಕೊಂಡಿದ್ದು, ಪ್ರಧಾನಿ ಮೋದಿ ಮತ್ತು ಕೃಷಿ ಸಚಿವ ಶಿವರಾಜ್‌ಸಿಂಗ್ ಚವ್ಹಾಣ್ ಅವರಿಗೆ ಕರ್ನಾಟಕದ ಸಮಸ್ತ ರೈತರ ಪರವಾಗಿ ಧನ್ಯವಾದ ತಿಳಿಸಿದ್ದಾರೆ. ತೋತಾಪುರಿ ಮಾವು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸುವಂತೆ ಕೇಂದ್ರ ಕೃಷಿ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದು ಬೆಲೆ ಕೊರತೆ ಪಾವತಿ ಯೋಜನೆಯಲ್ಲಿ ಬೆಂಬಲ ನೀಡುವಂತೆ ತಾನು ಮನವಿ ಮಾಡಿದ್ದೆ. ಆ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು ಮಾರುಕಟ್ಟೆ ಹಸ್ತಕ್ಷೇಪ ಯೋಜನೆಯಲ್ಲಿ ರೈತರಿಗೆ ಸಹಾಯಧನವನ್ನು ನೀಡಲು ಅನುಮೋದನೆ ನೀಡಿರೋದಾಗಿ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

ಜೆಎಂ ಮಲ್ಟಿ ಅಸೆಟ್ ಅಲೋಕೇಷನ್ ಫಂಡ್ ಪರಿಚಯ

• **ಬೆಂಗಳೂರು:** ದೇಶದ ಪ್ರಮುಖ ಮತ್ತು ವೈವಿಧ್ಯಮಯ ಹಣಕಾಸು ಸೇವೆಗಳ ಸಮೂಹ ಸಂಸ್ಥೆಯಾದ ಜೆಎಂ ಫೈನಾನ್ಶಿಯಲ್ ಲಿಮಿಟೆಡ್‌ನ ಅಂಗಸಂಸ್ಥೆ, ಜೆಎಂ ಫೈನಾನ್ಶಿಯಲ್ ಅಸೆಟ್ ಮ್ಯಾನೇಜ್‌ಮೆಂಟ್ ಲಿಮಿಟೆಡ್, ಹೂಡಿಕೆದಾರರಿಗಾಗಿ ನೂತನ ಜೆಎಂ ಮಲ್ಟಿ ಅಸೆಟ್ ಅಲೋಕೇಷನ್ ಫಂಡ್‌ಅನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಇದು ಷೇರುಗಳು, ಸಾಲದ ಪತ್ರಗಳು, ಹಣದ ಮಾರುಕಟ್ಟೆ ಸ್ಕೀಮುಗಳು, ಚಿನ್ನ ಮತ್ತು ಬೆಳ್ಳಿ ಸಂಬಂಧಿತ ಉಪಕರಣಗಳು ಹಾಗೂ ಕಮಾಡಿಟಿ ಡೆರಿವೇಟಿವ್‌ಗಳಲ್ಲಿ ಹೂಡಿಕೆ ಮಾಡುವ ಮುಕ್ತಾವಧಿ ಯೋಜನೆಯಾಗಿದೆ. ದೀರ್ಘಕಾಲೀನ ಹೂಡಿಕೆಯಲ್ಲಿ ಆಸ್ತಿ ಹಂಚಿಕೆ (ಅಸೆಟ್ ಅಲೋಕೇಷನ್) ಅತ್ಯಂತ ಪ್ರಮುಖ ನಿರ್ಣಾಯಕ ಅಂಶವಾಗಿದೆ. ಮಾರುಕಟ್ಟೆಯ ಏರಿಳಿತ ಹಾಗೂ ಆರ್ಥಿಕ ಚಕ್ರಗಳಿಗೆ ಅನುಗುಣವಾಗಿ ವಿವಿಧ ಆಸ್ತಿ ವಿಭಾಗಗಳು ವಿಭಿನ್ನವಾಗಿ ಕಾರ್ಯನಿರ್ವಹಿಸುವುದರಿಂದ, ಹೂಡಿಕೆಯನ್ನು ಒಂದೇ ಕಡೆ ಇಡದೆ ವಿವಿಧ ಕ್ಷೇತ್ರಗಳಲ್ಲಿ ಹರಡುವುದು ಹೂಡಿಕೆದಾರರಿಗೆ ಸುರಕ್ಷಿತ ಮತ್ತು ಲಾಭದಾಯಕ ಹಾದಿಯಾಗಿದೆ ಎಂದು ಸಂಸ್ಥೆ ತಿಳಿಸಿದೆ.

ದರೋಡೆ: 12 ಮಂದಿ ಸೆರೆ

• **ಬೆಂಗಳೂರು:** ಭಾರತೀಯ ಹಣವನ್ನು ಯುಎಸ್‌ಡಿಟಿ ಕ್ರಿಪ್ಟೋ ಕರೆನ್ಸಿಗೆ ಬದಲಾವಣೆ ಮಾಡಿಕೊಡುವುದಾಗಿ ನಂಬಿಸಿ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿ 17.64 ಲಕ್ಷ ರೂ. ದರೋಡೆ ಮಾಡಿದ್ದ 12 ಮಂದಿಯನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ಫಿರೋಜ್‌ಖಾನ್ (31), ವಾಸೀಮ್ ಖಾನ್ (40), ಮೊಹಮ್ಮದ್ ಇಸ್ಮಾಯಿಲ್ (29), ರೆಹಾನ್ (27), ಸೋಹೆಬ್ ಜಾವೀದ್ (20), ಅಯಾನ್ ಮುಖರ್ಜಿ (21), ಅಜೀಜ್ ಮೊಹಮ್ಮದ್ (26), ಶೌಕೀಬ್ (32), ಲಿಯಾಖತ್ ಶರೀಫ್ (33), ಅಫ್ಜಲ್ ಖಾನ್ (27), ಮುಜಾಮಿಲ್ (23) ಹಾಗೂ ಇಮ್ರಾನ್ ಪಾಷಾ (40) ಬಂಧಿತರು. ಆರೋಪಿಗಳಿಂದ 13.90 ಲಕ್ಷ ರೂ. ನಗದು, ಕೃತ್ಯಕ್ಕೆ ಬಳಸಿದ್ದ 6 ದ್ವಿಚಕ್ರ ವಾಹನಗಳು, ಒಂದು ಕಾರು ಹಾಗೂ 13 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ತಿಳಿಸಿದ್ದಾರೆ. ಜೂ.10ರಂದು ಕೊಡಿಗೇಹಳ್ಳಿಯ ದೇವಿನಗರ ನಿವಾಸಿಯೊಬ್ಬರು ಕ್ರಿಪ್ಟೋ ಕರೆನ್ಸಿ ವ್ಯವಹಾರದ ಹೆಸರಿನಲ್ಲಿ ತಮ್ಮಿಂದ 17.64 ಲಕ್ಷ ರೂ. ದರೋಡೆ ಮಾಡಲಾಗಿದೆ ಎಂದು ದೂರು ನೀಡಿದ್ದರು. ದೂರುದಾರರು ಶಿರ ಹೆದ್ದಾರಿ ರಸ್ತೆಯಲ್ಲಿ ಶೆಫ್ ಅಂಬ್ರೋಸಿಯ ಆಗತ್ಯವಿರುವ ಕಿಚನ್ ಟೈಲ್ಸ್, ಕಬ್ಬಿಣ ಸೇರಿದಂತೆ ವಿವಿಧ ಸಾಮಗ್ರಿಗಳನ್ನು ವಿದೇಶದಿಂದ ಇಂಟರ್‌ನೆಟ್‌ನಲ್ಲಿ ಹುಡುಕಾಟ ನಡೆಸುತ್ತಿದ್ದರು. ಈ ವೇಳೆ ಜಪಾನ್ ಮತ್ತು ಚೀನಾದಿಂದ ಕಡಿಮೆ ದರದಲ್ಲಿ ನಿರ್ಮಾಣ ಸಾಮಗ್ರಿಗಳು ದೊರೆಯುತ್ತವೆ ಎಂದು ಸ್ನೇಹಿತರೊಬ್ಬರು ಮಾಹಿತಿ ನೀಡಿದ್ದರು. ಆದರೆ, ಖರೀದಿಗೆ ಹಣವನ್ನು ಕ್ರಿಪ್ಟೋ ಕರೆನ್ಸಿ ಮೂಲಕ ಪಾವತಿಸಬೇಕು ಎಂದು ಹೇಳಲಾಗಿತ್ತು. ಬಳಿಕ ಆರೋಪಿಗಳು ನಕಲಿ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ದೂರುದಾರರನ್ನು ಸೇರಿಸಿಕೊಂಡಿದ್ದರು. ಜೂ.8ರಂದು ಮಧ್ಯರಾತ್ರಿ ಗುಂಪಿನ ಸದಸ್ಯನಂತೆ ಪರಿಚಯಿಸಿಕೊಂಡ ವ್ಯಕ್ತಿಯೊಬ್ಬ ದೂರುದಾರರ ಮನೆಗೆ ಬಂದು 2.50 ಲಕ್ಷ ರೂ. ಹಣವನ್ನು ಯುಎಸ್‌ಡಿಟಿ ಕ್ರಿಪ್ಟೋ ಕರೆನ್ಸಿಗೆ ಪರಿವರ್ತಿಸಿ ನೀಡಿದ್ದ. ಇದರಿಂದ ವಿಶ್ವಾಸಗೊಂಡ ದೂರುದಾರರು ಹೆಚ್ಚಿನ ಮೊತ್ತವನ್ನು ಕ್ರಿಪ್ಟೋ ಕರೆನ್ಸಿಗೆ ಬದಲಾಯಿಸಿಕೊಡಲು ಮನವಿ ಮಾಡಿದ್ದರು.

6 ಸಾಕಾನೆಗಳೊಂದಿಗೆ 150ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಸಜ್ಜು | ಸಾತನೂರಲ್ಲಿ ಬೆಳೆ ಹಾನಿ ತಡೆಗೆ ಕ್ರಮ

ಕಾಡಾನೆ ಸೆರೆ ಕಾರ್ಯಾಚರಣೆಗೆ ಚಾಲನೆ

• **ಚನ್ನಪಟ್ಟಣ:** ಹಲವು ವರ್ಷಗಳಿಂದ ರೈತರ ಬೆಳೆಗಳಿಗೆ ಹಾನಿ ಉಂಟುಮಾಡಿ ಆತಂಕ ಸೃಷ್ಟಿಸುತ್ತಿದ್ದ ಕಾಡಾನೆಗಳನ್ನು ಸೆರೆಹಿಡಿಯುವ ಮಹತ್ವದ ಕಾರ್ಯಾಚರಣೆಗೆ ಗುರುವಾರ ಕೆಂಗಲ್ ಸಮೀಪದ ಹನುಮಂತಯ್ಯ ಟ್ರಿ ಪಾರ್ಕ್‌ನಲ್ಲಿ ಅಧಿಕೃತ ಚಾಲನೆ ನೀಡಲಾಯಿತು.

ಶಾಸಕ ಸಿ.ಪಿ. ಯೋಗೇಶ್ವರ್ ಚಾಲನೆ ಮಾತನಾಡಿ, ರೈತರ ಜೀವ, ಜೀವನೋಪಾಯ ಹಾಗೂ ಕೃಷಿ ರಕ್ಷಣೆಗೆ ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು. ರಾಮನಗರ, ಚನ್ನಪಟ್ಟಣ ಹಾಗೂ ಸಾತನೂರು ಭಾಗಗಳಲ್ಲಿ ನಿರಂತರವಾಗಿ ಬೆಳೆ ನಾಶಪಡಿಸುತ್ತಿರುವ ಕಾಡಾನೆಗಳ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರದ ಅನುಮತಿಯೊಂದಿಗೆ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ತಿಳಿಸಿದರು. ಕಾರ್ಯಾಚರಣೆಯ ಮೊದಲ ಹಂತದಲ್ಲಿ ರೈತರಿಗೆ ಹೆಚ್ಚು ತೊಂದರೆ ನೀಡುತ್ತಿರುವ ಎರಡು ಕಾಡಾನೆಗಳನ್ನು ಸೆರೆ ಹಿಡಿಯುವುದು ಪ್ರಮುಖ ಗುರಿಯಾಗಿದೆ.

ಈ ಕಾರ್ಯಾಚರಣೆಗೆ ಮಡಿಕೇರಿ ವಿಭಾಗದ ದುಬಾರೆ ಆನೆ ಶಿಬಿರದಿಂದ ಧನಂಜಯ, ಹರ್ಷ, ಅಕ್ಷರ ಹಾಗೂ ಸುಗ್ರೀವ ಸೇರಿದಂತೆ ನಾಲ್ಕು ಸಾಕಾನೆಗಳನ್ನು ಕರೆತರಲಾಗಿದ್ದು, ನಾಗರಹೊಳೆ ವಿಭಾಗದಿಂದ ಮಹೇಂದ್ರ ಹಾಗೂ ಏಕಲವ್ಯ ಎಂಬ ಇನ್ನೆರಡು ಸಾಕಾನೆಗಳೂ ಭಾಗಿಯಾಗಿವೆ. ಕಾರ್ಯಾಚರಣೆ ಆರಂಭಕ್ಕೂ ಮುನ್ನ ಸಾಕಾನೆಗಳಿಗೆ ವಿಶೇಷ ಪೂಜೆ ಸಲ್ಲಿಸಿ ಶುಭಾರಂಭ ಮಾಡಲಾಯಿತು. ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು ಅಂತಿಮ ಸಿದ್ಧತೆಗಳನ್ನು ಪರಿಶೀಲಿಸಿದರು.

150ಕ್ಕೂ ಹೆಚ್ಚು ಸಿಬ್ಬಂದಿ ನಿಯೋಜನೆ: ರಾಮನಗರ ಉಪ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಮಕೃಷ್ಣಪ್ಪ ಮಾತನಾಡಿ, ಕಾರ್ಯಾಚರಣೆಗೆ ಮುನ್ನ ಹಲವು ಸಭೆಗಳನ್ನು ನಡೆಸಿ ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು. 150ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಿದ್ದು, ಕಾಡಾನೆಗಳ ಚಲನವಲನದ ಮೇಲೆ ನಿರಂತರ ನಿಗಾ ವಹಿಸಲಾಗಿದೆ. ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಹೇಳಿದರು. ಕಾರ್ಯಾಚರಣೆಯಲ್ಲಿ ಅನುಭವಿ ಮಾವುತರು, ಶಾರ್ಪ್ ಶೂಟರ್‌ಗಳು, ಅರಣ್ಯ ಸಿಬ್ಬಂದಿ ಹಾಗೂ ವಿವಿಧ ವಿಭಾಗಗಳ ಅಧಿಕಾರಿಗಳು ಭಾಗಿಯಾಗಿದ್ದಾರೆ.



ಕೆಂಗಲ್ ಟ್ರಿ ಪಾರ್ಕ್‌ನಲ್ಲಿ ಬೇಸ್ ಕ್ಯಾಂಪ್

ಚನ್ನಪಟ್ಟಣ ವಲಯದ ಕೆಂಗಲ್ ಹನುಮಂತಯ್ಯ ಟ್ರಿ ಪಾರ್ಕ್‌ನಲ್ಲಿ ಕಾರ್ಯಾಚರಣೆಯ ಬೇಸ್ ಕ್ಯಾಂಪ್ ಸ್ಥಾಪಿಸಲಾಗಿದ್ದು, ಇಲ್ಲಿಂದಲೇ ತಂಡಗಳು ಕಾಡಾನೆಗಳ ಚಲನವಲನವನ್ನು ಗಮನಿಸಿ ಕಾರ್ಯಾಚರಣೆ ನಡೆಸಲಿವೆ. ಹಲವು ತಿಂಗಳುಗಳಿಂದ ಕಾಡಾನೆಗಳ ದಾಳಿಯಿಂದ ಬೆಳೆ ಹಾನಿ, ಆರ್ಥಿಕ ನಷ್ಟ ಹಾಗೂ ಜೀವಭಯ ಅನುಭವಿಸುತ್ತಿರುವ ರೈತರು ಸರ್ಕಾರದ ಈ ಕ್ರಮವನ್ನು ಸ್ವಾಗತಿಸಿದ್ದು, ಕಾರ್ಯಾಚರಣೆ ಯಶಸ್ವಿಯಾದರೆ ಚನ್ನಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ರೈತರಿಗೆ ದೊಡ್ಡ ಮಟ್ಟದ ನೆಮ್ಮದಿ ದೊರೆಯುವ ನಿರೀಕ್ಷೆ ವ್ಯಕ್ತವಾಗಿದೆ.

ಆಯುಕ್ತರಿಂದ ಕಾಮಗಾರಿ ಪರಿಶೀಲನೆ

• **ಬೆಂಗಳೂರು:** ಕ್ಯಾಪಿಟಲ್ ಸಪೋರ್ಟ್ ಫಾರ್ ಸ್ಪೆಷಲ್ ಇನ್ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ (ಸಿಎಸ್‌ಎಸ್‌ಐಪಿ) ಕಾಮಗಾರಿಗಳ ಪ್ರಗತಿ ಪರಿಶೀಲಿಸಿದ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಆಯುಕ್ತರು ಪರಿಶೀಲಿಸಿದರು. ರಸ್ತೆ ಡಾಂಬರೀಕರಣ, ಪಾದಚಾರಿ ಮಾರ್ಗ ಸೇರಿದಂತೆ ಎಲ್ಲ ಕೆಲಸಗಳನ್ನು ಜಲಮಂಡಳಿ ಸಹಿತ ಸಂಬಂಧಿತ ಸರ್ಕಾರಿ ಸಂಸ್ಥೆಗಳ ಜೊತೆಗೆ ಸಮನ್ವಯ ಸಾಧಿಸಿ ವ್ಯವಸ್ಥಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದ್ದಾರೆ. ಹೆಣ್ಣೂರಿನ ಕೆರೆಯಿಂದ ರಾಜಕಾಲುವೆಯಿಂದ ಮಳೆ ನೀರು ಉಕ್ಕಿ ಪ್ರವಾಹ ಉಂಟಾಗದಂತೆ ರಾಜಕಾಲುವೆ ಗೋಡೆ ಎತ್ತರಿಸಲು ಅಧಿಕಾರಿಗಳಿಗೆ ತಿಳಿಸಿದ್ದಾರೆ. ರಸ್ತೆ ಒತ್ತುವರಿ ಮಾಡಿಕೊಂಡವರಿಗೆ ನೋಟಿಸ್ ನೀಡಿ ತೆರವುಗೊಳಿಸುವಂತೆ ಸ್ಥಳದಲ್ಲಿ ಹಾಜರಿದ್ದ ಅಭಿಯಂತರರಿಗೆ ನಿರ್ದೇಶಿಸಿದ್ದಾರೆ. ರಸ್ತೆಗಳ ಡಾಂಬರೀಕರಣಕ್ಕೂ ಮುನ್ನ ರಸ್ತೆ ಗುಂಡಿ ಮುಚ್ಚುವಿಕೆ ಕಾಮಗಾರಿ ಪೂರ್ಣಗೊಳ್ಳಬೇಕು. ಪಾದಚಾರಿ ಮಾರ್ಗಗಳು ವ್ಯವಸ್ಥಿತವಾಗಿರಬೇಕು. ಮರಗಳ ಬುಡದ ಸುತ್ತ ಗ್ರಾಸ್ ಪೇವರ್ ಅಳವಡಿಸಬೇಕು. ಗುತ್ತಿಗೆದಾರರು ಮಾನವ ಸಂಪನ್ಮೂಲವನ್ನು ಸಮರ್ಪಕವಾಗಿ ಹಂಚಿಕೆ ಮಾಡಿ, ಗುಣಮಟ್ಟ ಕಾಯ್ದುಕೊಂಡು ಕೆಲಸ ಮುಗಿಸಬೇಕು ಎಂದು ತಿಳಿಸಿದ್ದಾರೆ.



ಕಾಮಗಾರಿ ಪರಿಶೀಲಿಸಿ ವರದಿ ಸಲ್ಲಿಸಿ

ಪಾಲಿಕೆಯ ಎಲ್ಲ ವಿಭಾಗಗಳ ವ್ಯಾಪ್ತಿಯಲ್ಲಿನ ಸಿಎಂಐಡಿಪಿ (ವಾರ್ಡ್ ರಸ್ತೆಗಳು) ಹಾಗೂ ಸಿಎಸ್‌ಎಸ್‌ಐಪಿ (ಆರ್ಟೀರಿಯಲ್, ಸಬ್ ಆರ್ಟೀರಿಯಲ್ ರಸ್ತೆಗಳು) ಕಾಮಗಾರಿಗಳ ಪ್ರಗತಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಆಯುಕ್ತರು, ಒಂದು ತಿಂಗಳ ಒಳಗೆ ಎಲ್ಲ ಪಾದಚಾರಿ ಮಾರ್ಗ, ಡ್ರೈನ್ ಸೇರಿದಂತೆ ಎಲ್ಲ ಸಿವಿಲ್ ಕೆಲಸಗಳನ್ನು ಮುಗಿಸುವಂತೆ ಸೂಚಿಸಿದ್ದಾರೆ. ಮೂಲಸೌಕರ್ಯ, ಕರ್ಬ್ ಮತ್ತು ಪಾದಚಾರಿ ಮಾರ್ಗಗಳ ಸುಧಾರಣೆ ಸೇರಿದಂತೆ ಎಲ್ಲ ಕೆಲಸಗಳು ಶೇ.100ರಷ್ಟು ಪೂರ್ಣಗೊಳ್ಳಬೇಕು. ಎಲ್ಲಾ ಸಿಎಂಐಡಿಪಿ ಸಿವಿಲ್ ಕಾಮಗಾರಿಗಳನ್ನು ಪರಿಶೀಲಿಸಿ ವರದಿ ಸಲ್ಲಿಸುವಂತೆ ಆಹಾರ ಆಯುಕ್ತರಿಗೆ ಡಾ.ರಾಜೇಂದ್ರ ಕೆ.ವಿ. ಸೂಚಿಸಿದ್ದಾರೆ.

ನಾಳೆ ರೈತ ಸಂತೆ

• **ಬೆಂಗಳೂರು:** ಕೃಷಿ ವಿಶ್ವವಿದ್ಯಾನಿಲಯದ ಜಿಕೆವಿಕೆ ಆವರಣದ ಗಣಪತಿ ದೇವಸ್ಥಾನದ ಹತ್ತಿರದಲ್ಲಿ ಜೂ.27 ರಂದು ಬೆಳಗ್ಗೆ 7 ರಿಂದ 4 ಗಂಟೆಯವರೆಗೆ ಉತ್ಪನ್ನಗಳ ರೈತ ಸಂತೆಯನ್ನು ಆಯೋಜಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ ನಡೆಸುವ ವಿಶೇಷ ಕಾರ್ಯಕ್ರಮಗಳಲ್ಲಿ ಒಂದಾದ ರೈತ ಸಂತೆ ಎಲ್ಲಾ ಜನ ಸಮೂಹದ ಆಕರ್ಷಣೆಗೆ ಒಳಗಾಗಿದ್ದು, ಈ ಬಾರಿ ರೈತ ಸಂತೆಯನ್ನು ವಿಭಿನ್ನ ರೀತಿಯಲ್ಲಿ ಆಚರಿಸಲಾಗುತ್ತಿದೆ. ಹಲವಾರು ವಿನೂತನ ವಿಷಯಗಳಿಗೆ ಸಾಕ್ಷಿಯಾಗಿದೆ.

ಈ ಭಾರಿಯ ರೈತರ ಸಂತೆಯಲ್ಲಿ ರೈತರೇ ಬೆಳೆದ ತಾಜಾ ಮಾವು, ಹಲಸು, ಬಣ್ಣದ ಬೀಜಗಳು, ತೋಟಗಾರಿಕೆ ಉಪಕರಣಗಳು ಹಾಗೂ ಇತರ ತಾಜಾ ಹಣ್ಣು, ತರಕಾರಿಗಳು, ಮೌಲ್ಯವರ್ಧಿತ ಸಿರಿಧಾನ್ಯ ಪದಾರ್ಥಗಳು, ಸಾವಯವ ಉತ್ಪನ್ನಗಳು, ಗುಣಮಟ್ಟದ ರಾಜಮುಡಿ ಅಕ್ಕಿ, ತಾಜಾ ಅಣಬೆ ಇತ್ಯಾದಿ. ಇದರ ಜತೆಗೆ ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಜೇನು ಕೃಷಿ, ವಾಣಿಜ್ಯೀಕರಣ ಉತ್ಪನ್ನಗಳು, ಪಶು ಸಂಗೋಪನೆ, ಇನ್ನು ಮುಂತಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯಿರುತ್ತದೆ. ಸಾರ್ವಜನಿಕರು ಮತ್ತು ರೈತರು ಈ ವಿನೂತನ ಸಂತೆಯ ಪ್ರಯೋಜನ ಪಡೆದುಕೊಳ್ಳಬೇಕಾಗಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಪುಸ್ತಕ ಲೋಕಾರ್ಪಣೆ

• **ಬೆಂಗಳೂರು:** ಸಣ್ಣ ರೈತಕುಟುಂಬದಲ್ಲಿ ಜನಿಸಿ, ಸರಳ ಸಜ್ಜನಿಕೆಯ ಜೀವನ ನಡೆಸುತ್ತಾ ಪರಿಶ್ರಮ ಮತ್ತು ಹಠದಿಂದ ಬಿ.ಕೆ.ಶ್ರೀನಿವಾಸ್ ಬೆಳೆದಿದ್ದಾರೆ ಎಂದು ಕಾವ್ಯಪಥದೇಶೀಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಹೇಳಿದರು. ಗಾಂಧಿ ಭವನದಲ್ಲಿ ನಡೆದ ನಿರ್ಮಾಪಕ ಬೆಂಕೋಶ್ರೀ ಅವರ ಸಿನಿಮಾ, ವ್ಯಾಪಾರ, ಹೋರಾಟ ಮತ್ತು ಆಡೇಯ ಮನೋಬಲದ ಯಶೋಗಾಥೆ ಯಸ್ಸೋಳಗೊಂಡ ಒಂದು ಅಸಾಮಾನ್ಯ ಜೀವನಯಾನ ಪುಸ್ತಕದ ಲೋಕಾರ್ಪಣೆ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಹಠವಿದ್ದರೆ ಪಟ್ಟ, ಚಟವಿದ್ದರೆ ಚಟ್ಟ ಎಂಬ ಮಾತಿನ ಅರ್ಥವನ್ನು ಬಿ.ಕೆ. ಶ್ರೀನಿವಾಸ್ ಜೀವನವೇ ತೋರಿಸುತ್ತದೆ. ನಾನು ಕೂಡ ಮೂವತ್ತನೇ ವಯಸ್ಸಿಗೆ ಪಟ್ಟಕ್ಕೇರಿ ತರಗತಿ ಪಾಸಾಗಿದ್ದೇನೆ. ಶ್ರೀನಿವಾಸ್ ತಮ್ಮ ಕಥೆ ಹೇಳುತ್ತಿದ್ದಾಗ ನನಗೆ ಡಿಕೆ.ಶಿವಕುಮಾರ್ ಅವರೇ ನೆನಪಾದರು. ಅವರು ಕೂಡ ಶ್ರಮದಿಂದಲೇ ಮೇಲಕ್ಕೆ ಬಂದವರು ಎಂದರು.

ಸಾ.ರಾ.ಗೋವಿಂದು ಮಾತನಾಡುತ್ತಾ, ಶ್ರೀನಿವಾಸ್ ಅವರು ಹಾವು ಬೆಳೆದುಬಂದ ಹಾದಿಯನ್ನು ಹೇಳಿಕೊಂಡಿದ್ದಾರೆ. ನಾನು ಹತ್ತು ಸಾವಿರ ರಾಜಕುಮಾರ್ ಅಭಿಮಾನಿಗಳ ಸಂಘಗಳನ್ನು ಕಟ್ಟಿದೆ. ಸುರ್ವೆ ಅವರ ಜತೆ ನೆಗ ಏರಾಟ ಅಭಿಮಾನಿ ಸಂಘ ಮಾಡಿದ್ದೆವು. ಅಲ್ಲಿಗೆ ನಾನು ಕೂಡ ಹೋಗಿದ್ದೆ. ಅವರ ಚಟುವಟಿಕೆ ನೋಡಿದಾಗಲೇ ಹೇಳಿದ್ದೆ, ಇವರು ಮುಂದೆ ದೊಡ್ಡ ವ್ಯಕ್ತಿಯಾಗಿ ಬೆಳೆಯುತ್ತಾರೆ ಅಂತ. ಅವರು ನನ್ನ ಮಗನನ್ನು ಮೊದಲಬಾರಿಗೆ ಹೀರೋ ಮಾಡಿದ್ದರು. ಆದರೆ ಅವರನ್ನು ಚಿತ್ರರಂಗ ಕೈಹಿಡಿಯಲಿಲ್ಲ. ಆದರೆ ಅವರು ತಮ್ಮ ನೋವನ್ನು ಎಲ್ಲೂ ಹೇಳಿಕೊಳ್ಳಲಿಲ್ಲ ಎಂದರು.

ಶಾಸಕ ಗುಣ ಮುಖರಾಗಲೆಂದು ಪೂಜೆ



• **ರಾಮನಗರ:** ಹೃದಯದ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಅವರು ಶೀಘ್ರ ಗುಣಮುಖರಾಗಲೆಂದು ಹಾರೈಸಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ನಗರದ ಶಕ್ತಿ ದೇವತೆ ಚಾಮುಂಡೇಶ್ವರಿ ದೇವಾಲಯದಲ್ಲಿ ಮಾಜಿ ಶಾಸಕ ಕೆ.ರಾಜು ನೇತೃತ್ವದಲ್ಲಿ ಚಂಡಿಕಾ ಹೋಮ ನಡೆಸಿ, ಇಕ್ಬಾಲ್ ಹುಸೇನ್ ಅವರು ಶೀಘ್ರ ಗುಣಮುಖರಾಗುವ ಜತೆಗೆ ದೀರ್ಘಾಯುಷ್ಯ ದೊರೆಯುವಂತೆ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಕೆ.ರಾಜು ಮಾತನಾಡಿ, ಹೃದಯದ ಶಸ್ತ್ರ ಚಿಕಿತ್ಸೆಗೆ ಒಳಗಾಗುತ್ತಿರುವ ಜನಪ್ರಿಯ ಶಾಸಕ ಇಕ್ಬಾಲ್ ಹುಸೇನ್ ಅವರು ಶೀಘ್ರ ಗುಣಮುಖರಾಗಲೆಂದು ಚಂಡಿಕಾ ಹೋಮ ನಡೆಸಲಾಗಿದೆ. ಶಕ್ತಿ ದೇವತೆ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ. ಜತೆಗೆ ಗಣೇಶ ದೇವಾಲಯದಲ್ಲಿ ಸುದರ್ಶನ ಹೋಮ ನಡೆಸಲಾಗಿದೆ ಎಂದರು.

ಯುವ ಮುಖಂಡ ಅನಿಲ್ ಜೋಗಿಂದರ್ ಮಾತನಾಡಿ, ಕಳೆದ ಮೂರು ವರ್ಷಗಳ ಅವಧಿಯಲ್ಲಿ ಶಾಸಕ ಇಕ್ಬಾಲ್ ಹುಸೇನ್ ಅವರು ಹಗಲು-ರಾತ್ರಿಯನ್ನದೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಎಲ್ಲ ವರ್ಗದ ಜನರ ಸಮಸ್ಯೆಗಳನ್ನು ಆಲಿಸಿ, ಪರಿಹರಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಕಳೆದ 20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಜನರ ನಿವೇಶನ ಹಂಚಿಕೆ ಕೆಲಸ ಪ್ರಗತಿಯಲ್ಲಿದೆ. ಸರ್ಕಾರ ಒಳಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುವ ಶಾಸಕರಿಗೆ ಭಗವಂತ ದೀರ್ಘಾಯುಸ್ಸು ಕರುಣಿಸಲಿ ಎಂದು ಪ್ರಾರ್ಥಿಸಿದ್ದೇವೆ ಎಂದರು.

ಜಿಲ್ಲೆಯ ಮಗನಾದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಅವರ ಅವಧಿಯ ಶಾಸಕರು ಈ ಮೂಲಕ ಕ್ಷೇತ್ರಕ್ಕೆ ಇನ್ನಷ್ಟು ಅನುದಾನ ತಂದು ಅಭಿವೃದ್ಧಿ ಮಾಡಬೇಕೆಂಬ ಕನಸು ಕಾಣುತ್ತಿದ್ದರು. ಕ್ಷೇತ್ರದ ಜನರ ಕಷ್ಟಸುಖಗಳಿಗೆ ಸ್ಪಂದಿಸಿದರು. ಅವರಿಗೆ ಕುಡಿಯುವ ನೀರು, ಬಡವರಿಗೆ ಸೂರು ನೀಡಿ ಎಲ್ಲರಿಗೂ ಮೂಲಭೂತ ಸೌಕರ್ಯಗಳನ್ನು ನೀಡಬೇಕೆಂಬ ಮಹದಾಸೆ ಹೊಂದಿದ್ದರು. ಅವರ ಆರೋಗ್ಯ ಸುಧಾರಣೆಗೆ ಎಲ್ಲಾ ಆಶೋತ್ತರಗಳು ಈಡೇರಲಿ ಎಂದು ಇಂದು ನಾವೆಲ್ಲರೂ ಅವರ ಹೆಸರಿನಲ್ಲಿ ವಿಶೇಷ ಪೂಜೆ ನೆರವೇರಿಸುತ್ತಿದ್ದೇವೆ ಎಂದರು.

ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸದಸ್ಯರಾದ ಮುತ್ತುರಾಜು, ಜಯಲಕ್ಷ್ಮಮ್ಮ, ಮುಖಂಡರಾದ ಲೋಹಿತ್ ಬಾಬು, ನರಸಿಂಹ, ಗಂಗಾಧರ್, ಚಂದ್ರಶೇಖರ್, ಭೋಜಣ್, ಮೋಹ, ಇನಾಯತ್, ಚಿಕ್ಕಸ್ವಾಮಿ, ಗುತ್ತಿ ವೆಂಕಟೇಶ್, ಚನ್ನಮಾನಪ್ಪ, ರಾಜು, ಭದ್ರಪ್ಪ, ಗಿರೀಶ್, ನಾಗೇಶ್ ಹಲವರಿದ್ದರು.

ದೇಶಪ್ರೇಮಿಗಳು ಒಗ್ಗಟ್ಟಾಗಿ: ಬೊಮ್ಮಾಯಿ



• **ಬೆಂಗಳೂರು:** ಕಾಂಗ್ರೆಸ್ ಪಕ್ಷ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ ಕರಾಳ ಸಂದರ್ಭದಲ್ಲಿ ನಾವೆಲ್ಲರೂ ಮತ್ತೊಮ್ಮೆ ಪ್ರಜಾಪ್ರಭುತ್ವವನ್ನು ಉಳಿಸಲು ಕಂಕಣಬದ್ಧರಾಗುವಂತಹ ಸಂಕಲ್ಪ ಮಾಡುವ ದಿನ. ಈಗಲೂ ವಿಚ್ಛಿದ್ರ ಶಕ್ತಿಗಳ ವಿರುದ್ಧ ನಾವೆಲ್ಲ ದೇಶಪ್ರೇಮಿಗಳು ಒಗ್ಗಟ್ಟಾಗುವ ಅವಶ್ಯಕತೆ ಇದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ತುರ್ತು ಪರಿಸ್ಥಿತಿಯನ್ನು ರಾಷ್ಟ್ರದ ಮೇಲೆ ಹೇರಿ 51 ವರ್ಷ ಕಳೆದಿದೆ. ತುರ್ತು ಪರಿಸ್ಥಿತಿ ಸ್ವತಂತ್ರ ನಂತರದ ಒಂದು ಕರಾಳ ಶಾಸನ. ಜನರ ಮೂಲಭೂತ ಹಕ್ಕನ್ನು ಮೊಟಕುಗೊಳಿಸಿ, ಪ್ರತಿಪಕ್ಷದ ಎಲ್ಲಾ ನಾಯಕರನ್ನು ಜೈಲಿಗೆ ಕಳುಹಿಸಿ ಇಡೀ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿದಂತಹ ಒಂದು ದಿನ ಇದು ಎಂದು ನೆನಪಿಸಿದ್ದಾರೆ.

ಇಂದಿರಾ ಗಾಂಧಿ ಅವರ ಕಾಲದಲ್ಲಿ ಕಾಂಗ್ರೆಸ್ ಪಕ್ಷದ ನೀತಿಯಿಂದ ತಮ್ಮ ಪದವಿಯನ್ನು ಉಳಿಸಿಕೊಳ್ಳಲು ಇಡೀ ದೇಶಕ್ಕೆ ತುರ್ತು ಪರಿಸ್ಥಿತಿ ಹೇರಿರುವುದನ್ನು ನಾವ್ಯಾರು ಮರೆಯಲು ಸಾಧ್ಯ ಇಲ್ಲ. ತುರ್ತು ಪರಿಸ್ಥಿತಿಯ ನಂತರ ಜನ ಜಾಗೃತರಾಗಿ ಇವತ್ತು ಯಾವುದೇ ಕಾರಣಕ್ಕೂ ನಮ್ಮ ಪ್ರಜಾಪ್ರಭುತ್ವವನ್ನು, ನಮ್ಮ ಸಂವಿಧಾನವನ್ನು ಎಲ್ಲಾ ಆದರ್ಶ ಭಾಗ ಮಾಡುವಂತಹ ಯಾವುದೇ ವಿಚಾರಕ್ಕೆ ಬೆಂಬಲವನ್ನು ರಾಜ್ಯದ ಜನತೆ ಕೊಡುತ್ತಿಲ್ಲ. ಆದಾಗ್ಯೂ ಕಾಂಗ್ರೆಸ್ ಪಕ್ಷ ಇವತ್ತು ಪ್ರತಿಪಕ್ಷದಲ್ಲಿದೆ ಎಂದು ಹೇಳಿದ್ದಾರೆ. ನರೇಂದ್ರ ಮೋದಿ ಅವರು ಪ್ರಧಾನ ಮಂತ್ರಿ ಆದ ತಕ್ಷಣವೇ ಸಂವಿಧಾನ ನನ್ನ ಧರ್ಮದ ಗ್ರಂಥ ಮತ್ತು ನಾನು ಪ್ರಧಾನ ಸೇವಕನಾಗಿ ಕೆಲಸ ಮಾಡುವುದೇ ನನ್ನ ಕರ್ತವ್ಯ ಎಂದು ಅದನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದಾರೆ. ಅವರು ನಿಜವಾದ ಸಂವಿಧಾನದ ರಕ್ಷಕ, ಭಾರತದ ಅಭಿವೃದ್ಧಿ ಹರಿಕಾರ ನರೇಂದ್ರ ಮೋದಿ ಅವರು ಎಂದು ಹೇಳಿದ್ದಾರೆ.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಾವೆಲ್ಲರೂ ಮತ್ತೊಮ್ಮೆ ಪ್ರಜಾಪ್ರಭುತ್ವವನ್ನು ಉಳಿಸಲು ಕಂಕಣಬದ್ಧರಾಗುವ ಸಂಕಲ್ಪ ಮಾಡುವ ದಿನ. ಈಗಲೂ ವಿಚ್ಛಿದ್ರ ಶಕ್ತಿಗಳ ವಿರುದ್ಧ ನಾವೆಲ್ಲ ದೇಶಪ್ರೇಮಿಗಳು ಒಗ್ಗಟ್ಟಾಗುವ ಅವಶ್ಯಕತೆ ಇದೆ. ಅದಕ್ಕೆಲ್ಲರೂ ಮಾಡಬೇಕು ಎಂದು ಬಸವರಾಜ ಬೊಮ್ಮಾಯಿ ವಿನಂತಿ ಮಾಡಿದ್ದಾರೆ.

ಪಶ್ನೆ ಪತ್ರಿಕೆ ಸೋರಿಕೆ: ಚಳವಳಿ

• **ಬೆಂಗಳೂರು:** ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ಇಡೀ ರಾಷ್ಟ್ರವ್ಯಾಪಿ ಕಾಂಗ್ರೆಸ್‌ನಿಂದ ಚಳುವಳಿ ಹಮ್ಮಿಕೊಂಡಿದ್ದು, ಜೂ. 25 ರಿಂದ ಆ.9 ರವರೆಗೆ ಸಲವತ್ತು ದಿನಗಳ ಕಾಲ ಅಭಿಯಾನ ನಡೆಸಲಿದ್ದೇವೆ. ಈ ಅಭಿಯಾನವನ್ನು ಇಪ್ಪತ್ತೆಂಟು ರಾಜ್ಯಗಳು ಮತ್ತು ಇಪ್ಪತ್ತೆಂಟು ನಗರಗಳಲ್ಲಿ ನಡೆಸಲಾಗುವುದು ಎಂದು ಸಂಸದೆ ವರ್ಷಾ ಗಾಯಕ್ವಾಡ್ ಮಾಹಿತಿ ಹಂಚಿಕೊಂಡರು.

ಕ್ವೀನ್ಸ್ ರಸ್ತೆಯ ಕೃಷಿ ತಂತ್ರಜ್ಞಾನ ಸಂಸ್ಥೆಯಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಶ್ನೆಪತ್ರಿಕೆ ಸೋರಿಕೆ, ಪರೀಕ್ಷೆಗಳಲ್ಲಿ ಭ್ರಷ್ಟಾಚಾರ ಏರಿಕೆಯ ವಿರುದ್ಧ ವಿದ್ಯಾರ್ಥಿಗಳನ್ನು ಕುರಿಯುತ್ತಿದ್ದು, ಇಪ್ಪತ್ತೆಂಟು ನಗರಗಳಲ್ಲಿ ನಲವತ್ತು ದಿನಗಳವರೆಗೆ ನಡೆಯುವ ಈ ಅಭಿಯಾನದ ಮೂಲಕ ವಿದ್ಯಾರ್ಥಿ ಧ್ವನಿಯ ಚಳುವಳಿ ನಡೆಸಲಿದ್ದೇವೆ ಎಂದರು. ಕೇಂದ್ರ ಸರ್ಕಾರವು ತನ್ನ ಜವಾಬ್ದಾರಿಗಳಿಂದ ನುಣುಚಿಕೊಳ್ಳುತ್ತಿದ್ದು, ವಿಳಂಬ ಮಾಡುವುದನ್ನು ಕಾಂಗ್ರೆಸ್ ಪಕ್ಷ ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ, ನಾವು ಪ್ರತಿ ವಿದ್ಯಾರ್ಥಿಯನ್ನು ಭೇಟಿ ಮಾಡಿ, ಅವರೊಂದಿಗೆ ಮಾತನಾಡುತ್ತೇವೆ ಮತ್ತು ಅವರಿಗೆ ಜಾಗೃತಿ ಮೂಡಿಸಲು ಕರಪತ್ರಗಳನ್ನು ನೀಡುತ್ತೇವೆ ಎಂದರು.

ರಸ್ತೆ ಲೋಕಾರ್ಪಣೆ ನಾಳೆ

• **ಕುಣಿಗಲ್:** ನಾಡಪ್ರಭು ಕೆಂಪೇಗೌಡ ಜಯಂತಿ ಹಾಗೂ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಹೆಸರಿನ ಪಿ.ಆರ್.ಆರ್ ನೂತನ ರಸ್ತೆಯನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಶಾಸಕ ಎಚ್.ಡಿ.ರಂಗನಾಥ್ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಕೆಂಗೇರಿ ಹೋಬಳಿ ಬಿಡಿಎಯಲ್ಲಿ ಜೂ.27ಕ್ಕೆ ಮಾಗಡಿ ರಸ್ತೆಯಿಂದ ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ನೂತನ ಪಿ ಆರ್ ಆರ್ ರಸ್ತೆಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ನಾಮಫಲಕ ಲೋಕಾರ್ಪಣೆ ಹಾಗೂ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ ಪ್ರಯುಕ್ತ ಅಧಿಕಾರಿಗಳೊಂದಿಗೆ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. 7 ಲಕ್ಷ ಸಸಿ ನೆಡುವ ಮೂಲಕ ಗಿನ್ನಿಸ್ ದಾಖಲೆ ಬರೆಯುವ ನಿಟ್ಟಿನಲ್ಲಿ ಕ್ಷೇತ್ರದ 17ಗ್ರಾಮ ಪಂಚಾಯಿತಿ ಮತ್ತು 12ಬಿಬಿಎಂಪಿ ವಾರ್ಡ್ ನ ಸುಮಾರು 1000ಕಿಮೀಯಿಂದ ಪೂರ್ಣ ಕುಂಭದೊಂದಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸ್ವಾಗತಿಸಿ ವೇದಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದರು.

ಬಾಲಕಾರ್ಮಿಕ ಪದ್ಧತಿ ಕುರಿತು ಅರಿವು ಕಾರ್ಯಕ್ರಮಕ್ಕೆ ಚಾಲನೆ

ಬಡ ಮಕ್ಕಳ ಶಿಕ್ಷಣದ ಹಕ್ಕು ಕಸಿಯದಿರಿ

• **ಕೋಲಾರ:** ಮಕ್ಕಳ ಶಿಕ್ಷಣದ ಹಕ್ಕು ಕಸಿಯದಿರಿ, ಓದುವ ವಯಸ್ಸಿನಲ್ಲಿ ಉದ್ಯೋಗ ಮಾಡಿಸುವುದು ಅಪರಾಧವಾಗಿದ್ದು, ಅಂತಹ ಪ್ರಕರಣ ಕಂಡು ಬಂದರೆ ಕಠಿಣ ಶಿಕ್ಷೆ ಇದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಪ್ರಭು ನೀಲಗಾರ ಎಚ್ಚರಿಕೆ ನೀಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕಿನ ಬೆಗ್ಲಿ ಹೊಸಹಳ್ಳಿ ಸರ್ಕಾರಿ ಪ್ರೌಢಶಾಲೆ ಆಶ್ರಯದಲ್ಲಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಬಾಲ್ಯವಿವಾಹ ಮತ್ತು ಬಾಲಕಾರ್ಮಿಕ ಪದ್ಧತಿ ಕುರಿತು ಅರಿವು ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು. ಬಾಲ್ಯವಿವಾಹ, ಮಾದಕ ವಸ್ತುಗಳ ನಿರ್ಮೂಲನೆ ,ಬಾಲ್ಯ ವಿವಾಹ, ಪೋಕ್ಸೋ ಕಾಯ್ದೆಗಳ ಬಗ್ಗೆ ಅರಿವು ಮೂಡಿಸಿದ ಅವರು, ವಿದ್ಯಾರ್ಥಿಗಳು ಮಾದಕ ವ್ಯಸನಿಗಳಾಗಿ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿರುವ ಪ್ರಕರಣಗಳ ಬಗ್ಗೆ ಅರಿವಿರಬೇಕಾಗುವಂತೆ ಸಮಾಜಕ್ಕೆ ಸಂದೇಶವನ್ನು ನೀಡುವಂತಾಗಬೇಕು ಎಂದರು. ಬಾಲ ಕಾರ್ಮಿಕರಾಗಿ ಯಾರೇ ಕೆಲಸ ಮಾಡುತ್ತಿರುವುದು ಕಂಡು ಬಂದರೆ ಕೂಡಲೇ ಗಮನಕ್ಕೆ ತನ್ನಿ ಸಹಾಯವಾಣಿಗೆ ದೂರು ನೀಡಿ ಎಂದ ಅವರು, ಗ್ಯಾರೆಜ್, ಇಟ್ಟಿಗೆ ಕಾರ್ಖಾನೆಗಳಲ್ಲಿ ಹೋಟೆಲ್ ರಾಜ್ಯದ ಕಾರ್ಮಿಕರು ತಮ್ಮ ಮಕ್ಕಳನ್ನು ದುಡಿಸುತ್ತಿದ್ದರೆ ಅವರ ಮನವೊಲಿಸಿ ಶಾಲೆಗೆ ಸೇರಿಸುವ ಕೆಲಸವಾಗಬೇಕು ಎಂದರು.



ಬಾಲ್ಯವಿವಾಹದ ಜತೆಗೆ ಮಕ್ಕಳಿಗೆ ಬಾಲ್ಯವಿವಾಹ ಮಾರಕವಾಗಿದೆ. ಶಾಲೆಗೆ ಹೋಗುವ ಮಕ್ಕಳಿಗೆ ಮದುವೆ ಮಾಡಿದರೆ ಅಂತಹ ಮದುವೆಗೆ ಕಾರಣರಾದ ಪೋಷಕರಿಗೆ ಮಾತ್ರವಲ್ಲ ಪುರೋಹಿತರಿಗೆ, ಮದುವೆಗೆ ಹೋದ ಎಲ್ಲರಿಗೂ ಶಿಕ್ಷೆ ಖಚಿತ ಎಂದು ಎಚ್ಚರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್ ಮಾತನಾಡಿ, ಚಾಕೊಲೇಟ್‌ಗಳಲ್ಲಿ ಹೆರಾಯಿನ್, ಕೊಕೇನ್, ಮುಂತಾದ ಅಮಲು, ನಿಶೆ ಬರುವ ವಸ್ತುಗಳನ್ನು ಮಿಶ್ರಣ ಮಾಡಿ ವಿದ್ಯಾರ್ಥಿಗಳಿಗೆ ನೀಡುವ ಮೂಲಕ ಮಾದಕ ವ್ಯಸನಿಗಳನ್ನಾಗಿ ಮಾಡಿ ಹೊಸಿಗೆ ಆವರಣ ಸಮಾಜಘಾತುಕ, ಕಾನೂನು ಬಾಹಿರ ಕೃತ್ಯಗಳಲ್ಲಿ ತೊಡಗಿಸುವಂತೆ ಮಾಡುವ ಷಡ್ಯಂತ್ರ ನಡೆದಿದೆ ಎಂದು ವಿಷಾದಿಸಿದರು. ಕಾರ್ಯಕ್ರಮದಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಅರ್ಜುನ್, ಇಸಿಒ ನಂಜುಂಡೇಗೌಡ, ಪಿಡಿಒ ಸೋಮಶೇಖರ್, ವಕೀಲರಾದ ಕೆ.ಮಂಜು, ಚೌಡೇಗೌಡ, ನಾರಾಯಣಸ್ವಾಮಿ, ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಶಶಿಕಲಾ,ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕ ವೆಂಕಟೇಶಮೂರ್ತಿ, ಎಸ್‌ಡಿಎಂಸಿ ಅಧ್ಯಕ್ಷೆ ಅನಿತಾ ಮತ್ತಿತರರಿದ್ದರು.

ಕೇಂದ್ರಕ್ಕೆ ಜೆಡಿಎಸ್ ಮುಖಂಡ ಸಿಎಂಆರ್ ಶ್ರೀನಾಥ್ ಅಭಿನಂದನೆ

ಮಾವು ಬೆಳೆಗಾರರಿಗೆ ಕೇಂದ್ರದಿಂದ ನೆರವು

• **ಕೋಲಾರ:** ಮಾವು ಬೆಲೆ ಕುಸಿತದಿಂದ ಕಂಗೆಟ್ಟಿದ್ದ ಜಿಲ್ಲೆಯ ಮಾವು ಬೆಳೆಗಾರರ ನೆರವಿಗೆ ಕೇಂದ್ರ ಸರ್ಕಾರ ಬಂದಿದ್ದು, ಇದಕ್ಕೆ ಕಾರಣರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು,ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ,ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರಿಗೆ ಜೆಡಿಎಸ್ ಮುಖಂಡ ಸಿಎಂಆರ್ ಶ್ರೀನಾಥ್ ಧನ್ಯವಾದ ಸಲ್ಲಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು, ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ರೈತರು ತೀವ್ರ ಸಂಕಷ್ಟದ ಸುಳಿಯಲ್ಲಿ,ಮೋದಲು ದ್ರ್ಯಾ ಎತ್ತುವರೇ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮತ್ತು ಹೆಚ್.ಡಿ. ಕುಮಾರಸ್ವಾಮಿ. ಈ ಸಲವೂ ಮಾವು ಬೆಳೆಗಾರರ ಬೆಲೆ ಇಲ್ಲದೆ ಕಂಗಾಲಾಗಿದ್ದಾಗ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಅವರ ನಿರಂತರ ಪ್ರಯತ್ನದ ಫಲ ಹಾಗೂ ಮಾವು ಬೆಳೆಗಾರರು-ಜೆಡಿಎಸ್ ಮುಖಂಡರ ಹೋರಾಟದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸಿರುವುದು ಸ್ವಾಗತಾರ್ಹ ಎಂದರು. ತೋತಾಪುರಿ ಮಾವಿಗೆ ಪ್ರತಿ ಕ್ವಿಂಟಾಲ್‌ಗೆ 1,750 ಸಹಾಯಧನ ಘೋಷಿಸಿರುವ ಕೇಂದ್ರ ಸರ್ಕಾರದ ನಿರ್ಧಾರದಿಂದ ಬೆಲೆ ಕುಸಿತ ಹಾಗೂ ಹವಾಮಾನ ವೈಪರೀತ್ಯದಿಂದ ಸಂಕಷ್ಟಕ್ಕೆ ಸಿಲುಕಿದ್ದ ರೈತರಿಗೆ ದೊಡ್ಡ ಮಟ್ಟದ ನೆರವು ದೊರೆಯಲಿದೆ ಎಂದು ಹೇಳಿದ್ದಾರೆ.

ಮಾವು ಬೆಳೆಗಾರರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಕುಮಾರಸ್ವಾಮಿ ಅವರು ಜೂನ್ 17ರಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದು ರೈತರ ಪರವಾಗಿ ಮನವಿ ಮಾಡಿದ್ದರು. ಅಲ್ಲದೆ, ನವದೆಹಲಿಯಲ್ಲಿ ಕೃಷಿ ಸಚಿವರನ್ನು ಭೇಟಿ ಮಾಡಿ ರೈತರ ಸಂಕಷ್ಟದ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದರು. ಪರಿಣಾಮ ಕೇಂದ್ರ ಸರ್ಕಾರ ತ್ವರಿತವಾಗಿ ಸ್ಪಂದಿಸಿ ನೆರವು ಘೋಷಿಸಿದೆ ಎಂದು ಶ್ರೀನಾಥ್ ತಿಳಿಸಿದ್ದಾರೆ.

ಕೋಲಾರ ಸೇರಿದಂತೆ ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು ಜಿಲ್ಲೆಗಳ ಸಾವಿರಾರು ರೈತರಿಗೆ ಈ ಯೋಜನೆಯಿಂದ ಪ್ರಯೋಜನ ವಾಗಲಿದೆ. ರೈತರ ಸಂಕಷ್ಟದ ಸಮಯದಲ್ಲಿ ಅವರ ಬೆನ್ನಿಗೆ ನಿಂತಿರುವ ಕೇಂದ್ರ ಸರ್ಕಾರ ಹಾಗೂ ಕುಮಾರಸ್ವಾಮಿ ಅವರ ಕಾರ್ಯವನ್ನು ಅಭಿನಂದಿಸುವುದಾಗಿ ಅವರು ಹೇಳಿದ್ದಾರೆ. ರಾಜ್ಯದ ರೈತರ ಹಿತಾಸಕ್ತಿಗಾಗಿ ನಿರಂತರವಾಗಿ ಹೋರಾಟ ನಡೆಸುತ್ತಿರುವ ಕುಮಾರಸ್ವಾಮಿ ಅವರ ಬದ್ಧತೆಗೆ ಈ ನಿರ್ಧಾರ ಮತ್ತೊಂದು ಉದಾಹರಣೆ. ರಾಜ್ಯ ಸರ್ಕಾರ ಸಹ ರೈತರ ಪರ ಧ್ವನಿ ಎತ್ತುತ್ತಿರುವುದರಿಂದ ರಾಜ್ಯದ ರೈತರು ಉಸಿರಾಡುವಂತಾಗಿದೆ. ಕಳೆದ ವರ್ಷವೂ ಸಹ ಮಾವು ಬೆಳೆಗಾರರ ಸಮಸ್ಯೆಗೆ ತಕ್ಷಣ ಸ್ಪಂದಿಸಿ ಸಹಾಯಧನ ಘೋಷಣೆ ಮಾಡಿಸಿದ್ದರು.

ರಾಜ್ಯ ಸರ್ಕಾರ ಅದನ್ನು ಬೇಗ ರೈತರ ನೆರವಿಗೆ ಧಾವಿಸಲಿ ಎಂದು ಅವರು ಒತ್ತಾಯಿಸಿದ್ದಾರೆ. ಇಲ್ಲಿಯವರೆಗೂ ರಾಜ್ಯ ಸರ್ಕಾರ ಇದುವರೆಗೂ ಮಾವು ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸುತ್ತಿಲ್ಲ ಎಂದು ಕಿಡಿಕಾರಿದ್ದಾರೆ.

ಕಿರುಸುದ್ದಿ

ಸಿಂಗಾಪುರಕ್ಕೆ ಪಡಿತರ ಉಪ ಕೇಂದ್ರ ಸ್ಥಾಪನೆಗೆ ಮನವಿ

• **ಹುಳಿಯೂರು:** ಸಿಂಗಾಪುರ ಗ್ರಾಮದಲ್ಲಿ ಪಡಿತರ ವಿತರಣಾ ಉಪ ಕೇಂದ್ರವನ್ನು ಸ್ಥಾಪಿಸುವ ಮೂಲಕ ದಶಕಗಳ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಆ ಗ್ರಾಮದ ಮಹಿಳೆಯರು ಮತ್ತು ಸಾಮಾಜಿಕ ಕಾರ್ಯಕರ್ತರು ಒಗ್ಗೂಡಿ ಜಿಲ್ಲಾ ಆಹಾರ ಇಲಾಖೆಗೆ ಮನವಿ ಸಲ್ಲಿಸಿದ್ದಾರೆ. ಸುಮಾರು ವರ್ಷಗಳಿಂದ ಸಿಂಗಾಪುರ ಗ್ರಾಮದ ನಿವಾಸಿಗಳು ಪಡಿತರ ಅಕ್ಕಿ ಪಡೆಯಲು ಯಳನಾಡು ಗ್ರಾಮಕ್ಕೆ ಹೋಗಬೇಕಿತ್ತು. ಈ ದೂರದ ಪ್ರಯಾಣದಿಂದಾಗಿ, ವಿಶೇಷವಾಗಿ ಗ್ರಾಮದ ವಯೋವೃದ್ಧರು ತುಂಬಾ ತೊಂದರೆ ಅನುಭವಿಸುತ್ತಿದ್ದರು. ಪ್ರತಿ ತಿಂಗಳು ಪಡಿತರ ಪಡೆಯಲು ಅನುಭವಿಸುವ ಕಷ್ಟವನ್ನು ತಪ್ಪಿಸಲು ಗ್ರಾಮದಲ್ಲೇ ಉಪ ಕೇಂದ್ರ ಸ್ಥಾಪನೆಯಾಗಬೇಕು ಎಂದು ಒತ್ತಾಯಿಸಿ ಸಾರ್ವಜನಿಕರು ತುಮಕೂರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕರಿಗೆ ಸಮಸ್ಯೆಯನ್ನು ಮನವರಿಕೆ ಮಾಡಿಕೊಟ್ಟರು. ಜಂಟಿ ನಿರ್ದೇಶಕರು ಈ ಮನವಿಯನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ಸಿಂಗಾಪುರ ಗ್ರಾಮದಲ್ಲಿ ಅತಿ ಶೀಘ್ರವಾಗಿ ಪಡಿತರ ವಿತರಣಾ ವ್ಯವಸ್ಥೆಯನ್ನು ಕಲ್ಪಿಸುವುದಾಗಿ ಭರವಸೆ ನೀಡಿದ್ದಾರೆ.

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ರಾಜ್ಯಪಾಲರ ಸಲಹೆ

ಇಂದು ಜ್ಞಾನದ ಯುಗ

• **ಬೆಂಗಳೂರು:** ಭಾರತವು ಸ್ವಾತಂತ್ರ್ಯದ ಶತಮಾನೋತ್ಸವದತ್ತ ಸಾಗುತ್ತಿರುವ ಸಂದರ್ಭದಲ್ಲಿ, ಅಭಿವೃದ್ಧಿ ಹೊಂದಿದ ಭಾರತದ ಪರಿಕಲ್ಪನೆಯು ಕೇವಲ ಆರ್ಥಿಕ ಪ್ರಗತಿಗೆ ಸೀಮಿತವಾಗಿರದೆ ಸ್ವಾವಲಂಬನೆ, ವೈಜ್ಞಾನಿಕ ನಾವೀನ್ಯತೆ, ಸಾಮಾಜಿಕ ಸಾಮರಸ್ಯ, ಸಾಂಸ್ಕೃತಿಕ ಪ್ರಜ್ಞೆ ಮತ್ತು ನೈತಿಕ ಮೌಲ್ಯಗಳ ಸಮಗ್ರ ಸಮನ್ವಯವಾಗಿರಬೇಕು ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ತಿಳಿಸಿದರು.

ನಗರದ ಎಂಇಎಸ್ ಸ್ವಾಯತ್ತ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಭಿವೃದ್ಧಿ ಹೊಂದಿದ ಭಾರತ 2047ರ ಸ್ವಯಂ ಸಾಕ್ಷಾತ್ಕಾರದಿಂದ ರಾಷ್ಟ್ರೀಯತೆಯವರೆಗೆ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಅಂತರರಾಷ್ಟ್ರೀಯ ಜ್ಞಾನದ ಯುಗವಾಗಿದ್ದು, ವಿಜ್ಞಾನ, ವಾಣಿಜ್ಯ ಮತ್ತು ಮಾನವಿಕ ವಿಷಯಗಳ ಸಮನ್ವಯ ಅತ್ಯಗತ್ಯವಾಗಿದೆ ಎಂದು ಹೇಳಿದರು.

ವಿಜ್ಞಾನವು ತಂತ್ರಜ್ಞಾನ ಮತ್ತು ನಾವೀನ್ಯತೆಯನ್ನು ಒದಗಿಸಿದರೆ, ವಾಣಿಜ್ಯವು ಆರ್ಥಿಕ ಅಭಿವೃದ್ಧಿಯ ಮಾರ್ಗವನ್ನು ತೋರಿಸುತ್ತದೆ ಹಾಗೂ ಮಾನವಿಕ ವಿಷಯಗಳು ಸಮಾಜಕ್ಕೆ ನೈತಿಕ ದಿಕ್ಸೂಚಿ ಮತ್ತು ಮಾನವೀಯ ಮೌಲ್ಯಗಳನ್ನು ನೀಡುತ್ತವೆ ಎಂದರು.

ಬೆಂಗಳೂರು ಜ್ಞಾನ, ನಾವೀನ್ಯತೆ ಮತ್ತು ತಾಂತ್ರಿಕ ಪ್ರಗತಿಯ ಜಾಗತಿಕ ಕೇಂದ್ರವಾಗಿ ಬೆಳೆಯುತ್ತಿದ್ದು, ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಉದ್ಯಮಶೀಲತೆಯಲ್ಲಿ ದೇಶವನ್ನು ಮುನ್ನಡೆಸುತ್ತಿದೆ, ಎಂಇಎಸ್ ನಂತಹ ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಲಿವೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಶಿಕ್ಷಣ ಸಂಘದ ಅಧ್ಯಕ್ಷ ಎಸ್.ಎಸ್.ರಾಮದಾಸ್, ಡಾ.ಎಸ್. ಸಿ. ಶರ್ಮಾ, ಎಂಇಎಸ್ ಕಾರ್ಯನಿರ್ವಾಹಕ ಮುಖ್ಯಸ್ಥ ಡಾ. ಹರಿಪ್ರಸಾದ್, ಪ್ರಾಂಶುಪಾಲ ಡಾ. ಆದರ್ಶ್ ಎಚ್.ಜಿ. ಸೇರಿದಂತೆ ಇತರರಿದ್ದರು.



ಸಾಮಾಜಿಕ ಸಾಮರಸ್ಯ ಇರಲಿ

ದೇಶಭಕ್ತಿ, ಸಂವಿಧಾನದ ಮೌಲ್ಯಗಳು ಹಾಗೂ ರಾಷ್ಟ್ರೀಯ ಏಕತೆಯ ಮಹತ್ವವನ್ನು ಯುವಜನರಲ್ಲಿ ಬಲಪಡಿಸುವ ಉದ್ದೇಶದಿಂದ ಸ್ವಾತಂತ್ರ್ಯದಿಂದ ರಾಷ್ಟ್ರೀಯತೆಯವರೆಗೆ ಎಂಬ ವಿಷಯದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ. ದೇಶದ ವಿವಿಧ ಭಾಗಗಳಿಂದ ಆಗಮಿಸುವ ಶಿಕ್ಷಣ ತಜ್ಞರು, ಸಂಶೋಧಕರು, ಚಿಂತಕರು ಹಾಗೂ ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟದ ಪರಂಪರೆ, ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ, ಸಂವಿಧಾನದ ಆಶಯಗಳು ಮತ್ತು ಸಮಕಾಲೀನ ಸವಾಲುಗಳ ಕುರಿತು ವಿಚಾರ ಮಂಡಿಸಲಿದ್ದಾರೆ. ರಾಷ್ಟ್ರೀಯ ಪ್ರಜ್ಞೆ, ಸಾಮಾಜಿಕ ಸಾಮರಸ್ಯ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳ ಕುರಿತು ಚರ್ಚೆಗಳು ನಡೆಯಲಿದ್ದು, ಭಾಗವಹಿಸುವವರಿಗೆ ಪ್ರಮಾಣಪತ್ರ ವಿತರಿಸಲಾಗುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ. ಈ ವಿಚಾರ ಸಂಕಿರಣವು ರಾಷ್ಟ್ರಭಕ್ತಿ ಮತ್ತು ಜವಾಬ್ದಾರಿಯುತ ನಾಗರಿಕ ಮನೋಭಾವ ಬೆಳೆಸಲು ನೆರವಾಗಲಿದೆ ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ತಿಳಿಸಿದರು.

ಆನೇಕಲ್ ಕ್ಷೇತ್ರದ ಅಭಿವೃದ್ಧಿಗೆ ಬದ್ಧ: ಶಾಸಕ ಬಿ. ಶಿವಣ್ಣ

• **ಆನೇಕಲ್:** ಆನೇಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎಲ್ಲಾ ರಸ್ತೆಗಳ ಅಭಿವೃದ್ಧಿಗೆ ಸಮಗ್ರ ಕ್ರಿಯಾಯೋಜನೆ ರೂಪಿಸಲಾಗಿದ್ದು, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಎಂದು ಶಾಸಕ ಬಿ. ಶಿವಣ್ಣ ಹೇಳಿದರು.

ತಾಲ್ಲೂಕಿನ ಮುಗ್ಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೊಕ್ಕಸಂದ್ರ ಗ್ರಾಮದ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದ ಅನೇಕ ರಸ್ತೆಗಳು ನಿರಂತರ ಮಳೆಯಿಂದ ಗುಂಡಿಗಳು ಬಿದ್ದು ಹದಗೆಟ್ಟಿದ್ದು, ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆ ಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಅನುದಾನ, ಯೋಜನಾ ಪ್ರಾಧಿಕಾರ ಸೇರಿದಂತೆ ವಿವಿಧ ಇಲಾಖೆಗಳ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ರಸ್ತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ವಾಹನ ದಟ್ಟಣೆ ಗಣನೀಯವಾಗಿ ಹೆಚ್ಚಾಗುತ್ತಿರುವುದರಿಂದ ಆನೇಕಲ್ ತಾಲ್ಲೂಕಿಗೆ ಹೆಚ್ಚುವರಿ ಸಂಚಾರ ಪೊಲೀಸ್ ಠಾಣೆಗಳ ಅಗತ್ಯವಿದೆ. ಈ ಕುರಿತು ಸರ್ಕಾರಕ್ಕೆ ಮನವಿ ಸಲ್ಲಿಸಿ ಅಗತ್ಯ ಮಂಜೂರಾತಿ ಪಡೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ರಾದ ಚಂದಾಪುರ ಮಡಿವಾಳ ಶಿವರಾಮು, ಚೊಕ್ಕಸಂದ್ರ ಬಾಬು, ವೇಣು, ಯಲ್ಲಪ್ಪ, ವೆಂಕಟೇಶ್, ಶ್ರೀನಿವಾಸ್ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ರಸ್ತೆ ಅಭಿವೃದ್ಧಿಗೆ ಆದ್ಯತೆ

ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ಮಳೆಯಿಂದ ಹದಗೆಟ್ಟಿರುವ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ಸಿದ್ಧಗೊಂಡಿದ್ದು, ವಿವಿಧ ಇಲಾಖೆಗಳ ಅನುದಾನವನ್ನು ಬಳಸಿಕೊಂಡು ಕಾಮಗಾರಿಗಳನ್ನು ವೇಗಗೊಳಿಸಲಾಗುವುದು ಎಂದು ಶಾಸಕ ಬಿ. ಶಿವಣ್ಣ ತಿಳಿಸಿದರು. ಜೊತೆಗೆ, ಹೆಚ್ಚುತ್ತಿರುವ ವಾಹನ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು ತಾಲ್ಲೂಕಿಗೆ ಹೆಚ್ಚುವರಿ ಸಂಚಾರ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸುವುದಾಗಿ ಹೇಳಿದರು.



ಬೀಗ ಮುರಿದು ಸಿಲಿಂಡರ್, ನಗದು ಕಳವು

• **ಪಾಂಡವಪುರ:** ಟೀ ಅಂಗಡಿಯ ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ನಗದು ಹಾಗೂ ಸಿಲಿಂಡರ್ ಸೇರಿದಂತೆ ಸುಮಾರು 20 ಸಾವಿರ ರೂ. ಮೌಲ್ಯದ ವಸ್ತುಗಳನ್ನು ಕಳವು ಮಾಡಿರುವ ಘಟನೆ ತಾಲೂಕಿನ ಎಲೆಕೆರೆ ಗ್ರಾಮದ ಸಮೀಪವಿರುವ ಪುರಿ ಜಗನ್ನಾಥ್ ಕಾಫಿಕಟ್ಟೆಯಲ್ಲಿ ನಡೆದಿದೆ.

ಎಲೆಕೆರೆ ನಿವಾಸಿ ಕಲ್ಪನಾ ಎಂಬುವವರಿಗೆ ಸೇರಿದ ಪುರಿ ಜಗನ್ನಾಥ್ ಕಾಫಿಕಟ್ಟೆ ಅಂಗಡಿಯಲ್ಲಿ ಕಳ್ಳತನ ನಡೆದಿದ್ದು, ಮೊದಲಿಗೆ ಕಳ್ಳರು ಅಂಗಡಿ ಮುಂಭಾಗದ ಶೆಲ್ಟರ್ ನ್ನು ಮೀಟಿದ್ದಾರೆ. ಅದು ಸಾಧ್ಯವಾಗದ ಹಿನ್ನೆಲೆಯಲ್ಲಿ ಅಂಗಡಿ ಬಾಗಿಲಿಗೆ ಅಳವಡಿಸಿದ್ದ ಮೂರು ಡೋರ್ ಲಾಕ್‌ಗಳನ್ನು ಒಡೆದು ಒಳನುಗ್ಗಿ ಕಳ್ಳತನವೆಸಗಿದ್ದಾರೆ. ಟೀ ಅಂಗಡಿಯಲ್ಲಿದ್ದ ಸಿಲಿಂಡರ್, ಸಿಗರೇಟ್ ಹಾಗೂ ಬೀಡಿ ಪ್ಯಾಕೆಟ್ ಗಳು, ಜ್ಯೂಸ್ ಪ್ಯಾಕೆಟ್ ಗಳು, ಕ್ಯಾಶ್ ಟೇಬಲ್ ನೊಳಗಿರಿಸಿದ್ದ 500ರೂ. ನಗದು ಸೇರಿದಂತೆ ಒಟ್ಟು 20 ಸಾವಿರ ಮೌಲ್ಯದ ವಸ್ತುಗಳು ಕಳುವಾಗಿವೆ ಎಂದು ಅಂಗಡಿ ಮಾಲೀಕೆ ಕಲ್ಪನಾ ತಿಳಿಸಿದ್ದಾರೆ.

ದಂತ ವೈದ್ಯ ಡಾ.ಚಂದ್ರು ಮಂಜುನಾಥ್ ಕಿವಿಮಾತು

ಹಲ್ಲಿನ ಆರೋಗ್ಯದ ಬಗ್ಗೆ ಜಾಗೃತಿ ಅಗತ್ಯ

• **ಆನೇಕಲ್:** ತಾಲ್ಲೂಕಿನ ಚಂದಾಪುರ ಸಮೀಪದ ಇಗ್ಗಲೂರಿನಲ್ಲಿ ನೂತನವಾಗಿ ಪ್ರೈಮ್ ಡೆಂಟಲ್ ಕ್ಲಿನಿಕ್ ಶುಭಾರಂಭಗೊಂಡಿದ್ದು, ಸಾರ್ವಜನಿಕರು ಹಲ್ಲಿನ ಆರೋಗ್ಯದ ಬಗ್ಗೆ ಜಾಗೃತಿ ಹೊಂದಿ ಅಗತ್ಯ ಸಲಹೆ ಹಾಗೂ ಚಿಕಿತ್ಸೆ ಪಡೆಯಲು ಕ್ಲಿನಿಕ್‌ಗೆ ಭೇಟಿ ನೀಡಬೇಕು ಎಂದು ದಂತ ವೈದ್ಯ ಡಾ. ಚಂದ್ರು ಮಂಜುನಾಥ್ ಹೇಳಿದರು.

ಚಂದಾಪುರ ಪುರಸಭೆ ವ್ಯಾಪ್ತಿಯ ಇಗ್ಗಲೂರಿನಲ್ಲಿ ನಡೆದ ಕ್ಲಿನಿಕ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಲ್ಲಿನ ಆರೋಗ್ಯವನ್ನು ನಿರ್ಲಕ್ಷಿಸದೆ ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯವಾಗಿದೆ. ಪ್ರೈಮ್ ಡೆಂಟಲ್ ಕ್ಲಿನಿಕ್‌ನಲ್ಲಿ ನುರಿತ ದಂತ ವೈದ್ಯರಿಂದ ಗುಣಮಟ್ಟದ ಚಿಕಿತ್ಸೆ ಹಾಗೂ ಸೂಕ್ತ ಮಾರ್ಗದರ್ಶನ ಲಭ್ಯವಿದೆ ಎಂದು ತಿಳಿಸಿದರು.

ಕ್ಲಿನಿಕ್‌ನಲ್ಲಿ ರೂಟ್ ಕೆನಾಲ್ ಚಿಕಿತ್ಸೆ, ಹಲ್ಲುಗಳ ಸ್ವಚ್ಛತೆ (ಸ್ಕೇಲಿಂಗ್), ಹಲ್ಲುಗಳ ತುಂಬಿಕೆ, ಕೃತಕ ಹಲ್ಲು ಅಳವಡಿಕೆ ಸೇರಿದಂತೆ ದಂತ ಸಮಸ್ಯೆಗಳಿಗೆ ಅಗತ್ಯವಿರುವ ವಿವಿಧ ಚಿಕಿತ್ಸೆಗಳು ಒಂದೇ ಸೂರಿನಡಿ ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.



ಹಲ್ಲಿನ ಆರೋಗ್ಯಕ್ಕೆ ನಿಯಮಿತ ತಪಾಸಣೆ ಅಗತ್ಯ

ಹಲ್ಲಿನ ನೋವು ಕಾಣಿಸಿಕೊಂಡ ಬಳಿಕ ಮಾತ್ರ ಚಿಕಿತ್ಸೆ ಪಡೆಯುವ ಬದಲು, ಪ್ರತಿ ಆರು ತಿಂಗಳಿಗೊಮ್ಮೆ ದಂತ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ಹಲ್ಲು ಮತ್ತು ವಸಡುಗಳ ಆರೋಗ್ಯ ಕಾಪಾಡಿಕೊಳ್ಳಲು ದಿನಕ್ಕೆ ಎರಡು ಬಾರಿ ಹಲ್ಲುಜ್ಜುವುದು, ಸಿಹಿ ಆಹಾರ ಸೇವನೆಯ ನಂತರ ಬಾಯಿ ಸ್ವಚ್ಛಗೊಳಿಸುವುದು ಹಾಗೂ ಅಗತ್ಯವಿದ್ದರೆ ದಂತ ವೈದ್ಯರ ಸಲಹೆ ಪಡೆಯುವುದು ಆರೋಗ್ಯಕರ ಅಭ್ಯಾಸವಾಗಿದೆ.

ಕಾಡಾನೆ ಮೃತದೇಹ ಪತ್ತೆ

• **ಚಾಮರಾಜನಗರ:** ಬಿಳಿಗಿರಿ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು ವನ್ಯಜೀವಿ ವಲಯ ವ್ಯಾಪ್ತಿಯ ಕಾರೆಹಳ್ಳ ಗ್ರಾಮ ಸಮೀಪ ಅರಣ್ಯ ಪ್ರದೇಶದಿಂದ ಸುಮಾರು 50 ಮೀಟರ್ ದೂರದಲ್ಲಿರುವ ಕಾಫಿ ತೋಟದಲ್ಲಿ ಒಂದು ಕಾಡಾನೆ ಮೃತ ಸ್ಥಿತಿಯಲ್ಲಿ ಪತ್ತೆಯಾಗಿದೆ.



ಮೃತ ಆನೆಯು ಸುಮಾರು 25 ವರ್ಷ ವಯಸ್ಸಿನ (ಮಕನಾ) ಗಂಡಾನೆಯಾಗಿದ್ದು, ಮೇಲ್ನೋಟಕ್ಕೆ ಇತರ ಆನೆಗಳೊಂದಿಗಿನ ಕಾದಾಟದಿಂದ ಗಾಯಗೊಂಡು ಮೃತಪಟ್ಟಿರಬಹುದೆಂದು ಕಂಡುಬಂದಿದೆ. ಘಟನೆಯ ಮಾಹಿತಿ ದೊರೆತ ತಕ್ಷಣ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (BAD), ಬಿಳಿಗಿರಿ ವಿಭಾಗ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಪಶುವೈದ್ಯಾಧಿಕಾರಿಗಳ ಸಮ್ಮುಖದಲ್ಲಿ ಮೃತ ಆನೆಯ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಹೆಚ್ಚಿನ ಪರಿಶೀಲನೆಗಾಗಿ ಮೃತ ಆನೆಯ ಅಂಗಾಂಗ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

IN THE COURT OF THE ASSISTANT COMMISSIONER DODDABALLAPURA SUB DIVISION AT DODDABALLAPURA

R.A. (Db). No.63/2025

Between
Smt. Rathnamma. ...Appellant
And:
The Tahsildar and others. ...Respondents

NOTICES TO RESPONDENTS No.2 TO 5 BY WAY OF PAPER PUBLICATION UNDER ORDER 5 RULE 20 OF CPC

Respondent No.2:-
Sri.C.Channakeshava, S/o Late Channappakrishnappa, Major in age R/at: D.J.Halli village, Thubagere Hobli, Doddaballapura Taluk, Bengaluru Rural District.
Respondent No.3:-
Smt. Nanjamma, W/o Veeranna, Major in age R/at: Thimmajanahalli village, Thubagere Hobli, Doddaballapura Taluk, Bengaluru Rural District.
Respondent No.4:-
Smt.Lakshmamma, W/o Suresh, Major in age R/at: Doddamarali village, Nandhi Hobli, Chikkaballapura Taluk, Chikkaballapura District.
Respondent No.5:-
Smt. Channamma, D/o: Late Subbarayappa, Major in age R/at: Seegehalli village, Thubagere Hobli, Doddaballapura Taluk, Bengaluru Rural District.

Whereas the above mentioned appeal has been filed by the appellant against the Respondents seeking set aside of RTC, Mutation vide M.R.No.18/2005-06 in respect of the property bearing Sy.No.77/7 measuring to an extent of 0-12 Guntas, M.R.No.H27/2011-12 in respect of the property bearing Sy.No.77/7 measuring to an extent of 0-10 Guntas & M.R.No.T16/2021-22 in respect of the property bearing Sy.No.77/7 measuring to an extent of 0-02 Guntas, all are situated at Machagondahalli village, Thubagere Hobli, Doddaballapura Taluk, Bengaluru Rural District. The above appeal is posted for appearance of the Respondents No.2 to 5.

The Respondents No.2 to 5 above mentioned is hereby noticed to appear in this court in person or through an advocate duly instructed to act on his behalf before the Hon'ble Assistant Commissioner, Doddaballapura Sub Division at Doddaballapura, **at 11.00 a.m. on 01/07.2026**. If the Respondents No.2 to 5 fail to appear on the said date, the above case will be heard and decided in your absence as Ex-Parte on merits.

Given under my hand and seal of this Hon'ble court on this day **24/06/2026**

BY ORDER OF THE COURT
ASSISTANT COMMISSIONER
And Sub-Divisional Magistrate
Doddaballapur Sub-Division
Bangalore Rural District
Doddaballapur
Advocate for service:
Sri.K.Anandkumar
Advocate
Office at:- No.45, 18th Cross, L & T Layout, Amruthahalli, Bengaluru

---

IN THE COURT OF THE PRL. CIVIL JUDGE AND JMFC ANEKAL

C.Misc. No. 1008/2026

BETWEEN : Sri. Shivakumar, S/o Late Krishnappa, Aged about 36 years R/at Ward No. 17, A.K. Colony, Anekal Town, Anekal Taluk, Bangalore District-562 106. **...Petitioner**
AND : The Chief Officer, Anekal Town. **...Respondent**

PAPER PUBLICATION

Whereas the petitioners have filed the above petition for seeking the death certificate of petitioner grandmother namely **Lakshmamma W/o. Late Nanjappa who was died on 02.06.2002** at A.K. Colony, Anekal Town, Anekal Taluk, Bangalore District, before the Prl. Civil Judge and JMFC at Anekal, whereas the above petition is fixed for hearing **date 31.07.2026 at 11.00 AM** if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the Court on this 24th day of June 2026.

By Order of the Court,
Sheristadar, Civil Judge (Jr.Dn.)
and JMFC Court, Anekal.
Sri. Shashi Kumar .R, Advocate
Office at STB Complex, Attibele Main Road, Anekal Town, Anekal Taluk, Bangalore District.

IN THE COURT OF THE ASSISTANT COMMISSIONER AT TUMKUR

RRT (A)(G). 750/2023-24

Appellant: R.S.Chidamani **-V/S-**
Respondents: The Tahashildar and others
Opponent: Lakshmamma W/o late. Shivanna, Major in age, R/at Guluru Village, Guluru Hobli, Tumkur Taluk. ...... Respondent no.9

PAPER PUBLICATION

Take notice that the Appellant has preferred this appeal against the respondent No.1 to 9 as against the order passed by the respondent No. 1 and 2 which pertains to Sy.no 150/10, 150/17A, 150/17B situated at Gulur Village, Gulur Hobli, Tumkur taluk, Tumkur District.

Respondent no.9 is hereby directed to appear in person or through Advocate before this court on 29.06.26 at 3.00 p.m. to which day the hearing is fixed, failing which the matter will be decided in accordance with law.

Given under my hand and the seal of the Court, this 20th Day of June, 2026.

By order of the court,
Sd/- Special Sub-Divisional Officers-01,
Tumkur sub-division, Tumkur
Advocate for Petitioners
Sd/- **Sri. R.P. Prakash, Sri. G.Nagaraja**
Advocates, M.G.Trishul, near Gumchi square M.G. road, Tumkur.

IN THE COURT PRINCIPAL SENIOR CIVIL JUDGE AT BANGALORE RURAL DISTRICT, BANGALORE

O.S. No. 715/2022

BETWEEN: Mr. Sarvar Khan, S/o Mohammed Khan .S, aged about 52 years, R/at No. 18, Mangammana Palya, And Main, 2nd Cross, Bommanahalli, Mangammana Palya, Bangalore-560068. ... **PLAINTIFF**
AND: Ms. Noor Fathima ... DEFENDANTS

NOTICE TO PROPOSED DEFENDANT NO.2

1. **Mr. MD. Nooruddeen,** aged about 51 years, S/o Late Shaik Babjan, Residing at No 13/4, 2nd Cross, Suddagunte Palya, DRC Post, Bangalore-560029.

Whereas the above named plaintiff instituted a suit against you for Specific performance.

You are hereby summoned to appear on **20/07/2026 at 11:00 A.M** in person or through advocate/ pleader to answer the questions to the same. Failing which the suit will be heard and determined as ex-parte.

SCHEDULE

All that part and parcel of property bearing No. Assessment No.76, 335/3 & 335/4, measuring east to West 60 feet and North to South 40 feet totally in all 2400 square feet situated at Begur Village, it comes under the BBMP Begur Hobli, Bangalore south Taluk and bounded on the: **East by:** Road, **West by:** Site No.69, **North by :** Site No.75, **South by:** Site No.77

Given under my hand and seal of the Court on this 20/06/2026

By order of the Court, Chief Ministerial Officer, Senior Civil Judge Court, Bengaluru Rural Dist, Bengaluru

B.S. RAVINDRA, Advocate
No.4, 4th floor, Grand Majestic Mall, Gandhinagar, Bangalore-560009.

IN THE HON'BLE COURT OF THE 1st ADDL. SENIOR CIVIL JUDGE, AT NELAMANGALA

M.C.No. 150/2025

PETITIONER : Sri. Muniraju -V/s-
RESPONDENT : Smt. P.T. Asha

SUMMONS TO THE RESPONDENT

Smt. P.T. ASHA, Wife of Sri. Muniraju, Aged about 29 years, R/at Indiranagara, Thippashettyhalli, Hanumanthapura, Billanakote, Nelamangala Taluk, Bangalore Rural District.

SUMMONS UNDER ORDER 5 RULE 20(1-A) OF C.P.C.

WHEREAS, the Petitioner has filed the above petition against you for dissolving the marriage between the petitioner and the respondent dated 29.05.2011 at Shree Vasavi Kalyana Mantapa, Vishyara Bheedi, Thymagondlu, Nelamangala Taluk and for other reliefs in the above case. The Hon'ble Court has posted the above case on **10-08-2026** at 11:00 A.M. for your appearance personally or through your counsel, on that day. Hence, you are summoned to appear before the court on the said date personally or by the pleader, otherwise the Hon'ble Court will be deciding the matter in your absence by placing you ex-parte.

Given under my hand and seal of this Court on 23-06-2026.

By order of the court, Sheristedar, Court of Senior civil Judge and JMFC Nelamangala.

KDM & ADVOCATES
SRI. K.D. NAIK, Advocate
No. 3854/44, 3rd Cross, Dadapeer Layout, Nelamangala Town, Bangalore Rural District.

IN THE COURT OF THE PRINCIPAL CIVIL JUDGE AND JMFC AT, PAVAGADA

C.Mis.No. 166/2026

Petitioners; 1. Narasimha Murthy S/o Late Narasappa, Aged about 43 years, **2.Hanumakka** W/o Late Narasappa, Aged about 70 years. 3. Narasamma D/o Late Narasappa, Aged about 50 years. **4.Venkatalakshmamma** D/o Late Narasappa Aged about 48 years, **5.Kalavathi** D/o Late Narasappa, Aged about 40 years, All are R/o Basavanahalli village, Virupasamudra post, Kasaba Hobli, Pavagada Taluk

V/S

Respondent; The Tahsildar Cum Register of Births and Deaths Office, Pavagada, Pavagada Taluk

PAPER PUBLICATION

WHEREAS, the petitioners have filed the above petition seeking issue of Death certificate of petitioner's father by name **Narasappa S/o Late Dasappa** was died on **01-08-1996** at Basavanahalli village, Kasaba Hobli Pavagada Taluk, now the matter is set down for issue notice/suit summons to all or any interested persons or legal heirs whoever got any objection over the above said death certificate may appear in this case either as respondent/ petitioners and may prosecute the same on the date of hearing i.e. 30/6/26 you are hereby called upon to appear before this Hon'ble court at 11.00 a.m. on the said date of hearing either in person or through your counsel. If you fail to appear this court, the matter will be heard and decided exparte.

Given under my hand and seal of the court this day of 13/5/2026.

By order
Sheristedar, CMO, PCJ & JMFC Court, Pavagada.
Advocate for petitioners;
Hanumantharayappa R., Advocate, Pavagada.

PUBLIC NOTICE

Public are informed that my client **Manjunatha .M.N,** S/o.Nanjappa, Doddamannugudde Doddi, Bilugumba,Bilugumba, Ramanagar Karnataka-562159

My client is all that peace and parcel of the property bearing Khatha No. 1979/1696/524/2697/281, PID no.1-3-525-191 measuring East to West-9.144018 meters and North to South-7.620015 meters, in all measuring 69.67725 Sq.meters, Situated at Ramanagar Town, Bangalore South District and bounded on:

East By : Road,
West By : Site No.246,
North By : Site No.282,
South By : Site No.280.

My client has lost the Original property documents i.e. Registered Sale Deed Doc. No. 754/1995-96 dated 20.06.1995, registered in Ramangara Sub-Registrar, Bangalore.

The said property is in possession of Manjunatha .M.N, is the absolute owner and free from all encumbrances whatsoever.

My Client had lost the above mentioned deed, Inspite of several efforts the Original deed not found and he had lodged the police complaint through online dated 25.06.2026, Lost Report No. 2274161/2026.

If any person found or anyone having any claim or interest over the said property, he/she is requested to forward their claims along with the relevant documents to us within 07 days of this public notice. If we do not receive any claim from any person within 07 days, it will be strictly presumed that this property is absolutely free from any claim or encumbrance and no one has any claim over this property and if any One found the above deed kindly contact below mentioned.

PREMA B DUBAE - Advocate
FFD VI, 4th floor Sampoorna Chambers, Vasavi Temple Road, V.V.Puram Bengaluru-560004.
080-42053588/080-42296869

PUBLIC NOTICE

My Client **Sri. GUTHIKONDA MANOJ KUMAR,** Son of Narasimha Rao Guthikonda, Aged about 49 Years, Residing at : Villa No. 06, Vasantha City, Hafeezpet, Near Hi tech City MMTS Station, Miyapur, Telgana-500049 , now at Bangalore , is desirous of purchasing shown in the Schedule from its Owner **Mrs. MAHBANO MIRZA,** wife of Mirza Mohammed Mehdi, Aged about 70 Years, Permanent Residing at : 17/13, Spencer Road Cross, Opp. to Seventh Day Adventist School, Pulkeshi Nagar, Bengaluru : 560005.

Any Person or persons having/asserting any right title or interest, claim or intending to oppose the purchase in any manner may file their written objections within **07 (Seven) DAYS** from the date of publication of the notice hereof, with documentary proof to the undersigned at his office where after no such claims shall be entertained and our client will proceed to complete the Sale transaction of the Schedule Apartment.

SCHEDULE PROPERTY

All that piece and parcel of property bearing **Site No. 11, bearing BBMP EPID No. 4802914329** bearing Khatha No. 402 carved out of property comprising of site Nos. 1 to 39 in Rustumji Villas and bearing Khatha Nos. 129 to 133, 297 to 300, Nos. 294 to 296, Nos. 375 to 383, 402, Nos. 398 to 401 and Nos. 403 to 407 allotted by the CMC Mahadevapura, measuring **East Side 40.4 Feet and West Side 40 Feet and North to South Side 59.10 in all measuring 2376 Square Feet, situated at Whitefield Village, presently comes under BBMP Ward No.84 Hagaduru, Krishnarajapuram Hobli, Bangalore East Taluk, Bangalore,** and bounded as follows : East by : Site No.12, West by : Road, North by : Site No. 13-A and South by : Road of Width 10 Feet enclosed by Gateway Apartment.

MAHENDRA KUMAR. M., Advocate
No.5, 1st Floor, Srirama Complex, Opp. to UCO Bank, Hagaduru, Immadihalli Main Road, Whitefield, Bangalore : 560066.
Mob: 9148920250 Date : 26.06.2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಹೊಸಕೋಟೆ

ಓ.ಎಸ್.ಸಂಖ್ಯೆ:196/2026

BY ORDER OF THE COURT
Sheristetar
Civil Judge &J.M.F.C.
Hoskote.

BEFORE THE ASSISTANT COMMISSIONER BENGALURU SOUTH SUB DIVISION, AT BENGALURU

R.A. (S) No. 23/2026

BETWEEN: Sri .M. Gopal and others **...APPELLANTS**
AND: The Tahasildar, and others **...RESPONDENTS**

SUMMONS TO RESPONDENTS No.2 to 6, 11 to 13

2. **Sri. Rajappa,** S/o Late Chinnappa, Aged major. **3. Sri. Yellappa,** S/o Late Chinnappa, Aged major, **4. Sri. Manjappa,** S/o Late Chinnappa, Aged major **5. Sri. Venkatesh,** S/o Late Krishnappa, Aged major, **6. Sri. Narayanaswamy,** S/o Late Krishnappa, Aged major, **11. Sri. Suresh,** S/o Narayanappa, Aged major, **12. Sri. Anil Kumar,** S/o Narayanappa, Aged major, **13. Sri. Manjappa,** S/o Narayanappa, Aged major, All are residing at Doddathogur Village, Begur Hobli, Electronic City Post, Begur Hobli, Bengaluru South Taluk, Bengaluru-560 100.

Whereas, the Appellants have filed the above appeal against the Respondents for the relief of we have filed the above appeal by challenging the impugned mutation order of the 1st Respondent in M.R No. H24/2024-25 dated 23.6.2025 standing in the name of Respondents 2 to 13 herein based on impugned order in RRT.CR.92/2025-26, dated 22.5.2025 in respect of property bearing Old Survey No.110, new Survey No.110/5, new No.110, now Survey No.110, measuring an extent of 4 acres situated at Doddathogur village, Begur Hobli, Bengaluru South Taluk Bengaluru, and other consequential reliefs filed against the Respondents.

Hereby calling upon you to appear before this Hon'ble Court, at Bengaluru on **08-07-2026** at about 3:00 PM through your counsel or in person/s, failing which the matter shall be heard exparte in your absence.

Given under my hand and the seal of the court on 25-06-2026.

By order of the court, Assistant Commissioner, Bangalore South Sub Division, at Bangalore.

SRI. H. MAREGOWDA,
SRI. D. NARAYANASWAMY, Advocates
office at No1208/1, "Byraveshwara Nilaya", Vishveshwaraiah Layout, 7th Block, Further Extension, Vishwaneedam Post, Bengaluru-560 091.
Mobile No: 9482734297 / 9901290901

ರೇಷ್ಮೆ ಇಲಾಖೆ, ರೇಷ್ಮೆ ಉಪನಿರ್ದೇಶಕರ ಕಛೇರಿ,
ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ಶಿಡ್ಲಘಟ್ಟ
ಚಿಕ್ಕಬಳ್ಳಾಪುರ ಜಿಲ್ಲೆ-562105
Ph:9945047204, Email-gcm.sdl@gmail.com

ಸಂಖ್ಯೆ:ರೇಉನಿ:ಸರೇಗೂಮಾ:ಶಿಡ್ಲ:ರೇಗೂ:ಪರೀ:ಪತ್ರೀ:ಇ-ಟೆಂಡರ್:10:2026-27
ದಿನಾಂಕ:22.06.2026

ಇ-ಟೆಂಡರ್

ರೇಷ್ಮೆ ಉಪ ನಿರ್ದೇಶಕರ ಕಛೇರಿ, ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ಶಿಡ್ಲಘಟ್ಟ ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿಗೆ ವಿವಿಧ ಭಾಗಗಳಿಂದ ಬರುವ ರೇಷ್ಮೆ ಗೂಡುಗಳ ಗುಣ ಮಟ್ಟವನ್ನು ಪರೀಕ್ಷೆಗೆ ಒಳಪಡಿಸುವ ಸಂಬಂಧ ರೇಷ್ಮೆ ಗೂಡುಗಳ ವರ್ಗೀಕರಣ, ಪರೀಕ್ಷೆ ಹಾಗೂ ಶ್ರೇಣೀಕರಣ ಕೈಗೊಳ್ಳುವ ಕಾರ್ಯಕ್ಕೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಸಂಬಂಧ ಅರ್ಹ ಸಂಸ್ಥೆಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ ಗರಿಷ್ಠ ಅಂದಾಜು ಮೊತ್ತ ರೂ. 84.20 ಲಕ್ಷವಾಗಿದೆ. ಆಸಕ್ತರು **ದಿನಾಂಕ: 13.07.2026 ಸಮಯ 5.00 ಗಂಟೆಯೊಳಗೆ** ಆನ್‌ಲೈನ್ ಮೂಲಕ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. **(1)** ಟೆಂಡರ್ ಸಂಖ್ಯೆ ಮತ್ತು ದಿನಾಂಕ: ಸಂಖ್ಯೆ: ರೇಉನಿ :ಸರೇಗೂಮಾ: ಶಿಡ್ಲ: ರೇಗೂ:ಪರೀ:ಪತ್ರೀ:ಇ-ಟೆಂಡರ್:10:2026-27 ದಿನಾಂಕ: 22.06.2026 **(2)** ಟೆಂಡರ್ ಬಗ್ಗೆ ಚರ್ಚಿಸುವ ದಿನಾಂಕ ಮತ್ತು ಸಮಯ: **29.06.2026, ಮಧ್ಯಾಹ್ನ: 1.00 ಗಂಟೆಗೆ. (3)** ಟೆಂಡರ್ ಬಗ್ಗೆ ಆಕ್ಷೇಪಣೆ ಸಲ್ಲಿಸಲು **ಕೊನೆ ದಿನಾಂಕ: 03.07.2026 (4)** ದರಪಟ್ಟಿ ಸಲ್ಲಿಸಲು **ಕೊನೆ ದಿನಾಂಕ: 13.07.2026 ಸಂಜೆ 5.00 ಗಂಟೆ (5)** ಮಾದರಿ ಪರೀಕ್ಷೆ ಒಳಪಡಿಸುವ ದಿನಾಂಕ ಮತ್ತು ಸಮಯ: **20.07.2026, ಸಂಜೆ 5.00 ಗಂಟೆ (6)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **15.07.2026 ಬೆಳಗ್ಗೆ 11.00 ಗಂಟೆ (7)** ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **24.07.2026 ಬೆಳಗ್ಗೆ 11.00 ಗಂಟೆ (8)** ಇ.ಎಂ.ಡಿ ಮೊತ್ತ ರೂ. **1,25,000 (9)** ಸಂಪರ್ಕಿಸಬೇಕಾದ ಕಛೇರಿ ವಿಳಾಸ: ರೇಷ್ಮೆ ಉಪ ನಿರ್ದೇಶಕರು, ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ಶಿಡ್ಲಘಟ್ಟ, ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ: **http://eproc.karnataka.gov.in** ಹಾಗೂ ರೇಷ್ಮೆ ಉಪ ನಿರ್ದೇಶಕರು ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ಶಿಡ್ಲಘಟ್ಟ ದೂರವಾಣಿ ಸಂಖ್ಯೆ: 9945047204 ಇವರನ್ನು ಸಂಪರ್ಕಿಸಬಹುದು.

ಸಹಿ/- ರೇಷ್ಮೆ ಉಪನಿರ್ದೇಶಕರು
ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ಶಿಡ್ಲಘಟ್ಟ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:119/ಕೆಎಸ್‌ಎಂಸಿಎ/2026-27

Mindteck
ಮೈಂಡ್‌ಟೆಕ್ (ಇಂಡಿಯಾ) ಲಿಮಿಟೆಡ್
(CIN:L30007KA1991PLC039702)
ಇ-ಮೇಲ್: info@mindteck.com | ವೆಬ್‌ಸೈಟ್: www.mindteck.com

ಜೂನ್ 09, 2026 ರ ಅಂಚೆ ಮತಪತ್ರ ಸೂಚನೆಗೆ ತಿದ್ದೋಲೆ

1	ಶ್ರೀಮತಿ ಶ್ರೀನಿ ಜೋಷನ್ (DIN: 07822681) ...
2	ಶ್ರೀ ಮಧುರನಾಥ್ ಆರ್ ಕೊರ್ಟಿ (DIN: 02161694) ...

ಕಂಪನಿಯ ವೆಬ್‌ಸೈಟ್ www.mindteck.com ಮತ್ತು ... www.evotingindia.com

ಸ್ಥಳ: ಬೆಂಗಳೂರು
ದಿನಾಂಕ: ಜೂನ್ 25, 2026

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯಡಿಯೂರು ವಿಭಾಗ,
4ನೇ ಕ್ರಾಸ್, ಜಯನಗರ 7ನೇ ಬ್ಲಾಕ್, ಬೆಂಗಳೂರು-560070
ಸಂಖ್ಯೆ: ಕಾಪಾಅ(ಯವಿ)/ಟೆಂಡರ್/03/2026-27 ದಿನಾಂಕ: 24-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕ್ರ. ಸಂ.	ಕಾಮಗಾರಿಗಳ ಹೆಸರು / ವರ್ಗೀಕರಣ
1.	... ಅಂದಾಜು ಮೊತ್ತ: ₹.69.39 ಲಕ್ಷಗಳು, ಟೆಂಡರ್‌ಗಿಟ್ಟ ಮೊತ್ತ ₹.56.23 ಲಕ್ಷಗಳು, ಇಎಂಡಿ ಮೊತ್ತ: ₹.1,12,460.00
2.	ಯಡಿಯೂರು ಉಪವಿಭಾಗಕ್ಕೆ ಸಂಬಂಧಿಸಿದ ವಾರ್ಡ್ ಸಂಖ್ಯೆ-105,106 ರಲ್ಲಿ ... ಅಂದಾಜು ಮೊತ್ತ: ₹.30.00 ಲಕ್ಷಗಳು, ಟೆಂಡರ್‌ಗಿಟ್ಟ ಮೊತ್ತ ₹.25.20 ಲಕ್ಷಗಳು, ಇಎಂಡಿ ಮೊತ್ತ: ₹.25,200.00
3.	... ವಾರ್ಡ್ ಸಂಖ್ಯೆ-107, 108 ಮತ್ತು 109 ರಲ್ಲಿ ... ಅಂದಾಜು ಮೊತ್ತ: ₹.45.00 ಲಕ್ಷಗಳು, ಟೆಂಡರ್‌ಗಿಟ್ಟ ಮೊತ್ತ ₹. 38.12 ಲಕ್ಷಗಳು, ಇಎಂಡಿ ಮೊತ್ತ: ₹.38,120.00
4.	... ವಾರ್ಡ್ ಸಂಖ್ಯೆ-110, 111 ಮತ್ತು 112 ರಲ್ಲಿ ... ಅಂದಾಜು ಮೊತ್ತ: ₹.45.00 ಲಕ್ಷಗಳು, ಟೆಂಡರ್‌ಗಿಟ್ಟ ಮೊತ್ತ ₹. 38.12 ಲಕ್ಷಗಳು, ಇಎಂಡಿ ಮೊತ್ತ: ₹.38,120.00

... ದಿನಾಂಕ 26-06-2026ರ ಸಂಜೆ 4:00 ಗಂಟೆಗೆ ... ದಿನಾಂಕ 07-07-2026ರ ಸಂಜೆ 4:00 ಗಂಟೆಯವರೆಗೆ. (3) ... ದಿನಾಂಕ 02-07-2026ರ ಬೆಳಗ್ಗೆ 11:30 ಗಂಟೆಗೆ ... (4) ... ದಿನಾಂಕ 08-07-2026ರ ಸಂಜೆ 4:30 ಗಂಟೆಗೆ ... (5) ... ದಿನಾಂಕ 08-07-2026ರ ಸಂಜೆ 4:30 ಗಂಟೆಗೆ ...

ಸಹಿ/- ಕಾರ್ಯಪಾಲಕ ಅಭಿಯಂತರರು, ಯಡಿಯೂರು ವಿಭಾಗ, ಬೆಂ.ಪ.ನ.ಪಾಲಿಕೆ

SCHEDULE

Vacant site bearing assessment No.434, situated at K.R.Pete Town, measuring East to West: 95 feet, North to Sout 36 feet, Bounded on: East :Road, West :Old Vijaya Bank Road, North :Property of Kullappa South :Road and then Shopping complex of Channegowda

---

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382-220556 ಇ-ಮೇಲ್: predkarwar@gmail.com
ದಿ: 25.06.2026

ಟೆಂಡರ್ ಪ್ರಕಟಣೆ-14/2026-27 (ಕೆ.ಪಿ.ಪಿ ಮೂಲಕ)

... 2000 ಹಾಗೂ Standard Tender Document ರ K.W-1,2 ರ ... https://kppp.karnataka.gov.in ... (1) 2025-2026 ನೇ ಸಾಲಿನ ...
RDPR/2026-27/RD/WORK_INDENT26353/CALL-2 ಅಂದಾಜು ಮೊತ್ತ ರೂ. 25.00 ಲಕ್ಷ, ಮುಂಗಡ ಠೇವಣಿ ರೂ. 50,000.00 ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು (2) ... **RDPR/2026-27/RD/WORK_INDENT26350/CALL-2** ಅಂದಾಜು ಮೊತ್ತ ರೂ. 20.00 ಲಕ್ಷ ಮುಂಗಡ ಠೇವಣಿ: ರೂ. 50,000.00 ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು
(1) ... Technical Bid ... ದಿನಾಂಕ: 07.07.2026 ರ ಮಧ್ಯಾಹ್ನ 16.30 ಘಂಟೆಯವರೆಗೆ. (2) ... Technical Bid ... ದಿನಾಂಕ: 08.07.2026 ಮಧ್ಯಾಹ್ನ 16.31 ಘಂಟೆಗೆ. (3) ...

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ
DIPR/KWR/KSMCA/234/26-27 dt. 25.06.2026

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ-590016
Phone no-0831-2467103
ದಿನಾಂಕ:25.06.2026

-:ಪೂರ್ವ ಅರ್ಹತೆ ಟೆಂಡರ ಅಧಿಸೂಚನೆ (ಕೆ.ಪಿ.ಪಿ.ಪಿ.ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಪೂರ್ವ ಅರ್ಹತೆ ಗುತ್ತಿಗೆಯನ್ನು ಕೆ.ಪಿ.ಪಿ.ಪಿ.ನಲ್ಲಿ ಲೋಕೋಪಯೋಗಿ ಇಲಾಖೆ ಅಡಿಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ ಟೆಂಡರ ದಾಖಲ್ಲಾ ಮೆಂಟ್ ಕೆ.ಡಬ್ಲ್ಯೂ-5 ರಲ್ಲಿ ಲೆಕ್ಕ ಶೀರ್ಷಿಕೆ:2025-26 ನೇ ಸಾಲಿನ 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ-ವೆಚ್ಚ ಅಡಿಯಲ್ಲಿ 01 ಕಾಮಗಾರಿಗೆ ಪೂರ್ವ ಅರ್ಹತೆ ಗುತ್ತಿಗೆಯನ್ನು ಕರೆಯಲಾಗಿದ್ದು ಪೂರ್ವ ಅರ್ಹತೆ ಗುತ್ತಿಗೆ ಇಟ್ಟ ಅಂದಾಜು ಮೊತ್ತವು ರೂ. 209,01.21 ಲಕ್ಷಗಳು ಇದ್ದು, ಪೂರ್ವ ಅರ್ಹತೆ ಟೆಂಡರನ್ನು ಸ್ವೀಕರಿಸುವ ಕೊನೆಯ ದಿನಾಂಕ 29-07-2026 ರ ಸಂಜೆ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 30-07-2026 ರ ಸಂಜೆ 4.45 ಘಂಟೆ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ:25-06-2026 ರ ನಂತರ ಪಡೆಯಬಹುದು. (ಒಂದು ವೇಳೆ ಬಿಡ್ ಸ್ವೀಕೃತವಾಗದಿದ್ದಲ್ಲಿ 7 ದಿನಗಳ ಸ್ವಯಂ ಚಾಲಿತ ಸಕ್ರಿಯಗೊಳಿಸಲಾಗಿದೆ).

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-488/KSMCA/2026-27

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ
ಮೈಸೂರು ತಾಲ್ಲೂಕು ಮತ್ತು ಜಿಲ್ಲೆ-570026, ದೂ:0821-2331099 Web:www.bogaditown.mrc.gov.in
ಇ-ಮೇಲ್: itstaff_ulb_bogadi@yahoo.com

ಸಂ:ಪ.ಪಂ.ಬೋಗಾದಿ/ಇ.ಶಾ/ಟೆಂಡರ್.ಸಿ.ಆರ್.04/2026-27 ದಿನಾಂಕ:25.06.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾಮಾನ್ಯ ಅನುದಾನದಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರಂತೆ ಅರ್ಹ ಟೆಂಡರ್‌ದಾರರುಗಳಿಂದ **https://kppp.karnataka.gov.in** ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ.

1. ಕ್ರಮ ಸಂಖ್ಯೆ:05ರ ಕಾಮಗಾರಿಯ ಪೂರ್ವಭಾವಿ ಸಭೆ **ದಿನಾಂಕ:06.07.2026** ಅಪರಾಹ್ನ 3.00 ಗಂಟೆಗೆ
2. ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ: 10.07.2026** ಸಂಜೆ 5.30 ಗಂಟೆಯವರೆಗೆ
3. ಟೆಂಡರ್ ತೆರೆಯುವ **ದಿನಾಂಕ:13.07.2026**ರ ಬೆಳಗ್ಗೆ 11.30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರಸಂ	ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ
01	DMA/2026-27/OW/WORK INDENT60163	15.00	37500
02	DMA/2026-27/OW/WORK_INDENT59748	13.85	34625
03	DMA/2026-27/OW/WORK_INDENT59749	13.35	33375
04	DMA/2026-27/WS/WORK_INDENT59750	5.00	12500
05	DMA/2025-26/OW/WORK_INDENT52469/CALL-2(ST)	100.00	84750

ಸೂಚನೆ: 1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/- ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಬೋಗಾದಿ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಕಛೇರಿ

ಇ-ಟೆಂಡರ ಅಧಿಸೂಚನೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP) ಮುಖಾಂತರ ಮಾತ್ರ)
ಜಾಹಿರಾತು ಸಂಖ್ಯೆ : ದಿನಾಂಕ : 25/06/2026.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000ರ ಪ್ರಕಾರ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ನಿಯಮಗಳನ್ವಯ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಇಚ್ಛೆಯುಳ್ಳ ಸರ್ಕಾರಿ ಇಲಾಖೆಯಲ್ಲಿ (KPWD/ಇತರೆ) ನೋಂದಾಯಿತರಾದ ಅರ್ಹ ಗುತ್ತಿಗೆದಾರರು/ಸಂಸ್ಥೆಯವರಿಂದ Work ಟೆಂಡರ್‌ನ್ನು ಏಕ-ವಿದ್ಯುನ್ಮಾನ ಮತ್ತು ದ್ವಿ-ವಿದ್ಯುನ್ಮಾನ ಟೆಂಡರ್ ಪದ್ಧತಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP) ಮುಖಾಂತರ ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್‌ನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್‌ನ ಸಂಪೂರ್ಣ ವಿವರಗಳಿಗಾಗಿ/ದಾಖಲೆಗಳಿಗಾಗಿ ಅಂತರ್‌ಜಾಲ ವಿಳಾಸ **http://www.kppp.karnataka.gov.in** ದಲ್ಲಿ ದಿನಾಂಕ: **29.06.2026** ರಿಂದ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ವಿಭಾಗ ಕಚೇರಿಗೆ ಕಚೇರಿ ವೇಳೆಯಲ್ಲಿ ಭೇಟಿ ನೀಡಿ ಪಡೆಯಬಹುದು.

Sl. No	Indent No.	Amount put to Tender (Rs. in Lakhs)	EMD in (RS.)	Work Execution period	Category
1	DMA/2026-27/BD/WORK_INDENT60332	48.50	97000	05	Others
2	DMA/2026-27/BD/WORK_INDENT60334	49.95	99900	05	Others
3	DMA/2026-27/OW/WORK_INDENT57807/CALL-2	21.56	43120	03	Others
4	DMA/2026-27/OW/WORK_INDENT57838/CALL-2	138.35	207525	05	Others
5	DMA/2026-27/IND6272	6.03	15075	03	Others

ಕ್ರಮ ಸಂಖ್ಯೆ: 01 ರಿಂದ 02 ರವರೆಗೆ ಕಾಮಗಾರಿಗಳ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **06.07.2026 ರಂದು 16.30.00 ಘಂಟೆಯವರೆಗೆ,** ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: **07.07.2026 ರಂದು ಅಪರಾಹ್ನ 16.35 ಘಂಟೆಯ ನಂತರ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **08.07.2026** ರಂದು ತೆರೆಯಲಾಗುವುದು. ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02.07.2026 ರಂದು 16.00.00 ಘಂಟೆಯವರೆಗೆ,** ಸಂಭಾವ್ಯ ಬಿಡ್‌ದಾರರ ಪೂರ್ವಭಾವಿ ಸಭೆಯನ್ನು ದಿನಾಂಕ: **03.07.2026 ರಂದು 11.00.00 ಘಂಟೆಗೆ,** ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹು.ಧಾ.ಮ.ಪಾ ಸರ್.ಸಿದ್ದಪ್ಪ ಕಂಬಳಿ ರಸ್ತೆ, ಹುಬ್ಬಳ್ಳಿ ಇವರ ಕಚೇರಿಯಲ್ಲಿ ನಡೆಸಲಾಗುವುದು.

ಕ್ರಮ ಸಂಖ್ಯೆ: 03 ರಿಂದ 05 ರವರೆಗೆ ಕಾಮಗಾರಿಗಳ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **15.07.2026 ರಂದು 16.30.00 ಘಂಟೆಯವರೆಗೆ,** ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: **16.07.2026 ರಂದು ಅಪರಾಹ್ನ 16.35.00 ಘಂಟೆಯ ನಂತರ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **17.07.2026** ರಂದು ತೆರೆಯಲಾಗುವುದು. ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **06.07.2026 ರಂದು 16.00 ಘಂಟೆಯವರೆಗೆ,** ಸಂಭಾವ್ಯ ಬಿಡ್‌ದಾರರ ಪೂರ್ವಭಾವಿ ಸಭೆಯನ್ನು ದಿನಾಂಕ: **08.07.2026 ರಂದು 11.00.00 ಘಂಟೆಗೆ,** ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹು.ಧಾ.ಮ.ಪಾ ಸರ್.ಸಿದ್ದಪ್ಪ ಕಂಬಳಿ ರಸ್ತೆ, ಹುಬ್ಬಳ್ಳಿ ಇವರ ಕಚೇರಿಯಲ್ಲಿ ನಡೆಸಲಾಗುವುದು.

ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ),
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ
ವಾಸಾಸಂಇ/ಹುಧಾ/ಆರ್.ಓ/363/2026-27

ಕಿರುಸುದ್ದಿ

3 ಸಾವಿರಕ್ಕೂ ಅಧಿಕ ಸಲಹೆಗಾರರ ನೇಮಕ

• ಬೆಂಗಳೂರು: ಮುಖಾಮುಖಿ ವಿಮಾ ಬೆಂಬಲವನ್ನು ಬಯಸುವ ಗ್ರಾಹಕರ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಭಾರತದ ಪ್ರಮುಖ ಆನ್‌ಲೈನ್ ವಿಮಾ ಬ್ರೋಕರೇಜ್‌ಗಳಲ್ಲಿ ಒಂದಾಗಿರುವ ಪಾಲಿಸಿಬಜಾರ್, ತನ್ನ ಆಫ್‌ಲೈನ್ ವ್ಯವಹಾರಕ್ಕಾಗಿ 2026ರ ಹಣಕಾಸು ವರ್ಷದಲ್ಲಿ 3,000ಕ್ಕೂ ಹೆಚ್ಚು ವಿಮಾ ಸಲಹೆಗಾರರನ್ನು ನೇಮಿಸಿಕೊಳ್ಳಲು ನಿರ್ಧರಿಸಿದೆ. ನಮ್ಮ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ನಾವು 3000ಕ್ಕೂ ಹೆಚ್ಚು ಮಾರಾಟ ಸಲಹೆಗಾರರನ್ನು ನೇಮಕ ಮಾಡಲು ಬಯಸುತ್ತೇವೆ ಎಂದು ಪಾಲಿಸಿಬಜಾರ್‌ನ ಆರೋಗ್ಯ ವಿಮೆಯ ವ್ಯವಹಾರ ಮುಖ್ಯಸ್ಥ ಸಿದ್ಧಾರ್ಥ್ ಸಿಂಘಾಲ್ ಹೇಳಿದ್ದಾರೆ. ಪಾಲಿಸಿಬಜಾರ್ ಕುಟುಂಬಗಳಿಗೆ ತಮ್ಮ ಆರ್ಥಿಕ ಭವಿಷ್ಯವನ್ನು ಭದ್ರಪಡಿಸಲು ಸಹಾಯ ಮಾಡುವ ದೊಡ್ಡ ಗುರಿಗೆ ಬದ್ಧವಾಗಿದೆ. ಗ್ರಾಹಕರಿಗೆ ಆನ್‌ಲೈನ್ ಮತ್ತು ಭೌತಿಕ ಕಚೇರಿ ಸಹಾಯದ ಸಂಯೋಜನೆಯನ್ನು ಒದಗಿಸುವುದು 2047ರ ವೇಳೆಗೆ ಎಲ್ಲರಿಗೂ ವಿಮೆ ಎಂಬ ದೊಡ್ಡ ಗುರಿಗೆ ಇದು ಅನುಗುಣವಾಗಿದೆ ಎಂದರು.

ನಿತೇಶ್ ಕುಮಾರ್ ನೇಮಕ

• ವಿಜಯಪುರ: ವಿಜಯಪುರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಪಟ್ಟಣದ ಎ.ನಿತೇಶ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ಸಚಿವ ಕೆ.ಎಚ್. ಮುನಿಯಪ್ಪ, ಕೆ.ಪಿ.ಸಿ.ಸಿ ಕಾರ್ಯದರ್ಶಿ ವಿ.ಮಂಜುನಾಥ್, ದೇವನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಸಿ. ಮಂಜುನಾಥ್, ವಿಜಯಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಿನ್ನೂರು ವೆಂಕಟೇಶ್ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್. ಗೌಡ ಅವರ ಶಿಫಾರಸ್ಸಿನ ಮೇರೆಗೆ ಈ ನೇಮಕಾತಿ ಆದೇಶ ಹೊರಡಿಸಲಾಗಿದೆ. ನೇಮಕಾತಿ ಬಳಿಕ ಮಾತನಾಡಿದ ಎ.ನಿತೇಶ್ ಕುಮಾರ್, ಕಾಂಗ್ರೆಸ್ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಆರಂಭಿಸಿ ವಿವಿಧ ಹಂತಗಳಲ್ಲಿ ಪಕ್ಷದ ತತ್ವ-ಸಿದ್ಧಾಂತಗಳ ಆಧಾರದ ಮೇಲೆ ಸೇವೆ ಸಲ್ಲಿಸುವುದಾಗಿ ತಿಳಿಸಿದರು. ಪಕ್ಷದ ಸಂಘಟನೆಯನ್ನು ಬೂತ್ ಮಟ್ಟದಿಂದ ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುವುದು. ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಅಗತ್ಯವಾದ ಕಾರ್ಯತಂತ್ರ ರೂಪಿಸಿ ಪಕ್ಷವನ್ನು ಸಜ್ಜುಗೊಳಿಸಲು ಶ್ರಮಿಸಲಾಗುವುದು ಎಂದು ಹೇಳಿದರು. ಪಕ್ಷದ ಹಿರಿಯ ಮುಖಂಡರು ಹಾಗೂ ಕಾರ್ಯಕರ್ತರು ನೂತನ ಕಾರ್ಯದರ್ಶಿಯಾಗಿ ನೇಮಕವಾದ ಎ.ನಿತೇಶ್ ಕುಮಾರ್ ಅವರನ್ನು ಸ್ವಾಗತಿಸಿ, ಅಭಿನಂದನೆ ಸಲ್ಲಿಸಿದರು.

ಆಧ್ಯಾತ್ಮಿಕ ಸೇವೆಯಿಂದ ಮನಸ್ಸಿಗೆ ನೆಮ್ಮದಿ

• ದಾವಣಗೆರೆ: ಶಿವನ ಅನುಗ್ರಹ ಪಡೆಯಲು, ಆಧ್ಯಾತ್ಮಿಕ ಜ್ಞಾನವನ್ನು ವೃದ್ಧಿಸಿಕೊಳ್ಳಲು ಹಾಗೂ ಜೀವನದ ಕಷ್ಟಗಳನ್ನು ದೂರ ಮಾಡಿಕೊಳ್ಳಲು ಈ ವಿಶೇಷ ಪೂಜೆಯನ್ನು ಆಚರಿಸಲಾಗುತ್ತದೆ ಎಂದು ಅರ್ಚಕ ಎಸ್.ವಿ. ನಂದೀಶ್ ಕುಮಾರ್ ಹೇಳಿದರು. ಹೊಸಕೋಟೆ ತಾಲೂಕಿನ ನಂದಗುಡಿ ಗ್ರಾಮದ ಶ್ರೀ ಮರಿಸ್ವಾಮಿ ದೇವಾಲಯದಲ್ಲಿ ಲೋಕಕಲ್ಯಾಣಾರ್ಥವಾಗಿ ಆಯೋಜಿಸಿದ್ದ ಅಧಿಕ ಮಾಸದ ಅಮಾವಾಸ್ಯೆ ಅಂಗವಾಗಿ ನಡೆದ ಶಿವಸಪ್ತಾಹ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶಿವನು ಹಿಂದೂ ಧರ್ಮದಲ್ಲಿ ಲಯಕಾರಕ ಹಾಗೂ ಪರಮಾತ್ಮನ ಸ್ವರೂಪ ಎಂದು ಪರಿಗಣಿಸಲಾಗುತ್ತದೆ. "ಸಪ್ತ" ಎಂದರೆ ಏಳು ಎಂಬ ಅರ್ಥ. ಆದ್ದರಿಂದ ಶಿವಸಪ್ತಾಹವು ಏಳು ದಿನಗಳ ಕಾಲ ನಿರಂತರವಾಗಿ ನಡೆಯುವ ಧಾರ್ಮಿಕ ಆಚರಣೆಯಾಗಿದೆ ಎಂದು ವಿವರಿಸಿದರು. ಈ ಪೂಜೆಯಲ್ಲಿ ಶಿವಪುರಾಣ ಪಠಣ, ನಿರಂತರ ಶಿವನಾಮ ಜಪ, ರುದ್ರಾಭಿಷೇಕ, ಪಂಚಾಮೃತಾಭಿಷೇಕ ಹಾಗೂ "ಓಂ ನಮಃ ಶಿವಾಯ" ಮತ್ತು ಮಹಾಮೃತ್ಯುಂಜಯ ಮಂತ್ರಗಳ ಪಠಣ ಪ್ರಮುಖವಾಗಿರುತ್ತವೆ ಎಂದರು.

ಮಣ್ಣಿನಿಂದ ಎಲ್ಲಾ ಪೋಷಕಾಂಶಗಳು ಬೆಳೆಗಳಿಗೆ ಸಿಗುವುದಿಲ್ಲ | ಮಣ್ಣು ಪರೀಕ್ಷೆ ಕಡ್ಡಾಯ

ರಸಗೊಬ್ಬರ ಬಳಕೆಯಿಂದ ಅಧಿಕ ಇಳುವರಿ

• ದಾವಣಗೆರೆ: ರೈತರು ಕೇವಲ ಯೂರಿಯಾ ಮತ್ತು ಡಿ.ಎ.ಪಿ. ರಸಗೊಬ್ಬರಗಳನ್ನೇ ಅವಲಂಬಿಸದೆ, ಬೆಳೆಗಳ ಸಮತೋಲನ ಪೋಷಣೆಗೆ ಸಂಯುಕ್ತ ರಸಗೊಬ್ಬರಗಳನ್ನು ಬಳಸಬೇಕು ಎಂದು ಹೊಸಕೋಟೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಂ. ರೇಣುಕಾ ಪ್ರಸಾದ್ ಸಲಹೆ ನೀಡಿದರು.

ಹೊಸಕೋಟೆ ತಾಲೂಕು ನಂದಗುಡಿ ಗ್ರಾಮದ ರೈತ ಸಂಪರ್ಕ ಕೇಂದ್ರ ಆವರಣದಲ್ಲಿ ಆಯೋಜಿಸಿದ್ದ ಬೀಜ್ ಬಚಾವೋ ಅಭಿಯಾನ, ಸುರಕ್ಷಿತ ಕೀಟನಾಶಕ ಬಳಕೆ ಮತ್ತು ಬೀಜೋಪಚಾರ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,

ರೈತರು ಸಾಮಾನ್ಯವಾಗಿ ಯೂರಿಯಾ ಹಾಗೂ ಡಿ.ಎ.ಪಿ. ರಸಗೊಬ್ಬರಗಳನ್ನು ರೂಢಿಗತವಾಗಿ ಬಳಸುತ್ತಿದ್ದಾರೆ. ಯೂರಿಯಾದಲ್ಲಿ ಮುಖ್ಯವಾಗಿ ಸಾರಜನಕ (ನೈಟ್ರೋಜನ್) ಮತ್ತು ಡಿ.ಎ.ಪಿ.ಯಲ್ಲಿ ಸಾರಜನಕ ಹಾಗೂ ರಂಜಕ (ಫಾಸ್ಪರಸ್) ಅಂಶಗಳಷ್ಟೇ ಲಭ್ಯವಿರುತ್ತವೆ. ಆದರೆ, ಬೆಳೆಗಳ ಆರೋಗ್ಯಕರ ಬೆಳವಣಿಗೆ, ರೋಗ ನಿರೋಧಕ ಶಕ್ತಿ ಹೆಚ್ಚಳ, ಧಾನ್ಯ ಅಥವಾ ಉತ್ಪನ್ನದ ತೂಕ ಮತ್ತು ಗುಣಮಟ್ಟ ವೃದ್ಧಿಗೆ ಅಗತ್ಯವಾದ ಪೊಟ್ಯಾಷ್ ಸೇರಿದಂತೆ ಇತರ ಪೋಷಕಾಂಶಗಳು ಇವುಗಳಲ್ಲಿ ಸಮರ್ಪಕವಾಗಿ ಇರುವುದಿಲ್ಲ ಎಂದು ತಿಳಿಸಿದರು.

ಹೀಗಾಗಿ, ಬೆಳೆಗಳಿಗೆ ಅಗತ್ಯವಿರುವ ಎಲ್ಲಾ ಪ್ರಮುಖ ಪೋಷಕಾಂಶಗಳು ದೊರೆಯುವಂತೆ ಮಣ್ಣಿನ ಪರೀಕ್ಷೆ ವರದಿಯ ಆಧಾರದ ಮೇಲೆ ಸಂಯುಕ್ತ ರಸಗೊಬ್ಬರಗಳನ್ನು ಬಳಸುವುದು ಸೂಕ್ತ. ಸಮತೋಲನ ಪೋಷಕಾಂಶ ನಿರ್ವಹಣೆಯಿಂದ ಉತ್ತಮ ಇಳುವರಿ, ಉತ್ತಮ ಗುಣಮಟ್ಟದ ಉತ್ಪನ್ನ ಹಾಗೂ ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆಂದು ಅವರು ಹೇಳಿದರು.

ಸಸ್ಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ 17 ಪೋಷಕಾಂಶಗಳ ಅಗತ್ಯವಿದೆ. ಇವುಗಳಲ್ಲಿ ಇಂಗಾಲ, ಜಲಜನಕ ಹಾಗೂ ಆಮ್ಲಜನಕ ಸ್ವಾಭಾವಿಕವಾಗಿ ದೊರೆಯಲಿದ್ದು, ಗಾಳಿ ಮತ್ತು ನೀರಿನ ಮೂಲಕ ಸಸ್ಯಗಳಿಗೆ ಲಭ್ಯವಾಗುತ್ತವೆ. ಉಳಿದ 14 ಪೋಷಕಾಂಶಗಳಲ್ಲಿ ಸಾರಜನಕ, ರಂಜಕ, ಪೊಟ್ಯಾಷ್ ಹೆಚ್ಚಿನ ಪ್ರಮಾಣದಲ್ಲಿ ಬೇಕಿದೆ. ಇವುಗಳನ್ನು ಪ್ರಧಾನ ಪೋಷಕಾಂಶಗಳೆಂದು ಕ್ಯಾಲ್ಸಿಯಂ, ಮ್ಯಾಗ್ನೆಷಿಯಂ, ಗಂಧಕ, ಕಬ್ಬಿಣ, ಜಿಂಕ್, ಬೋರಾನ್, ತಾಮ್ರ, ಮ್ಯಾಂಗನೀಸ್, ಮಾಲಿಬ್ಡಿನಂ, ಕ್ಲೋರಿನ್ ಮತ್ತು ನಿಕಲ್ ಕಡಿಮೆ ಪ್ರಮಾಣದಲ್ಲಿ ಬೇಕಿದೆ. ಇವುಗಳನ್ನು ಲಘು ಪೋಷಕಾಂಶಗಳೆಂದು ವಿಂಗಡಿಸಲಾಗಿದೆ. ಇವುಗಳಲ್ಲಿ ಯಾವುದೇ ಒಂದು ಪೋಷಕಾಂಶದ ಕೊರತೆ ಯಾದರೂ ಸಸ್ಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಯ ಮೇಲೆ ಪರಿಣಾಮ ಬೀರಿ ಇಳುವರಿ ಕುಂಠಿತವಾಗುತ್ತದೆ ಎಂದರು.



ರಾಷ್ಟ್ರೀಯ ಮಣ್ಣಿನ ಸಮೀಕ್ಷೆ ಭೂ ಬಳಕೆ ಯೋಜನೆಯ ವಿಜ್ಞಾನಿ ಯಾದ ಕಲ್ಪ ಸೆಲ್ವಿ ರವರು ಮಾತನಾಡಿ, ಫಲವತ್ತಾದ ಮಣ್ಣು ಸಸ್ಯಗಳಿಗೆ ಅಗತ್ಯವಿರುವ ಪೋಷಕಾಂಶಗಳು, ನೀರು ಮತ್ತು ಗಾಳಿಯನ್ನು ಒದಗಿಸುತ್ತದೆ. ಇದು ಬೆಳೆಗಳ ಬೇರುಗಳನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳಲು ಆಧಾರವಾಗುವುದಲ್ಲದೆ, ಉತ್ತಮ ಇಳುವರಿಗೆ ಮತ್ತು ಕೃಷಿಯ ಸುಸ್ಥಿರತೆಗೆ ಅಡಿಪಾಯವಾಗಿದೆ. ರಾಸಾಯನಿಕ ಗೊಬ್ಬರದ ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಳಾಗುತ್ತದೆ. ಆದಕ್ಕಾಗಿ ನೈಸರ್ಗಿಕ, ಸಾವಯವ, ಸುಸ್ಥಿರ ಕೃಷಿಗೆ ಒತ್ತು ನೀಡಬೇಕು ಎಂದರು.

ಇದೇ ವೇಳೆ ಕ್ರಿಯಾಜೀನ್ ಸಂಸ್ಥೆಯ ವಿಜಯ ಕುಮಾರ್. ನಂದಗುಡಿ ರೈತ ಸಂಪರ್ಕ ಕೇಂದ್ರದ ನೋಡಲ್ ಅಧಿಕಾರಿಯಾದ ಮೋಹನ್ ಕುಮಾರ್. ಕೃಷಿ ಸಹಾಯಕ ತಾಂತ್ರಿಕ ವ್ಯವಸ್ಥಾಪಕರಾದ ಅನಿತಾ ಸಿ.ಆರ್‌ಪಿ ಗಳಾದ. ಪ್ರಶಾಂತ್ ನರಸಿಂಹಯ್ಯ, ಸವಿಯ ರಾದ. ಸುಷ್ಮಾ .ಮೋನಿಕಾ. ಮತ್ತು ನಂದಗುಡಿ ಹೋಬಳಿಯ ನೂರಾರು ರೈತರು ಭಾಗವಹಿಸಿದ್ದರು.

ಉತ್ತಮ ಬಿತ್ತನೆ ಬೀಜ ಬಳಸಿ

ಕೃಷಿಯಲ್ಲಿ ಆಧುನೀಕರಣವು ಸಾಂಪ್ರದಾಯಿಕ ಬೇಸಾಯ ಪದ್ಧತಿಗಳನ್ನು ಸುಧಾರಿತ, ಯಾಂತ್ರೀಕೃತ ಮತ್ತು ವೈಜ್ಞಾನಿಕ ವಿಧಾನಗಳಾಗಿ ಪರಿವರ್ತಿಸುವ ಪ್ರಕ್ರಿಯೆಯಾಗಿದೆ. ಇದು ಉತ್ಪಾದಕತೆಯನ್ನು ಹೆಚ್ಚಿಸಲು, ಸಂಪನ್ಮೂಲಗಳ (ನೀರು, ಮಣ್ಣು) ಸಮರ್ಪಕ ಬಳಕೆಗೆ ಮತ್ತು ರೈತರ ಆದಾಯವನ್ನು ವೃದ್ಧಿಸಲು ಅತ್ಯಗತ್ಯವಾಗಿದೆ. ಮಣ್ಣನ್ನು ಎರಡು ಮೂರು ವರ್ಷಕ್ಕೆ ಒಮ್ಮೆಯಾದರೂ ಕಡ್ಡಾಯವಾಗಿ ಪರೀಕ್ಷಿಸಿ ಮತ್ತು ಹಳೆ ಬೀಜಗಳನ್ನು ಬಿಟ್ಟು ಹೆಚ್ಚು ಇಳುವರಿ ನೀಡುವ ಹೊಸ ತಳಿಗಳ ಬೀಜವನ್ನು ಉಪಯೋಗಿಸಿ ಎಂದು ಕೃಷಿ ಇಲಾಖೆ ವಿಜ್ಞಾನಿಗಳಾದ ಬಾಲಾಜಿ ನಾಯಕ್ ತಿಳಿಸಿದರು.

ಹಾದ್ರಿಪುರ ಗ್ರಾಮದಲ್ಲಿ ವಿಶೇಷ ಸ್ವಚ್ಛತಾ ಅಭಿಯಾನ

• ದೊಡ್ಡಬಳ್ಳಾಪುರ: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ನಿರ್ದೇಶನದಂತೆ ಹಾದ್ರಿಪುರ ಗ್ರಾಮ ಪಂಚಾಯಿತಿಯಲ್ಲಿ ವಿಶೇಷ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಂದಿನಿ ಎಸ್., ಸಾರ್ವಜನಿಕ ಸ್ಥಳಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಎಸೆಯುವುದು ಹಾಗೂ ಕಸ ಸುಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ತಿಳಿಸಿದರು.

ಪರಿಸರಕ್ಕೆ ಹಾನಿಕಾರಕವಾಗಿರುವ ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳ ಉತ್ಪಾದನೆ, ಸಂಗ್ರಹಣೆ, ಮಾರಾಟ ಮತ್ತು ಬಳಕೆಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲಾಗಿದೆ. ರಸ್ತೆ ಬದಿ, ಕೆರೆಗಳ ಅಂಗಳ ಅಥವಾ ಯಾವುದೇ ಖಾಲಿ ಜಾಗಗಳಲ್ಲಿ ಪ್ಲಾಸ್ಟಿಕ್ ಸೇರಿದಂತೆ ಯಾವುದೇ ತ್ಯಾಜ್ಯವನ್ನು ಬಿಸಾಡಬಾರದು. ಮರುಬಳಕೆ ಮಾಡಲು ಸಾಧ್ಯವಿಲ್ಲದ ಒಣ ಕಸ ಹಾಗೂ ತೆಳುವಾದ ಪ್ಲಾಸ್ಟಿಕ್ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕೆಂದು ಅವರು ಮನವಿ ಮಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ತ್ಯಾಜ್ಯದೊಂದಿಗೆ ಪ್ಲಾಸ್ಟಿಕ್ ತ್ಯಾಜ್ಯವನ್ನು ಬೆರೆಸುವ ಪ್ರವೃತ್ತಿ ಹೆಚ್ಚಾಗಿದ್ದು, ಇದರಿಂದ ಪರಿಸರ, ಮಣ್ಣಿನ ಫಲವತ್ತತೆ ಹಾಗೂ ಸಾರ್ವಜನಿಕ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಉಂಟಾಗುತ್ತಿದೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಗ್ರಾಮಗಳನ್ನು ಕಸ ಮುಕ್ತ ಹಾಗೂ ಪ್ಲಾಸ್ಟಿಕ್ ಮುಕ್ತವಾಗಿಸಲು ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ತ್ಯಾಜ್ಯ ವನ್ನು ಮೂಲದಲ್ಲೇ ವಿಂಗಡಿಸಿ ಗ್ರಾಮ ಪಂಚಾಯಿತಿಯೊಂದಿಗೆ ಸಹಕರಿಸುವ ಮೂಲಕ ಸ್ವಚ್ಛ ಮತ್ತು ಆರೋಗ್ಯಕರ ಪರಿಸರ ನಿರ್ಮಾಣಕ್ಕೆ ಮುಂದಾಗಬೇಕೆಂದು ಅವರು ಕರೆ ನೀಡಿದರು.



ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಣೆ

• ದೇವನಹಳ್ಳಿ: ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಐದು ಹೋಬಳಿಗಳ ಏಳು ಶಕ್ತಿಕೇಂದ್ರಗಳ ಬಿಜೆಪಿ ಹಿಂದುಳಿದ ವರ್ಗ ಮೋರ್ಚಾ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರ ವಿತರಣೆ ಕಾರ್ಯಕ್ರಮ ನಡೆಯಿತು.

ತಾಲೂಕು ಹಿಂದುಳಿದ ವರ್ಗ ಮೋರ್ಚಾ ಅಧ್ಯಕ್ಷ ಬಿ.ಕೆ. ನಾರಾಯಣಸ್ವಾಮಿ ಮಾತನಾಡಿ, ಕೇಂದ್ರ ಸರ್ಕಾರದ ಜನಪರ ಯೋಜನೆಗಳನ್ನು ಮನೆಮನೆಗೆ ತಲುಪಿಸುವ ಜವಾಬ್ದಾರಿ ಪದಾಧಿಕಾರಿಗಳ ಮೇಲಿದೆ ಎಂದು ಹೇಳಿದರು. ಹೊಸದಾಗಿ ನೇಮಕಗೊಂಡಿರುವ ಪದಾಧಿಕಾರಿಗಳು ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಜೊತೆಗೆ ಸರ್ಕಾರದ ಸಾಧನೆಗಳನ್ನು ಸಾರ್ವಜನಿಕರಿಗೆ ತಿಳಿಸಬೇಕು ಎಂದು ಕರೆ ನೀಡಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಮಕೃಷ್ಣಪ್ಪ ಮಾತನಾಡಿ, ಪಕ್ಷದ ಸಂಘಟನೆಗೆ ಹೆಚ್ಚಿನ ಒತ್ತು ನೀಡಿ ಹೊಸ ಸದಸ್ಯರನ್ನು ಸೇರ್ಪಡೆಗೊಳಿಸಬೇಕು. ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯದಲ್ಲೂ ಸಕ್ರಿಯವಾಗಿ ಪಾಲ್ಗೊಂಡು ಅರ್ಹ ಮತದಾರರ ಹೆಸರುಗಳು ಪಟ್ಟಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ದೇವನಹಳ್ಳಿ ಮಂಡಲ ಅಧ್ಯಕ್ಷ ಎಸ್.ಎಲ್. ಅಂಬರೀಶ್ ಗೌಡ ಮಾತನಾಡಿ, ಪಕ್ಷದ ತತ್ವ-ಸಿದ್ಧಾಂತಗಳನ್ನು ಜನರಿಗೆ ತಲುಪಿಸಲು ಪ್ರತಿಯೊಬ್ಬ ಪದಾಧಿಕಾರಿಯೂ ಶ್ರಮಿಸಬೇಕು. ಸಂಘಟನೆಯ ವಿಸ್ತರಣೆಯೊಂದಿಗೆ ಸಾರ್ವಜನಿಕ ಸೇವೆಗೆ ಆದ್ಯತೆ ನೀಡುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಶಕ್ತಿಕೇಂದ್ರಗಳ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಲಾಯಿತು.



ಈ ಸಂದರ್ಭದಲ್ಲಿ ಮಾಜಿ ಶಾಸಕ ಜಿ. ಚಂದ್ರಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗೇಶ, ತಾಲೂಕು ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ಮಂಜುನಾಥ್, ನಾಗೇಶ್, ಅರುಣ್, ರಾಜಪ್ಪ, ತಾಲೂಕು ಉಪಾಧ್ಯಕ್ಷ ತಮ್ಮಯ್ಯ, ಶಕ್ತಿಕೇಂದ್ರ ಅಧ್ಯಕ್ಷ ರವಿಕುಮಾರ್ ಸೇರಿದಂತೆ ಪಕ್ಷದ ವಿವಿಧ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಕೆ-ಸೆಟ್ ಮತ್ತು ಯುಜಿಸಿ-ನೆಟ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ

ಸಾಧನೆಯ ಹಾದಿ ಸುಲಭದ್ದಲ್ಲ: ಡಿಸಿಪಿ

• ಮೈಸೂರು: ಸಾಧನೆಯ ಹಾದಿ ಸುಲಭದ್ದಲ್ಲ; ಕಷ್ಟಪಟ್ಟು ಶ್ರಮಿಸಿದರೆ ಮಾತ್ರ ಉದ್ಯೋಗ ಪಡೆಯಲು ಸಾಧ್ಯ ಎಂದು ಮೈಸೂರು ನಗರ ಪೊಲೀಸ್ ಉಪ ಆಯುಕ್ತೆ ಡಾ. ಹರ್ಷ ಪ್ರಿಯಂವದ ತಿಳಿಸಿದರು

ಗುರುವಾರ ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಗಂಗಾ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ ಕೆ-ಸೆಟ್ ಮತ್ತು ಯುಜಿಸಿ-ನೆಟ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು,

ಪದವಿ ಮುಗಿಯುವ ಮುನ್ನವೇ ನಾವು ಯಾವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಸ್ಪಷ್ಟತೆ ಇರಬೇಕು. ಮೊದಲ ಬಾರಿ ವಿಫಲರಾದರೂ ಧೃತಿಗೆಡದೆ, ಕ್ರಮಬದ್ಧ ಅಧ್ಯಯನ ಮುಂದುವರಿಸಿದರೆ ಯಶಸ್ಸು ಖಚಿತ ಎಂದು ಹೇಳಿದರು.

ನನ್ನ ತಂದೆ-ತಾಯಿ ಇಬ್ಬರೂ ವೈದ್ಯರಾಗಿದ್ದರಿಂದ ನಾನು ವೈದ್ಯಕೀಯ ಕ್ಷೇತ್ರ ಆರಿಸಿಕೊಳ್ಳಬೇಕೆಂಬ ಆಸೆ ಅವರದಾಗಿತ್ತು. ಆದರೆ, ನನಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಒಲವಿದ್ದದ್ದರಿಂದ ಯುಪಿಎಸ್ಸಿ ಪರೀಕ್ಷೆಗೆ ಪೂರ್ಣ ಸಿದ್ಧತೆ ನಡೆಸಿದೆ. ಸ್ಪರ್ಧಾತ್ಮಕ ಪರೀಕ್ಷೆಗಳು ನಮ್ಮ ಬದುಕನ್ನೇ ಬದಲಿಸುತ್ತವೆ. ಇವುಗಳನ್ನು ಎದುರಿಸುವ ವಿದ್ಯಾರ್ಥಿಗಳು ನಿಗದಿತ ವಿಷಯಗಳ ಜೊತೆಗೆ ನಿಯಮಿತವಾಗಿ ದಿನಪತ್ರಿಕೆಗಳನ್ನು ಓದಬೇಕು. ಪ್ರಸ್ತುತ ಮಾರುಕಟ್ಟೆಯಲ್ಲಿ ಉತ್ತಮ ಪುಸ್ತಕಗಳು ಲಭ್ಯವಿದ್ದು, ಅವುಗಳನ್ನು ಓದಿ ಮನನ ಮಾಡಿಕೊಳ್ಳಬೇಕು ಎಂದು ತಮ್ಮ ಯಶಸ್ಸಿನ ಹಾದಿಯನ್ನು ನೆನಪಿಸಿಕೊಂಡರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗದೆ, ಜ್ಞಾನದ ಹರವನ್ನು ವಿಸ್ತರಿಸಿಕೊಳ್ಳಬೇಕು. ವಿದ್ಯಾರ್ಥಿಗಳು ದೈನಂದಿನ ಪಠ್ಯಗಳ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಕಡ್ಡಾಯವಾಗಿ ಅಧ್ಯಯನ ಮಾಡಬೇಕು ಎಂದು ವಿದ್ಯಾರ್ಥಿಗಳಲ್ಲಿ ಧೈರ್ಯ ತುಂಬಿದರು.



> ಪಠ್ಯದ ಜೊತೆಗೆ ಜ್ಞಾನವ ಗಳಿಸಿ, ಸೋಲಿಗೆ ಹೆದರದೆ ಛಲವನು ಬೆಳೆಸಿ, ಕ್ರಮಬದ್ಧ ಅಧ್ಯಯನ ನಿರಂತರವಿರಲಿ ಹಾಗೂ ಯಶಸ್ಸಿನ ಸಾಧನೆಗೆ ಪಠ್ಯೇತರ ಚಟುವಟಿಕೆ ಅಗತ್ಯವಾಗಿದ್ದು, ಶ್ರಮದ ಹಾದಿಯಲಿ ವಿದ್ಯಾರ್ಥಿಗಳಿಗೆ ಯಶಸ್ಸು ಸಿಗಲಿದೆ.
> ■ ಡಾ. ಹರ್ಷ ಪ್ರಿಯಂವದ, ಮೈಸೂರು ನಗರ ಪೊಲೀಸ್ ಉಪ ಆಯುಕ್ತೆ

ಕಾರ್ಯಕ್ರಮದಲ್ಲಿ 'ಮುಕ್ತಭಂಡಾರ' ಎಂಬ ಅಧ್ಯಯನ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರ ಜಿಲ್ಲಾಧಿಕಾರಿ ಆರ್. ಪಕ್ಷ್ಯರ್ ಅವರು ಇಂತಹ ತರಬೇತಿ ಶಿಬಿರಗಳು ಎಲ್ಲಾ ವಿಷಯಗಳ ಸಮಗ್ರ ಅಧ್ಯಯನಕ್ಕೆ ಉತ್ತಮ ವೇದಿಕೆಯಾಗಲಿದೆ.ಕಲಾ, ವಾಣಿಜ್ಯ ಮತ್ತು ವಿಜ್ಞಾನ ಹೀಗೆ ಯಾವುದೇ ವಿಭಾಗದ ಹಿನ್ನೆಲೆಯುಳ್ಳವರಿಗೂ ಇದು ಸಹಕಾರಿಯಾಗಿದೆ.ಇದು ಕೇವಲ ಪರೀಕ್ಷೆಗಷ್ಟೇ ಅಲ್ಲದೆ, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಹಾಗೂ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಲು ನೆರವಾಗುತ್ತದೆ.ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವಾಗ ಸಾಮಾಜಿಕ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅರ್ಥೈಸಿಕೊಂಡು ಪರಿಹಾರ ಕಂಡುಕೊಳ್ಳಲು ಇಂತಹ ಅಧ್ಯಯನಗಳು ಪೂರಕವಾಗಿವೆ ಎಂದರು.

ಟೆಂಡರ್ ಮುಗಿದರೂ ಮುಗಿಯದ ಅಕ್ರಮ ಮರಳು ದಂಧೆ

• ಸಕಲೇಶಪುರ: ತಾಲೂಕಿನ ಕಣಗಲು ಮನೆ ಮರಳು ಸಂಗ್ರಹ ಕೇಂದ್ರದಲ್ಲಿ ವ್ಯಾಪಕ ಪ್ರಮಾಣದ ಅಕ್ರಮ ಮರಳು ದೋಚಾಟ ನಡೆಯುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದ್ದು, ಇದರಿಂದ ಗುತ್ತಿಗೆದಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಾಲೂಕಿನ ವಿವಿಧ ಮರಳು ಸಂಗ್ರಹ ಕೇಂದ್ರಗಳ ಹರಾಜು ಎರಡು ತಿಂಗಳ ಹಿಂದೆ ನಡೆದಿದ್ದು, ಕಣಗಲು ಮನೆ ಮರಳು ಕೇಂದ್ರವನ್ನು ರಾಜ್ ಕನ್ಸ್ಟ್ರಕ್ಷನ್ ಸಂಸ್ಥೆಯ ಉತ್ತಮ್ ಅವರು ಸುಮಾರು ₹80 ಲಕ್ಷಕ್ಕೂ ಅಧಿಕ ಮೊತ್ತಕ್ಕೆ ಹರಾಜಿನಲ್ಲಿ ಪಡೆದುಕೊಂಡಿದ್ದರು. ಸರ್ಕಾರದ ನಿಯಮಾನುಸಾರ ಗುತ್ತಿಗೆ ಪಡೆದಿದ್ದರೂ, ಕಾರ್ಯಾರಂಭಕ್ಕೂ ಮುನ್ನವೇ ಕೆಲವರು ಅಕ್ರಮವಾಗಿ ಮರಳು ಸಾಗಾಟ ಮತ್ತು ಮಾರಾಟ ನಡೆಸುವುದಾಗಿ ಆರೋಪಿಸಲಾಗಿದೆ.

ಗುತ್ತಿಗೆದಾರರ ಮಾಹಿತಿ ಪ್ರಕಾರ, ಸುಮಾರು 250ಕ್ಕೂ ಹೆಚ್ಚು ಲಾರಿ ಲೋಡ್‌ಗಳಷ್ಟು ಮರಳನ್ನು ಅಕ್ರಮವಾಗಿ ಎತ್ತಿ ಸಾಗಿಸಿ ಮಾರಾಟಕ್ಕಾಗಿ ಸಂಗ್ರಹಿಸಲಾಗಿದೆ. ಮಳೆಗಾಲದ ಹಿನ್ನೆಲೆಯಲ್ಲಿ ಅಧಿಕೃತ ಮರಳು ಗಣಿಗಾರಿಕೆ ಮತ್ತು ಸಾಗಾಟ ಇನ್ನೂ ಆರಂಭವಾಗದಿದ್ದರೂ ಅಕ್ರಮ ಚಟುವಟಿಕೆಗಳು ಮುಂದುವರಿದಿರುವುದು ಆತಂಕಕ್ಕೆ ಕಾರಣವಾಗಿದೆ.



ಈ ಕುರಿತು ಪ್ರತಿಕ್ರಿಯಿಸಿದ ಗುತ್ತಿಗೆದಾರ ಉತ್ತಮ್, "ಸರ್ಕಾರದ ನಿಯಮಗಳನ್ನು ಪಾಲಿಸಿ ದೊಡ್ಡ ಮೊತ್ತದ ಬಂಡವಾಳ ಹೂಡಿ ಗುತ್ತಿಗೆ ಪಡೆದಿದ್ದೇವೆ. ಆದರೆ ಕೆಲವರು ಕಾನೂನು ಉಲ್ಲಂಘಿಸಿ ಅಕ್ರಮವಾಗಿ ಮರಳು ಸಾಗಾಟ ನಡೆಸುತ್ತಿದ್ದಾರೆ. ಇದರಿಂದ ಸರ್ಕಾರಕ್ಕೂ ಆದಾಯ ನಷ್ಟವಾಗುತ್ತಿದ್ದು, ಗುತ್ತಿಗೆದಾರರಿಗೂ ಭಾರೀ ಆರ್ಥಿಕ ಹೊರೆ ಉಂಟಾಗಿದೆ" ಎಂದು ಆರೋಪಿಸಿದರು. ಇದಲ್ಲದೆ, ಅಕ್ರಮ ಚಟುವಟಿಕೆಗಳಲ್ಲಿ ಕೆಲವು ಪ್ರಭಾವಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ಪಾತ್ರವಿರುವ ಸಾಧ್ಯತೆಯ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದಾರೆ. ಆದರೆ ಈ ಆರೋಪಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಕಣಗಲು ಮನೆ ಮರಳು ಕೇಂದ್ರದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಗುತ್ತಿಗೆದಾರರು ಹಾಗೂ ಸ್ಥಳೀಯರು ಆಗ್ರಹಿಸಿದ್ದಾರೆ. ಸರ್ಕಾರದ ಆದಾಯಕ್ಕೆ ಧಕ್ಕೆ ಉಂಟುಮಾಡುವ ಇಂತಹ ಅಕ್ರಮಗಳನ್ನು ತಡೆಯಲು ಜಿಲ್ಲಾಡಳಿತ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ತಕ್ಷಣ ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಿದ್ದಾರೆ.

ಗ್ರಾಮೀಣ ಭಾಗದ ಬಡಮಕ್ಕಳ ಶೈಕ್ಷಣಿಕ ಸಮಸ್ಯೆಗೆ ಪರಿಹಾರ | ಪ್ರೌಢಶಾಲೆ ಮಂಜೂರು ಮಾಡಿದ ಸರ್ಕಾರ

ಮೇಲುಕೋಟೆ ಸರ್ಕಾರಿ ಪ್ರಾಥಮಿಕ ಬಾಲಕರ ಶಾಲೆ ಮೇಲ್ದರ್ಜೆಗೆ

▸ ಸೌಮ್ಯ ಸಂತಾನಂ

ದಿಗಂತ ವಿಶೇಷ

• ಮೇಲುಕೋಟೆ: ಮೇಲುಕೋಟೆಯಲ್ಲಿ 150 ವರ್ಷ ಪೂರೈಸಿದ ಶತಮಾನದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಗೆ ಶಾಲಾ ಶಿಕ್ಷಣ ಇಲಾಖೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಿ ಆದೇಶ ಹೊರಡಿಸಿದೆ. ಇದರಿಂದ ಮೇಲುಕೋಟೆಯಲ್ಲಿ ಪ್ರೌಢಶಾಲೆ ಶಿಕ್ಷಣ ಇಲ್ಲ ಎಂಬ ಬಹುದಿನಗಳ ಕೊರಗು ಪರಿಹಾರಕಂಡಿದೆ.

ಮೇಲುಕೋಟೆಯಲ್ಲಿದ್ದ 75ವರ್ಷಗಳಿಂದ ಬಡಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದ ಅನುದಾನಿತ ಯದುಶೈಲಪ್ರೌಢಶಾಲೆ ಕಳೆದ ವರ್ಷ ಮುಚ್ಚಿದ್ದ ಕಾರಣ ಈ ಭಾಗದ ಹಳ್ಳಿಗಳ ಮಕ್ಕಳು ಅನಿವಾರ್ಯವಾಗಿ 8ರಿಂದ 10ಕಿಮಿ ದೂರದ ಜಕ್ಕನಹಳ್ಳಿ ಶಾಲೆಗೆ ಶ್ರಮಪಟ್ಟು ಹೋಗಬೇಕಾಗಿತ್ತು. ಇದು ಹೆಣ್ಣುಮಕ್ಕಳಿಗಂತೂ ತುಂಬಾ ಪ್ರಯಾಸವಾಗಿತ್ತು. ಹಳ್ಳಿಗಾಡಿನ ಮಕ್ಕಳ ಶೈಕ್ಷಣಿಕ ಸಮಸ್ಯೆಗೆ ಸ್ಪಂದಿಸಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಇಲಾಖಾಧಿಕಾರಿಗಳಿಗೆ ಸೂಚಿಸಿದ್ದ ಕಾರಣ ಪ್ರಸಕ್ತಸಾಲಿನಲ್ಲೇ ಸರ್ಕಾರಿಪ್ರೌಢಶಾಲೆ ಆರಂಭವಾಗಿ 8ನೇ ತರಗತಿಗೆ 25ಮಕ್ಕಳು ದಾಖಲಾಗಿದ್ದಾರೆ. ಪ್ರೌಢಶಾಲೆಯಲ್ಲಿನ 9ಮತ್ತು 10ನೇತರಗತಿಗಳು ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಆರಂಭವಾಗಲಿದೆ.




ಕೆ.ಆರ್.ಪೇಟೆ ತಾಲೂಕಿನ ಬಲ್ಲೇನಹಳ್ಳಿಯಲ್ಲಿ ಕೊನ್ನ ದಾಖಲಾತಿ ಯಿಂದ 2023ರಲ್ಲಿ ಮುಚ್ಚಿಹೋಗಿದ್ದ ಸರ್ಕಾರಿ ಪ್ರೌಢಶಾಲೆಯನ್ನು ಬಾಲಕರಶಾಲೆಗೆ ಸ್ಥಳಾಂತರಮಾಡಿ ಶಿಕ್ಷಣ ಇಲಾಖೆಯ ಅಪರಮುಖ್ಯಕಾರ್ಯದರ್ಶಿ ರಶ್ಮಿಮಹೇಶ್ ಆದೇಶ ನೀಡಿದ್ದಾರೆ. ಇಲಾಖಾಧಿಕಾರಿಗಳ ಶ್ರಮದಿಂದಾಗಿ ಕೆ.ಆರ್ ಪೇಟೆಯಲ್ಲಿ ಮುಚ್ಚಿಹೋಗಿದ್ದ ಸರ್ಕಾರಿ ಪ್ರೌಢಶಾಲೆಗೆ ಮೇಲು ಕೋಟೆಯಲ್ಲಿ ಮರುಜೀವನೀಡುವ ಜೊತೆಗೆ ಈ ಭಾಗದ ಹಳ್ಳಿಗಳ ಮಕ್ಕಳಿಗೆ ಅದರಲ್ಲೂ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಪೂರಕ ವಾತಾವರಣ ಒದಗಿಸಿಕೊಟ್ಟಂತಾಗಿದೆ

ಎಲ್.ಕೆ.ಜಿ ಯು.ಕೆ.ಜಿ ಮತ್ತು 1-7ನೇತರಗತಿಯವರೆಗಿನ ದ್ವಿಭಾಷಾ ಮಾಧ್ಯಮಗಳನ್ನೊಳಗೊಂಡು 150ವರ್ಷ ಪೂರೈಸಿದ ಶತಮಾನದ ಸರ್ಕಾರಿಶಾಲೆಯಲ್ಲಿ ಹೈಸ್ಕೂಲ್ ಆರಂಭವಾಗುತ್ತಿರುವುದು ಐತಿಹಾಸಿಕ ಸಂಭ್ರಮಕ್ಕೆ ಸಾಕ್ಷಿಯಾಗಿದೆ. ಒಮ್ಮೆ ದಾಖಲಾದ ಮಕ್ಕಳು ಉಚಿತವಾಗಿ ಒಂದೇಕಡೆ ಪೂರ್ವಪ್ರಾಥಮಿಕ-ಮಾಧ್ಯಮಿಕಹಾಗೂಪ್ರೌಢಶಿಕ್ಷಣ ಪಡೆಯಲು ಅನುಕೂಲವಾಗಿದ್ದು ಮುಂದೆ ಕರ್ನಾಟಕಪಬ್ಲಿಕ್ ಶಾಲೆಯಾಗಿ ಪರಿವರ್ತನೆಯಾಗಲೂ ಸಹ ಪೂರಕವಾಗಿದೆ.

ಪಾಂಡವಪುರ ಕ್ಷೇತ್ರಶಿಕ್ಷಣಾಧಿಕಾರಿ ಧರ್ಮಶೆಟ್ಟಿ ಮಂಡ್ಯ ಡಿಡಿಪಿಐ ಲೋಕೇಶ್ ಅವರು ಪ್ರೌಢಶಿಕ್ಷಣ ಇಲಾಖೆ ನಿರ್ದೇಶಕರಿಗೆ ಸಮರ್ಪಕವಾಗಿ ಪ್ರಸ್ತಾವನೆ ಸಲ್ಲಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎನ್.ಚಲುವರಾಯಸ್ವಾಮಿ ಸಹ ಶಿಕ್ಷಣಇಲಾಖೆಯ ಆಯುಕ್ತರಿಗೆ ಸೂಚಿಸಿದ್ದ ಕಾರಣ ಆಯುಕ್ತ ವಿಕಾಸ್‌ಕಿಶೋರ್‌ಸುರಲ್ಕರ್, ಪ್ರೌಢಶಿಕ್ಷಣ ನಿರ್ದೇಶಕ ಕೃಷ್ಣಾಜಿ, ಉಪನಿರ್ದೇಶಕ ಕಾಂತಲರಿಂದ ಪರಿಶೀಲನಾವರದಿ ಪಡೆದು ಪ್ರೌಢಶಾಲೆ ಸ್ಥಳಾಂತರಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿದ ಶಿಕ್ಷಣ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ರಶ್ಮಿಮಹೇಶ್ ಇದೇ ಹುದ್ದೆಗಳಜೊತೆಗೆ ಪ್ರೌಢಶಾಲೆಯನ್ನು ಹುದ್ದೆಗಳಜೊತೆಗೆ ಮೇಲುಕೋಟೆಗೆ ಸ್ಥಳಾಂತರಿಸಿ ಆದೇಶಿಸಿದ್ದಾರೆ.

ಪೋಷಕರಿಂದ ಕೃತಜ್ಞತೆ ಸಲ್ಲಿಕೆ

ಪ್ರೌಢಶಾಲೆಯ ಆರಂಭಕ್ಕೆ ಕಾರಣರಾದ ಶಾಸಕದರ್ಶನ್ ಪುಟ್ಟಣ್ಣಯ್ಯ, ಮತ್ತು ಪ್ರತಿಹಂತದಲ್ಲೂ ಕಡತ ವಿಲೇವಾರಿಗೆ ಶ್ರಮಿಸಿದ ಮುಖ್ಯಶಿಕ್ಷಕ ಸಂತಾನರಾಮನ್, ಸಮಗ್ರ ಶಿಕ್ಷಣಯೋಜನೆಯ ಉಪನಿರ್ದೇಶಕರಾದ ಚಂದ್ರಶೇಖರ್ ಮತ್ತು ಎ.ಪಿ.ಸಿ ಗೋಪಾಲಗೌಡ ಅಂತಿಮಹಂತದಲ್ಲಿ ಸಹಕಾರನೀಡಿದ ಹಿರಿಯವಿದ್ಯಾರ್ಥಿ ಮೇಲುಕೋಟೆಬೆಟ್ಟಸ್ವಾಮಿಗೌಡ, ಅಮ್ಮಶಿವಕರ್‌ಗೆ ಶಾಲಾಭಿವೃದ್ಧಿ ಸಮಿತಿ ಹಾಗೂ ಪೋಷಕರು ಕೃತಜ್ಞತೆ ಅರ್ಪಿಸಿದ್ದಾರೆ



> ಮೇಲುಕೋಟೆಯ ಶತಮಾನದ ಸರ್ಕಾರಿ ಶಾಲೆಯ 5-7ನೇ ತರಗತಿಯ ಆಂಗ್ಲಮಾಧ್ಯಮ ಶಾಲೆ ಮತ್ತು ಪ್ರೌಢಶಾಲೆಯ 8ನೇತರಗತಿಗೆ ದಾಖಲಾಗುವ ಮಕ್ಕಳಿಗೆ ಸಮಾಜಕಲ್ಯಾಣ ಇಲಾಖೆಯ ಹಾಸ್ಟೆಲ್ ಸೌಲಭ್ಯ ಕಲ್ಪಿಸುವ ಜೊತೆಗೆ ಶಿಕ್ಷಣ ಇಲಾಖೆಯ ಆಶಯಕ್ಕೆ ತಕ್ಕಂತೆ ಸ್ಪೋಕನ್ ಇಂಗ್ಲೀಷ್ ಕಲಿಕೆಗೆ ಒತ್ತುನೀಡಲಾಗಿದೆ. ಮೂರು ಮಂದಿಇಂಗ್ಲೀಷ್ ವಿಷಯಕ್ಕೇ ಶಿಕ್ಷಕರಿದ್ದಾರೆ ಪೋಷಕರು ಮಕ್ಕಳನ್ನು ದಾಖಲಿಸಿ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು.
> ■ ಮಹೇಶ್, ಎಸ್‌ಡಿಎಂಸಿ ಅಧ್ಯಕ್ಷ



> ಮೇಲುಕೋಟೆ ಸುತ್ತಮುತ್ತಲಹಳ್ಳಿಗಳ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಿಸಿ ಪೋಷಕರ ಸಮಸ್ಯೆ ಬಗೆಹಿಸಿದೆ. ಈ ವಿಚಾರ ಸಂತಸ ತಂದಿದೆ. ಪೋಷಕರು ಪ್ರೌಢಶಾಲೆಗೆ ಮಕ್ಕಳನ್ನು ಸೇರಿಸಿ ಅವಕಾಶ ಸದುಪಯೋಗಪಡಿಸಿಕೊಳ್ಳಬೇಕು ಎಲ್.ಕೆ.ಜಿಯಿಂದ 10ನೇ ತರಗತಿಯವರೆಗಿರುವ ಶಾಲೆಗೆ ಎಲ್ಲಾ ಸೌಕರ್ಯಗಳನ್ನು ನೀಡಲಾಗುತ್ತದೆ ಮೇಲುಕೋಟೆ ಕ್ಷೇತ್ರದ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಶ್ರಮಿಸುತ್ತಿದ್ದು ಪೋಷಕರು ಹಿರಿಯ ವಿದ್ಯಾರ್ಥಿಗಳು ಸಹಕಾರ ನೀಡಬೇಕು.
> ■ ದರ್ಶನ್ ಪುಟ್ಟಣ್ಣಯ್ಯ, ಶಾಸಕ

ಪಲ್ಸ್ ಪೋಲಿಯೊ ಯಶಸ್ವಿಯಾಗಲಿ



• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಜಿಬಿಎ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ವೆಂಕಟಾಚಲಪತಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ನಗರದಲ್ಲಿ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನದ ಕುರಿತು ವರ್ಚುವಲ್ ಮೂಲಕ ಸಭೆ ನಡೆಸಿದ ಅವರು, ಜೂನ್ 28ರಿಂದ ಜುಲೈ 1ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ರೀತಿಯ ಸಿದ್ಧತೆಗಳನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪೋಲಿಯೊ ಬೂತ್‌ಗಳ ಸ್ಥಾಪನೆ

ಜಿಬಿಎ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡಲು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಮ್ಮ ಕ್ಲಿನಿಕ್‌ಗಳು, ಹೆರಿಗೆ ಆಸ್ಪತ್ರೆಗಳು, ನಗರ ಕುಟುಂಬ ಕಲ್ಯಾಣ ಕೇಂದ್ರಗಳು, ಔಷಧಾಲಯಗಳು, ಅಂಗನವಾಡಿ ಕೇಂದ್ರಗಳು ಹಾಗೂ ಶಾಲೆಗಳಲ್ಲಿ ಪೋಲಿಯೊ ಬೂತ್‌ಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳು, ಸ್ವಯಂಸೇವಾ ಸಂಸ್ಥೆಗಳ ಆಸ್ಪತ್ರೆಗಳು, ಮಾಲ್‌ಗಳು, ಖಾಸಗಿ ನರ್ಸಿಂಗ್ ಹೋಂಗಳು, ವೈದ್ಯಕೀಯ ಮಹಾವಿದ್ಯಾಲಯಗಳು, ಪ್ರಮುಖ ಉದ್ಯಾನವನಗಳು, ಮೆಟ್ರೋ ನಿಲ್ದಾಣಗಳು ಹಾಗೂ ಕೊಳಚೆ ಪ್ರದೇಶಗಳಂತಹ ಜನನಿಬಿಡ ಸ್ಥಳಗಳಲ್ಲಿ ಸ್ಥಿರ ಹಾಗೂ ಸಂಚಾರಿ ತಂಡಗಳನ್ನು ನಿಯೋಜಿಸಲಾಗಿದೆ. ಈ ಬೂತ್‌ಗಳ ಮೇಲ್ವಿಚಾರಣೆಗಾಗಿ ಪ್ರಾಧಿಕಾರದ ಆರೋಗ್ಯಾಧಿಕಾರಿಗಳು, ಉಪ ಆರೋಗ್ಯಾಧಿಕಾರಿಗಳು ಹಾಗೂ ಆರೋಗ್ಯ ವೈದ್ಯಾಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ ಎಂದು ಆಯುಕ್ತರು ತಿಳಿಸಿದರು. ಹತ್ತಿರದ ಪೋಲಿಯೋ ಬೂತ್‌ಗೆ ಭೇಟಿ ನೀಡಿ: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಪೋಷಕರು ತಮ್ಮ ಮಕ್ಕಳನ್ನು ಹತ್ತಿರದ ಪೋಲಿಯೋ ಬೂತ್‌ಗಳಿಗೆ ಸುಲಭವಾಗಿ ತರಲು ಅನುಕೂಲವಾಗುವಂತೆ ಬೂತ್‌ಗಳ ಸ್ಥಳಗಳನ್ನು https://gba.karnataka.gov.in/polio/ ಮ್ಯಾಪಿಂಗ್ ಮಾಡಲಾಗಿದೆ.

ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮದ ವಿವರ

ಒಟ್ಟು ಮನೆಗಳು : 29,30,605

- 0-5 ವರ್ಷದ ಮಕ್ಕಳ ಸಂಖ್ಯೆ : 11,47,872
- ಕೊಳಚೆ ಪ್ರದೇಶಗಳ ಸಂಖ್ಯೆ : 1,417
- ವಲಸೆ ಜನಾಂಗದ ಪ್ರದೇಶಗಳ ಸಂಖ್ಯೆ : 4,382
- ವಲಸೆ ಜನಸಂಖ್ಯೆ : 1,57,372
- ವಲಸೆ ಜನಾಂಗದ 0-5 ವರ್ಷದ ಮಕ್ಕಳ ಸಂಖ್ಯೆ : 10,747
- ಬೂತ್‌ಗಳ ಸಂಖ್ಯೆ : 3,444
- ಸ್ಥಿರ ತಂಡಗಳ ಸಂಖ್ಯೆ : 660
- ಸಂಚಾರಿ ತಂಡಗಳ ಸಂಖ್ಯೆ : 435
- ಒಟ್ಟು ಲಸಿಕಾ ಕಾರ್ಯಕರ್ತರು : 15,964
- ಒಟ್ಟು ಮೇಲ್ವಿಚಾರಕರು : 817

ಪ್ರಯಾಣಿಕರ ಪರದಾಟ



ಗುರುವಾರ ಸಂಜೆ ಕಬ್ಬನ್ ಪಾರ್ಕ್ ಮೆಟ್ರೋ ನಿಲ್ದಾಣದಲ್ಲಿ ಸಂಚರಿಸುತ್ತಿದ್ದ ರೈಲಿನ ಬಾಗಿಲೊಂದು ಸರಿಯಾಗಿ ಮುಚ್ಚದ ಕಾರಣ ನೇರಳೆ ಮಾರ್ಗದಲ್ಲಿ ಮೆಟ್ರೋ ರೈಲು ಸಂಚಾರದಲ್ಲಿ 17 ನಿಮಿಷ ವಿಳಂಬ ಉಂಟಾಯಿತು. ಈ ವೇಳೆ ಭಾರೀ ಸಂಖ್ಯೆಯ ಪ್ರಯಾಣಿಕರು ನಿಲ್ದಾಣದಲ್ಲೇ ಪರದಾಡುವಂತಾಯಿತು.

ಕಿರುಸುದ್ದಿ

ಪೊಲೀಸರಿಂದ 5 ಕೆಜಿ ಆಭರಣ ಜಪ್ತಿ

• **ಬೆಂಗಳೂರು:** ನಗರದ ಹಲಸೂರು ಪೊಲೀಸ್ ಠಾಣೆ ವ್ಯಾಪ್ತಿಯ ಬೆಳ್ಳಿ ಅಂಗಡಿಯಲ್ಲಿ ಗೋಡೆ ಕೊರೆದು ಒಳನುಗ್ಗಿ 10 ಕೆಜಿ ಬೆಳ್ಳಿಯ ಆಭರಣಗಳನ್ನು ಕಳವು ಮಾಡಿದ್ದ ತಮಿಳುನಾಡು ಮೂಲದ ಯುವಕನನ್ನು ಪೊಲೀಸರು ಬಂಧಿಸಿದ್ದು, ಆತನಿಂದ 12.50 ಲಕ್ಷ ರೂ. ಮೌಲ್ಯದ 5 ಕೆಜಿ ಬೆಳ್ಳಿಯ ಆಭರಣಗಳನ್ನು ಜಪ್ತಿ ಮಾಡಿದ್ದಾರೆ. ತೇಜ್ (19) ಬಂಧಿತ ಆರೋಪಿ. ಈತ ನಗರದ ಕಾರ್ ಸ್ಟ್ರೀಟ್‌ನಲ್ಲಿರುವ ಬೆಳ್ಳಿ ಅಂಗಡಿಯ ಗೋಡೆ ಕೊರೆದು ಒಳಪ್ರವೇಶಿಸಿ ಲಕ್ಷಾಂತರ ರೂ. ಮೌಲ್ಯದ ಬೆಳ್ಳಿ ಗಟ್ಟಿ ಹಾಗೂ ಇತರ ಬೆಳ್ಳಿ ಸಾಮಗ್ರಿಗಳನ್ನು ಕಳವು ಮಾಡಿ ಪರಾರಿಯಾಗಿದ್ದನು. ಘಟನೆ ಸಂಬಂಧ ಅಂಗಡಿ ಮಾಲೀಕರು ಏ.30ರಂದು ಹಲಸೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು ಆರೋಪಿಯ ಚಲನವಲನಗಳ ಕುರಿತು ಮಾಹಿತಿ ಸಂಗ್ರಹಿಸಿ, ಸುಮಾರು ಎರಡು ತಿಂಗಳ ಕಾರ್ಯಾಚರಣೆಯ ಬಳಿಕ ತಮಿಳುನಾಡಿನ ಶಂಕರಪುರದಲ್ಲಿ ಆತನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತನನ್ನು ವಿಚಾರಣೆಗೆ ಒಳಪಡಿಸಿದ ವೇಳೆ, ಕಳವು ಮಾಡಿದ ಬೆಳ್ಳಿಯ ಆಭರಣಗಳನ್ನು ತಮಿಳುನಾಡಿನ ಮಧುರೈನ ಬ್ಯಾಂಕ್ ಬೆಳ್ಳಿ ಅಂಗಡಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾನೆ. ಬಳಿಕ ಆರೋಪಿಯೊಂದಿಗೆ ತಮಿಳುನಾಡಿಗೆ ತೆರಳಿದ ಪೊಲೀಸರು, ಮಾರಾಟ ಮಾಡಲಾಗಿದ್ದ 5 ಕೆಜಿ ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಉಳಿದ ಬೆಳ್ಳಿ ಸಾಮಗ್ರಿಗಳ ಪತ್ತೆ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ತನಿಖೆ ಮುಂದುವರಿದಿದೆ ಎಂದು ಪೂರ್ವ ವಿಭಾಗದ ಡಿಸಿಪಿ ವಿಕ್ರಮ ಆಮಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತ್ರಿವಳಿ ಕೊಲೆ ಆರೋಪಿ 14 ದಿನ ಪೊಲೀಸ್ ಕಸ್ಟಡಿಗೆ

• **ಬೆಂಗಳೂರು:** ನಗರದ ಕೆ.ಆರ್.ಪುರದಲ್ಲಿ ನಡೆದ ತ್ರಿವಳಿ ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿ ಶ್ವೇತಾಳನ್ನು ಪೊಲೀಸರು ಹೆಚ್ಚಿನ ವಿಚಾರಣೆಗೆ 14 ದಿನಗಳ ಕಾಲ ಕಸ್ಟಡಿಗೆ ಪಡೆದುಕೊಂಡಿದ್ದಾರೆ. ಜೂ.22 ರಂದು ರಾತ್ರಿ ತಂದೆ ಸೋಮಸುಂದರ್, ತಾಯಿ ಲಕ್ಷ್ಮಿ, ಸಹೋದರ ಸುಬ್ರಹ್ಮಣ್ಯನನ್ನು ಪ್ರಿಯಕರ ಕಿರಣ್ ಜತೆ ಸೇರಿ ಭೀಕರವಾಗಿ ಹತ್ಯೆಗೈದು ಪುದುಚೇರಿಗೆ ಪರಾರಿಯಾಗಿದ್ದ ಶ್ವೇತಾಳನ್ನು ಜೂ.24ರಂದು ಬಂಧಿಸಿ ನಗರಕ್ಕೆ ಕರೆತರಲಾಗಿತ್ತು. ಆರೋಪಿ ಪ್ರಾಥಮಿಕ ವಿಚಾರಣೆಯಲ್ಲಿ ಕೌಟುಂಬಿಕ ವಿಚಾರ ಹಾಗೂ ಹಣಕಾಸು ವಿಚಾರಕ್ಕೆ ತಾನೇ ಕುಟುಂಬದ ಮೂವರು ಸದಸ್ಯರನ್ನು ಹತ್ಯೆಗೈದಿದ್ದೇನೆ. ಪ್ರಿಯಕರ ಕಿರಣ್‌ಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಹೇಳುತ್ತಿದ್ದಳು. ಆದರೆ, ಕಿರಣ್ ಎಲ್ಲಿದ್ದಾನೆ ಹಾಗೂ ಇತರ ಮಾಹಿತಿ ಪಡೆಯಲು ಆಕೆಯನ್ನು 14 ದಿನಗಳ ಕಾಲ ಪೊಲೀಸ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು. ಸೂಟ್‌ಕೇಸ್ ಸಹಿತ ಬಂದಿದ್ದ ಆರೋಪಿಗಳು : ಕೊಲೆ ನಡೆದ ಬಳಿಕ ಆರೋಪಿಗಳು ಎಚ್‌ಎಎಲ್ ಸಮೀಪದ ಗುರುರಾಜ ಲೇಔಟ್‌ನಲ್ಲಿರುವ ಫ್ಲ್ಯಾಟ್‌ಗೆ ದ್ವಿಚಕ್ರ ವಾಹನದಲ್ಲಿ ಸೂಟ್‌ಕೇಸ್ ಸಹಿತ ಆಗಮಿಸಿರುವುದು ಸ್ಥಳೀಯ ಸಿಸಿ ಕ್ಯಾಮರಾ ದೃಶ್ಯಗಳಲ್ಲಿ ಸೆರೆಯಾಗಿದೆ. ಈ ದೃಶ್ಯಾವಳಿಗಳನ್ನು ಪೊಲೀಸರು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದು, ಆರೋಪಿಗಳ ಚಲನವಲನಗಳ ಬಗ್ಗೆ ಮಹತ್ವದ ಸುಳಿವುಗಳು ಸಿಕ್ಕಿವೆ. ಜತೆಗೆ ಫ್ಲ್ಯಾಟ್ ಪರಿಶೀಲನೆ ನಡೆಸಿದ ವೇಳೆ ಪೊಲೀಸರಿಗೆ ಹಲವು ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿವೆ. ಆರೋಪಿ ಕಿರಣ್ ವಾಸವಿದ್ದ ದೊಡ್ಡನೆಕ್ಕುಂದಿಯ ಬಾಡಿಗೆ ಮನೆಯಲ್ಲಿ ಪ್ಲಾಸ್ಟಿಕ್ ಡ್ರಮ್, ಕಟ್ಟರ್ ಹಾಗೂ ಸುತ್ತಿಗೆ ಪತ್ತೆಯಾಗಿದೆ. ಪೊಲೀಸ್ ವಶದಲ್ಲಿರುವ ಆರೋಪಿ ಶ್ವೇತಾ ವಿಚಾರಣೆಯಲ್ಲಿ, ತಾಯಿ ನನಗೆ ಸ್ವತಂತ್ರ್ಯವಾಗಿರಲು ಬಿಡುತ್ತಿರಲಿಲ್ಲ, ನಾನು ವಿದ್ಯಾಭ್ಯಾಸ ಮುಗಿಸಿ, ಕೆಲಸಕ್ಕೆ ಹೋಗುತ್ತಿದ್ದರು.

ಅಭಿವೃದ್ಧಿ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಭರವಸೆ

ಕೈಗಾರಿಕೆಗಳಿಂದ ಹೆಚ್ಚು ಉದ್ಯೋಗಾವಕಾಶ

• **ಬೆಂಗಳೂರು:** ರಾಜ್ಯ ಮತ್ತು ದೇಶದ ಆರ್ಥಿಕ ಪ್ರಗತಿಯಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (ಎಂಎಸ್‌ಎಂಇ) ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದ್ದು, ಅವುಗಳ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಲು ಸರ್ಕಾರ ಬದ್ಧವಾಗಿದೆ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಭರವಸೆ ನೀಡಿದರು. ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಹಮ್ಮಿಕೊಂಡಿದ್ದ ಇ-ಖಾತಾ ಮತ್ತು ನಗರ ಅಭಿವೃದ್ಧಿ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮತ್ತು ದೇಶದಲ್ಲಿ ಅತಿ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿರುವುದು ಎಂಎಸ್‌ಎಂಇ ವಲಯವಾಗಿದೆ. ದೇಶದ ಜಿಡಿಪಿಗೆ ಶೇ. 31 ರಷ್ಟು ಹಾಗೂ ರಫ್ತು ವಲಯಕ್ಕೆ ಶೇ. 45 ರಿಂದ 48 ರಷ್ಟು ಕೊಡುಗೆಯನ್ನು ಈ ವಲಯ ನೀಡುತ್ತಿದ್ದು, ಇದನ್ನು ಯಾವುದೇ ಸರ್ಕಾರ ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು. ಗ್ರಾಮೀಣ ಅಥವಾ ಪಟ್ಟಣ ಪಂಚಾಯಿತಿ ವ್ಯಾಪ್ತಿಯಿಂದ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆ ಯಾಗುವ ಕೈಗಾರಿಕಾ ಪ್ರದೇಶಗಳ ಆಸ್ತಿ ತೆರಿಗೆ ಪಾವತಿ ಕುರಿತು ಇರುವ ಗೊಂದಲಗಳನ್ನು ಬಗೆಹರಿಸಲಾಗುವುದು. ಈ ಬಗ್ಗೆ ಕೆಐಎಡಿಬಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಆಸ್ತಿಗಳನ್ನು ಪಾಲಿಕೆ ವ್ಯಾಪ್ತಿಗೆ ಸಮರ್ಪಕವಾಗಿ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



> ವಿವಿಧ ಇಲಾಖೆಗಳಿಂದ ಪರವಾನಗಿ ಮತ್ತು ಪ್ರಮಾಣಪತ್ರಗಳನ್ನು ಪಡೆಯಲು ಉದ್ಯಮಿಗಳಿಗೆ ಆಗುತ್ತಿರುವ ಸಮಯದ ವಿಳಂಬವನ್ನು ತಪ್ಪಿಸಲು, ಕೈಗಾರಿಕೆಗಳಿಗಾಗಿಯೇ ಪ್ರತ್ಯೇಕವಾಗಿ ಏಕಗವಾಕ್ಷಿ ವ್ಯವಸ್ಥೆಯನ್ನು ಜಾರಿಗೆ ತರುವ ಬಗ್ಗೆ ಗಂಭೀರವಾಗಿ ಪರಿಗಣಿಸಲಾಗುವುದು.
>
> ■ ಡಾ. ಯತೀಂದ್ರ ಸಿದ್ದರಾಮಯ್ಯ, ನಗರಾಭಿವೃದ್ಧಿ ಸಚಿವ

> ಇನ್ನು ಮುಂದೆ ಸರ್ಕಾರದ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಕೇವಲ ಸಾರ್ವಜನಿಕರ ಸಮಸ್ಯೆಗಳಷ್ಟೇ ಅಲ್ಲದೆ, ಎಂಎಸ್‌ಎಂಇ ಉದ್ಯಮಗಳು ಎದುರಿಸುತ್ತಿರುವ ಸವಾಲುಗಳನ್ನೂ ಪ್ರಮುಖ ಕಾರ್ಯ ಸೂಚಿಯಾಗಿ ಪರಿಗಣಿಸಲಾಗುವುದು. ಉದ್ಯಮಿಗಳು ತಮ್ಮ ನಿರ್ದಿಷ್ಟ ಸಮಸ್ಯೆಗಳ ಪಟ್ಟಿಯನ್ನು ನೀಡಿದರೆ ಹಂತ-ಹಂತವಾಗಿ ಅವುಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು.
>
> ■ ಬಿ.ಬಿ.ಕಾವೇರಿ, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ

ಇ-ಖಾತಾ ವ್ಯವಸ್ಥೆ ಇನ್ನಷ್ಟು ಸರಳಗೊಳಿಸಲು ಚಿಂತನೆ

ಪಾರದರ್ಶಕತೆ ಹಾಗೂ ತ್ವರಿತ ಸೇವೆಗಾಗಿ ಇ-ಖಾತಾ ವ್ಯವಸ್ಥೆಯನ್ನು ತರಲಾಗಿದೆ. ಪ್ರಸ್ತುತ ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿರುವ ಸುಮಾರು 20.26 ಲಕ್ಷ ಆಸ್ತಿಗಳ ಪೈಕಿ ಶೇ. 40 ರಷ್ಟು ಆಸ್ತಿಗಳಿಗೆ ಮಾತ್ರ ಇ-ಖಾತಾ ನೀಡಲಾಗಿದೆ. ತಾಂತ್ರಿಕ ತೊಂದರೆಗಳು ಮತ್ತು ಕಾನೂನಿನ ದೋಷಗಳ ತಿದ್ದುಪಡಿಗೆ ಈಗಾಗಲೇ ಶೇ. 10 ರಷ್ಟು ವಿನಾಯಿತಿ ನೀಡಲಾಗಿದ್ದು, ಇದನ್ನು ಇನ್ನಷ್ಟು ಸರಳಗೊಳಿಸಲು ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ತಿಳಿಸಿದರು. ಕೈಗಾರಿಕಾ ಪ್ರದೇಶಗಳಿಗೆ ಟ್ಯಾಂಕರ್ ಮುಕ್ತ ನೀರು ಸರಬರಾಜು ಮತ್ತು ಒಳಚರಂಡಿ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಆದ್ಯತೆ ನೀಡಲಿದೆ. ಅಲ್ಲದೆ, ಕೈಗಾರಿಕೆಗಳಿಗೆ ಹೊರೆಯಾಗುತ್ತಿರುವ ನೀರಿನ ದರ ಹಾಗೂ ಆಸ್ತಿ ತೆರಿಗೆಯನ್ನು ಮರುಪರಿಶೀಲಿಸಿ, ಉದ್ಯಮ ಸ್ನೇಹಿಯಾಗಿ ಪರಿಷ್ಕರಿಸುವ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು. ಉದ್ಯಮಿಗಳ ಸಮಸ್ಯೆಗಳಿಗೆ ಕೇವಲ ಭರವಸೆ ನೀಡದೆ, ಎಫ್‌ಕೆಸಿಸಿಐ ನೀಡುವ ನಿರ್ದಿಷ್ಟ ಸಮಸ್ಯೆಗಳ ಲಿಖಿತ ವರದಿಯನ್ನು ಆಧರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಮುಂಬರುವ ದಿನಗಳಲ್ಲೂ ಉದ್ಯಮಿಗಳೊಂದಿಗೆ ನಿರಂತರ ಸಂಪರ್ಕ ಮತ್ತು ಸಮಾಲೋಚನೆ ನಡೆಸುವ ಮೂಲಕ ಕೈಗಾರಿಕಾ ವಲಯದ ಏಳಿಗೆಗೆ ಶ್ರಮಿಸುವುದಾಗಿ ಭರವಸೆ ನೀಡಿದ್ದಾರೆ. ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಬಿ.ಬಿ.ಕಾವೇರಿ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷೆ ಉಮಾ ರೆಡ್ಡಿ, ನಿಕಟಪೂರ್ವ ಅಧ್ಯಕ್ಷ ಆರ್. ಶಿವಕುಮಾರ್, ಹಿರಿಯ ಉಪಾಧ್ಯಕ್ಷ ಸಾಯಿರಾಂ ಪ್ರಸಾದ್, ಶಶಿಧರ್, ಅರವಿಂದ್ ಬುರ್ಜೆ, ತಲ್ಲಂ ವೆಂಕಟೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜೂ.28ರಂದು ಭರತನಾಟ್ಯ ನೃತ್ಯ ಪ್ರದರ್ಶನ

• **ಬೆಂಗಳೂರು:** ನಟನಂ ಇನ್ಸ್ಟಿಟ್ಯೂಟ್ ಆಫ್ ಡ್ಯಾನ್ಸ್‌ನ ಭರತನಾಟ್ಯ ಗುರು ಡಾ.ರಕ್ಷಾ ಕಾರ್ತಿಕ್ ಅವರ ಶಿಷ್ಯೆಯರಾದ ಮಾನಸ ರಂಗ ಹಾಗೂ ದಿವ್ಯ ವಿಜಯಲಕ್ಷ್ಮಿ ಧರ್ಮರಾಜನ್ ಅವರ ಭರತನಾಟ್ಯ ನೃತ್ಯ ಪ್ರದರ್ಶನ ನೃತ್ಯ ಸಮ್ಮಿಲನವನ್ನು ಜೂ.28 ರಂದು ಬೆಳಗ್ಗೆ 10 ಗಂಟೆಗೆ ಮೆಟ್ಟಿ - ದ ಸ್ಟೇಜ್, ರಿಚ್ಮಂಡ್ ಟೌನ್‌ನಲ್ಲಿ ಆಯೋಜಿಸಲಾಗಿದೆ.



ಕಾರ್ಯಕ್ರಮಕ್ಕೆ ಪ್ರಸಿದ್ಧ ನಟಿ, ಭರತನಾಟ್ಯ ಕಲಾವಿದ ಹಾಗೂ ನೃತ್ಯ ವಿಷಯದ ಪಿಎಚ್‌ಡಿ ಸಂಶೋಧಕ ವಿದ್ವಾನ್ ಭಾರದ್ವಾಜ್ ದಯಾನಿಧಿ ಮತ್ತು ಸುದೀಂದ್ರ ನೃತ್ಯ ಕಲಾನಿಕೇತನದ ಕಲಾ ನಿರ್ದೇಶಕ ವಿದ್ವಾನ್ ಗುರುರಾಜ್ ವಿಶಿಷ್ಟ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿದೂಷಿ ಡಾ. ರಕ್ಷಾ ಕಾರ್ತಿಕ್ (ನಟ್ಟುವಾಂಗಂ), ವಿದ್ವಾನ್ ಬಾಲಸುಬ್ರಹ್ಮಣ್ಯ ಶರ್ಮ (ಗಾಯನ), ವಿದ್ವಾನ್ ಗೋಪಾಲ್ ವೆಂಕಟರಮಣ (ವೀಣೆ), ವಿದ್ವಾನ್ ಭವಾನಿ ಶಂಕರ್ (ಮೃದಂಗ), ವಿದ್ವಾನ್ ಪ್ರಸನ್ನ ಕುಮಾರ್ (ಲಯ ಸಹಕಾರ) ಹಾಗೂ ವಿದ್ವಾನ್ ದೀಪಕ್ ಹೆಬ್ಬಾರ್ (ಕೊಳಲು) ಅವರನ್ನೊಳಗೊಂಡ ನಿಪುಣ ಕಲಾವಿದರ ತಂಡ ಸಹಕಾರ ನೀಡಲಿದೆ.

ಹೆಚ್ಚಿನ ಮಾಹಿತಿಗಾಗಿ 9886107701 ಸಂಪರ್ಕಿಸಬಹುದಾಗಿದೆ.

ಪ್ರಶಸ್ತಿಗೆ ಉತ್ತರಾಕುಮಾರಿ, ತನುಜಾ ಆಯ್ಕೆ

• **ಬೆಂಗಳೂರು:** ಕರ್ನಾಟಕ ಪತ್ರಕರ್ತೆಯರ ಸಂಘವು 2025-2026ನೇ ಸಾಲಿನ ವಾರ್ಷಿಕ ಪ್ರಶಸ್ತಿಗಾಗಿ ಹಿರಿಯ ಪತ್ರಕರ್ತೆ, ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಟೈಮ್ಸ್ ಆಫ್ ಇಂಡಿಯಾ ನಿವೃತ್ತ ಸುದ್ದಿ ಸಂಪಾದಕಿ ಬಿ. ಉತ್ತರಾಕುಮಾರಿ ಹಾಗೂ ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ ಬ್ಯೂರೋದಲ್ಲಿ ಹಿರಿಯ ಉಪಸಂಪಾದಕಿ ಆಗಿರುವ ತನುಜಾ ನಾಯಕ್ ಅವರನ್ನು ಆಯ್ಕೆ ಮಾಡಿದೆ.





ಪತ್ರಿಕೋದ್ಯಮ ಕ್ಷೇತ್ರದ ಹೊರತಾಗಿ ವಿಶಿಷ್ಟ ಸಾಧಕಿಯರಿಗೆ ನೀಡುವ ಪ್ರಶಸ್ತಿಗಾಗಿ ಮಹಿಳಾ ವಲಸೆ ಕಾರ್ಮಿಕರ ಹಕ್ಕು ಮತ್ತು ಸಂಘಟನೆಗಾಗಿ ದುಡಿಯುತ್ತಿರುವ ಇಂಡಿ ಮೂಲದ ಡಾ. ಭುವನೇಶ್ವರಿ ಕಾಂಬಳೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ. ಜುಲೈ ಎರಡನೇ ವಾರ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷೆ ಆರ್. ಪೂರ್ಣಿಮಾ ತಿಳಿಸಿದ್ದಾರೆ.

ಮೃತರ ಕುಟುಂಬಗಳಿಗೆ ಪರಿಹಾರ ನೀಡಲು ಆಗ್ರಹ

• **ಬೆಂಗಳೂರು:** ಬೆಂಗಳೂರು ಜಲಮಂಡಳಿ ವ್ಯಾಪ್ತಿಯ ವರ್ತೂರು ಕೋಡಿ ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಸಂಭವಿಸಿದ ಭೀಕರ ದುರಂತದಲ್ಲಿ ಕಾರ್ಮಿಕರು ಮೃತಪಟ್ಟಿರುವ ಘಟನೆಗೆ ಸಂಬಂಧಿಸಿದಂತೆ, ಮೃತರ ಕುಟುಂಬಗಳಿಗೆ ತಲಾ 50 ಲಕ್ಷ ರೂ. ತುರ್ತು ಪರಿಹಾರ ನೀಡಬೇಕು. ಹಾಗೂ ಪತ್ತೆಯಾಗದ ಕಾರ್ಮಿಕನ ಮೃತದೇಹವನ್ನು ತಕ್ಷಣವೇ ಪತ್ತೆಹಚ್ಚಬೇಕು ಎಂದು ಕರ್ನಾಟಕ ಮಾಹಿತಿ ಹಕ್ಕು ಹೋರಾಟಗಾರರ ರಾಜ್ಯ ಸಮಿತಿಯು ಜಲಮಂಡಳಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ನೀಡಿದೆ.

ಎಸ್‌ಟಿಪಿ ಘಟಕದಲ್ಲಿ ಶ್ರಮಿಕ ಕಾರ್ಮಿಕರು ದುರಂತವಾಗಿ ಜೀವ ಕಳೆದುಕೊಂಡಿದ್ದಾರೆ. ಈ ಹೃದಯವಿದ್ರಾವಕ ಘಟನೆಯು ಕಾರ್ಮಿಕರ ಸುರಕ್ಷತೆ, ಮೇಲ್ವಿಚಾರಣೆ ಮತ್ತು ಜಲಮಂಡಳಿಯ ಅಧಿಕಾರಿಗಳ ಹೊಣೆಗಾರಿಕೆಯ ಕುರಿತು ಹಲವು ಗಂಭೀರ ಪ್ರಶ್ನೆಗಳು ಎದ್ದಿವೆ. ಸದ್ಯ ಘಟನಾ ಸ್ಥಳದಿಂದ ಒಬ್ಬರ ಮೃತದೇಹ ಮಾತ್ರ ಪತ್ತೆಯಾಗಿದ್ದು, ಎರಡನೇ ಮೃತದೇಹವನ್ನು ತಕ್ಷಣವೇ ಪತ್ತೆಹಚ್ಚಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.



50 ಲಕ್ಷ ತುರ್ತು ಪರಿಹಾರ

ಮೃತರಾದ ಕಾರ್ಮಿಕರ ಕುಟುಂಬಗಳಿಗೆ ತಲಾ 50 ಲಕ್ಷ ರೂ.ಗಳ ಆರ್ಥಿಕ ನೆರವನ್ನು ತಕ್ಷಣವೇ ಘೋಷಿಸಬೇಕು. ಇದರೊಂದಿಗೆ ಕುಟುಂಬಗಳಿಗೆ ಅಗತ್ಯ ವೈದ್ಯಕೀಯ, ಕಾನೂನು ಮತ್ತು ಆಡಳಿತಾತ್ಮಕ ನೆರವು ನೀಡಬೇಕು. ಇನ್ನೂ ಪತ್ತೆಯಾಗದ ಮೃತದೇಹವನ್ನು ತಕ್ಷಣವೇ ಹುಡುಕಲು ಎನ್‌ಡಿಆರ್‌ಎಫ್, ಅಗ್ನಿಶಾಮಕ ದಳ ಮತ್ತು ಜಲಮಂಡಳಿಯ ಅಧಿಕಾರಿಗಳಿಗೆ ಅಗತ್ಯವಿರುವ ಎಲ್ಲಾ ಸಂಪನ್ಮೂಲ ಒದಗಿಸಿ, ರಕ್ಷಣಾ ಕಾರ್ಯಾಚರಣೆಯನ್ನು ಅತ್ಯಂತ ಆದ್ಯತೆಯ ಮೇಲೆ ನಡೆಸಬೇಕು ಎಂದು ಮನವಿಯಲ್ಲಿ ಆಗ್ರಹಿಸಿದ್ದಾರೆ. ತನಿಖೆ ಮಾಡಿ ಕಠಿಣ ಕ್ರಮ ಜರುಗಿಸಿ: ಈ ದುರಂತಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಸಮಗ್ರ ತನಿಖೆ ನಡೆಸಿ, ಭವಿಷ್ಯದಲ್ಲಿ ಇಂತಹ ಅನಾಹುತಗಳು ಮರುಕಳಿಸದಂತೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಸಂಬಂಧಿತ ಇಲಾಖೆಗಳ ವಿರುದ್ಧ ತಕ್ಷಣವೇ ಹೊಣೆಗಾರಿಕೆ ನಿಗದಿಪಡಿಸಿ, ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕೆಂದು ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ.



ಬನ್ನೇರುಘಟ್ಟ ಮುಖ್ಯ ರಸ್ತೆಯ ಹದಗೆಟ್ಟ ಸ್ಥಿತಿ ಮತ್ತು ರಸ್ತೆಯಲ್ಲಿರುವ ಗುಂಡಿಗಳಿಂದ ದ್ವಿಚಕ್ರ ಸವಾರರು ಸೇರಿದಂತೆ ಇತರೆ ವಾಹನ ಚಾಲಕರಿಗೆ ತೊಂದರೆ ಅನುಭವಿಸಬೇಕಾಯಿತು.

ಆಧಾರರಹಿತ ಆರೋಪ ಸಲ್ಲದು: ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ್

ಒಕ್ಕಲಿಗರ ಸಂಘದಲ್ಲಿ ಅವ್ಯವಹಾರ ನಡೆದಿಲ್ಲ

• **ಬೆಂಗಳೂರು:** ರಾಜ್ಯ ಒಕ್ಕಲಿಗರ ಸಂಘದಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಿಲ್ಲ, ಸಂಘದ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡುತ್ತಿರುವ ಮಾಜಿ ಪ್ರಧಾನ ಕಾರ್ಯದರ್ಶಿ ಟಿ. ಕೋನಪ್ಪರೆಡ್ಡಿ ಹಾಗೂ ಅವರ ಬೆಂಬಲಿಗರ ವಿರುದ್ಧ ಸೂಕ್ತ ಕಾನೂನುಕ್ರಮಕೈಗೊಳ್ಳಲಾಗುವುದು ಎಂದು ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ್ ತಿಳಿಸಿದ್ದಾರೆ.

ನಗರದ ಕೃಷ್ಣರಾಜೇಂದ್ರ ರಸ್ತೆಯ ಕೆಂಪೇಗೌಡ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್ 23ರಂದು ಕೋನಪ್ಪರೆಡ್ಡಿ, ಉಮಾಪತಿ ಗೌಡ ಹಾಗೂ ರಘು ಗೌಡ ಅವರು ಸಂಘದ ಆಡಳಿತ ಮಂಡಳಿ ಮತ್ತು ನಿರ್ದೇಶಕರ ವಿರುದ್ಧ ಅವ್ಯವಹಾರದ ಆರೋಪ ಹೊರಿಸಿ ಸಂಘದ ಗೌರವಕ್ಕೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿದರು. ಸಂಘದ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 2025ರ ಸೆಪ್ಟೆಂಬರ್ 17ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿಯೇ ನೇಮಕಾತಿಗೆ ಅನುಮೋದನೆ ದೊರೆತಿತ್ತು ಎಂದು ಸ್ಪಷ್ಟಪಡಿಸಿದರು. ಆ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿದ್ದ ಕೋನಪ್ಪರೆಡ್ಡಿಯವರೇ ನೇಮಕಾತಿ ಪ್ರಕ್ರಿಯೆಗೆ ಆದೇಶ ನೀಡಿದ್ದರು ಎಂದರು.

ಮಾಜಿ ಪ್ರಧಾನ ಕಾರ್ಯದರ್ಶಿ ಟಿ. ಕೋನಪ್ಪರೆಡ್ಡಿ ಅವರನ್ನು 2024ರ ಆಗಸ್ಟ್ 29ರಂದು ಡೆಂಟಲ್ ಕಾಲೇಜಿನ ವೇತನ ಶ್ರೇಣಿ ಹಾಗೂ ಎಚ್‌ಆರ್ ನಿಗದಿಯಲ್ಲಿ 1.35 ಕೋಟಿ ರೂಪಾಯಿ ಆರ್ಥಿಕ ನಷ್ಟ ಉಂಟುಮಾಡಿದ ಆರೋಪದಡಿ ಅಮಾನತುಗೊಳಿಸಲಾಗಿತ್ತು. ಅಲ್ಲದೆ, ಶಂಕರ್ ನಾರಾಯಣ್ ವೇತನ ತಾರತಮ್ಯ ಸಮಿತಿಯ ವರದಿಯನ್ನು ತಪ್ಪಾಗಿ ಜಾರಿಗೊಳಿಸಿ ಸುಮಾರು 5.06 ಕೋಟಿ ರೂಪಾಯಿ ನಷ್ಟ ಉಂಟುಮಾಡಿದ ಹಿನ್ನೆಲೆ ಮತ್ತೆ ಅಮಾನತುಗೊಳಿಸಲಾಗಿದೆ ಎಂದು ಹೇಳಿದರು.

ಸಂಘದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಕಲಿ ಬ್ಯಾಂಕ್ ಗ್ಯಾರಂಟಿ ಸಲ್ಲಿಸಿದ ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂಬ ಆರೋಪಗಳಿಗೂ ಪ್ರತಿಕ್ರಿಯಿಸಿ, ಆ ಒಪ್ಪಂದಗಳಿಗೆ ಕೋನಪ್ಪರೆಡ್ಡಿಯವರೇ ಪ್ರಧಾನ ಕಾರ್ಯದರ್ಶಿಯಾಗಿದ್ದ ವೇಳೆ ಸಹಿ ಹಾಕಿದ್ದರು ಎಂದು ತಿಳಿಸಿದರು.

ಕಾಮಗಾರಿಗಳಿಗೆ 1.92 ಕೋಟಿ ರೂಪಾಯಿ ಮುಂಗಡ ಹಣ ಪಾವತಿಸಿದ ಪ್ರಕರಣದಲ್ಲಿ ಸಹಕಾರ ಇಲಾಖೆಯ ಜಂಟಿ ನಿಬಂಧಕ ವೆಂಕಟೇಶ್ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಣ ಬಿಡುಗಡೆ ಕ್ರಮದಲ್ಲಿ ಲೋಪಗಳಿರುವುದು ಉಲ್ಲೇಖಿಸಲಾಗಿದೆ. ಇದೇ ರೀತಿ, ಸಂಘದ ಪದಾಧಿಕಾರಿಗಳ ವಿರುದ್ಧ ನ್ಯಾಯಾಲಯದಲ್ಲಿ ಹೂಡಲಾಗಿದ್ದ ದಾವೆಗೆ ಸಂಬಂಧಿಸಿದ ವಕೀಲರ ಶುಲ್ಕವಾಗಿ 10.35 ಲಕ್ಷ ರೂಪಾಯಿ ಬಿಡುಗಡೆ ಮಾಡಿದ ಪ್ರಕರಣದಲ್ಲೂ ಅಂದಿನ ಖಜಾಂಚಿ ಎಂ.ಎಸ್. ಉಮಾಪತಿಯವರ ಪಾತ್ರವಿದ್ದು, ಹಣ ಬಿಡುಗಡೆ ಪ್ರಕ್ರಿಯೆ ನಿಯಮಬಾಹಿರವಾಗಿದೆ ಎಂದು ಇಲಾಖಾ ವರದಿ ತಿಳಿಸಿದೆ ಎಂದು ಎಲ್. ಶ್ರೀನಿವಾಸ್ ಹೇಳಿದರು.

ಹೂಳು ತೆರವಿಗೆ ಕ್ರಮವಹಿಸಿ

• **ಬೆಂಗಳೂರು:** ಜಲಾವೃತ ಸಮಸ್ಯೆ ತಡೆಗೆ ಚರಂಡಿಗಳ ಸಮಗ್ರ ಹೂಳು ತೆರವಿಗೆ ಕ್ರಮವಹಿಸುವಂತೆ ಕೇಂದ್ರ ನಗರಪಾಲಿಕೆ ಅಭಿವೃದ್ಧಿ ಅಪರ ಆಯುಕ್ತ ವೆಂಕಟಾಚಲಪತಿ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದ ಅವರು, ಚಿಕ್ಕಪೇಟೆ ವಿಭಾಗದ ಮೋತಿ ನಗರದಲ್ಲಿನ ಪಾಲಿಕೆಯ ಶಾಲೆ ಕಟ್ಟಡದ ಕಾಮಗಾರಿಯು ನಿಧಾನಗತಿಯಲ್ಲಿ ಸಾಗುತ್ತಿರುವುದರಿಂದ ಸಂಬಂಧಿತ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದ್ದಾರೆ. ಶಾಂತಿ ನಗರ ವಿಭಾಗದ ಎಂ.ಜಿ.ರಸ್ತೆಯಲ್ಲಿ (ಮಹಾತ್ಮ ಗಾಂಧಿ ಉದ್ಯಾನವನದಿಂದ ಟ್ರಿನಿಟಿ ವೃತ್ತದವರೆಗೆ 2.4 ಕಿ.ಮೀ (ಎರಡು ಬದಿ ಸೇರಿ 4.8 ಕಿ.ಮೀ) ರಸ್ತೆಗೆ ಈಗಾಗಲೇ ಡಾಂಬರೀಕರಣ ಪೂರ್ಣಗೊಂಡಿದ್ದು ಸದರಿ ಕಾಮಗಾರಿಯನ್ನು ಕೋರ್ ಕಟಿಂಗ್ ಮೂಲಕ ಡಾಂಬರಿನ ಪದರದ ಗುಣಮಟ್ಟ ಹಾಗೂ ಅದರ ಆಳತೆಯನ್ನು ಪರಿಶೀಲಿಸಿದ್ದಾರೆ.

ನಗರದ ಎಂ.ಜಿ ರಸ್ತೆ ಪ್ರದೇಶದಲ್ಲಿ ಚರಂಡಿಗಳಲ್ಲಿನ ಹೂಳನ್ನು ತೆರವುಗೊಳಿಸುತ್ತಿರುವ ಕಾರ್ಯ ನಡೆಯುತ್ತಿದ್ದು,ಚರಂಡಿಯ ಮುಚ್ಚಳವನ್ನು ತೆರೆಯಿಸಿ ಕಾಮಗಾರಿಯ ಪ್ರಗತಿಯನ್ನು ಖುದ್ದು ವೀಕ್ಷಿಸಿದರು.



ಈ ಸಂದರ್ಭದಲ್ಲಿ ಚರಂಡಿಯೊಳಗೆ ಸಂಗ್ರಹವಾಗಿರುವ ಹೂಳನ್ನು ಗಮನಿಸಿ ಮಳೆ ನೀರಿಗೆ ಯಾವುದೇ ಅಡೆತಡೆಯಿಲ್ಲದೆ ಸುಗಮವಾಗಿ ಹರಿದು ಜಲಾವೃತ ಸಮಸ್ಯೆ ಉಂಟಾಗದಂತೆ ಪೂರ್ಣ ಪ್ರಮಾಣದ ಹೂಳನ್ನು ಸಮರ್ಪಕವಾಗಿ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಪಾದಚಾರಿ ಮಾರ್ಗಗಳ ಮೇಲೆ ಅಸ್ತವ್ಯಸ್ತವಾಗಿ ಅಳವಡಿಸಲಾಗಿರುವ ಒಎಫ್‌ಸಿ ಕೇಬಲ್‌ಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ತಕ್ಷಣ ತೆರವುಗೊಳಿಸಿ ಪಾದಚಾರಿ ಮಾರ್ಗಗಳನ್ನು ಅಡೆತಡೆ ಮುಕ್ತಗೊಳಿಸುವಂತೆ ನಿರ್ದೇಶನ ನೀಡಿದ್ದಾರೆ.

ಇಂದು ನಗರದಲ್ಲಿ...

- ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ-2026
- ಸ್ಥಳ: ಮರ್ಕ್ಸಿ ದೇವಾಸಿಯಾ ಸಭಾಂಗಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ
- ಬೆಳಗ್ಗೆ 10.30

- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ 2024-25 ನೇ ಸಾಲಿನ ಅಕಾಡೆಮಿಯ ಪುಸ್ತಕ ಬಹುಮಾನ ಪ್ರದಾನ ಸಮಾರಂಭ
- ಸ್ಥಳ: ರವೀಂದ್ರ ಕಲಾಕ್ಷೇತ್ರ
- ಸಂಜೆ 4

- ಶಾಲಾ ಮಕ್ಕಳ ಸಾಹಸ ಕುರಿತು ಕಾವೇರಿ ಡೈರೀಸ್ ಪುಸ್ತಕ ಬಿಡುಗಡೆ ಸಮಾರಂಭ
- ಸ್ಥಳ: ಬಿಪಿ ವಾಡಿಯಾ ಸಭಾಂಗಣ, ಬಸವನಗುಡಿ
- ಸಂಜೆ 5.30

ಶುಕ್ರವಾರದ ಪಂದ್ಯಗಳು

ಟರ್ಕಿ–ಅಮೆರಿಕ (ಬೆಳಗ್ಗೆ 7:30)
ಪರಾಗ್ವೆ–ಆಸ್ಟ್ರೇಲಿಯಾ (ಬೆಳಗ್ಗೆ 7:30)
ನಾರ್ವೆ–ಫ್ರಾನ್ಸ್ (ಮಧ್ಯರಾತ್ರಿ 12:30)
ಸೆನೆಗಲ್–ಇರಾಕ್ (12:30)

ಪ್ಲೇಆಫ್‌ಗೆ ಮುನ್ನಡೆ | ನೇಮರ್ ಪುನರಾಗಮನ

ಬ್ರೆಜಿಲ್ ಆರ್ಭಟ

• **ಮಿಯಾಮಿ ಗಾರ್ಡನ್ಸ್:** ಅಭಿಮಾನಿಗಳ ಫೇವರಿಟ್, ದಿಗ್ಗಜ ಫುಟ್‌ಬಾಲರ್ ನೇಮರ್ ವಿಶ್ವಕಪ್ ಪಂದ್ಯಾವಳಿಗೆ ಕಾಲಿಟ್ಟ ಪಂದ್ಯದಲ್ಲಿ ಬ್ರೆಜಿಲ್ ಸ್ಕಾಟ್ಲೆಂಡ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ಸತತ ಎರಡು ಪಂದ್ಯಗಳಿಂದ ದೂರ ಉಳಿದಿದ್ದ ನೇಮರ್ ಕೊನೆಗೂ ಕ್ರೀಡಾಂಗಣದಲ್ಲಿ ಕಾಣಿಸಿಕೊಂಡರು. ಕಾಲಿನ ಗಾಯದಿಂದಾಗಿ ದೂರ ಉಳಿದಿದ್ದ ಅವರು, ಫಿಟ್ನೆಸ್ ಪರೀಕ್ಷೆ ಪಾಸಾದ ನಂತರ ಪಂದ್ಯಾವಳಿಗೆ ಮರಳಿದ್ದಾರೆ. ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಬ್ರೆಜಿಲ್ ಸ್ಕಾಟ್ಲೆಂಡ್ ತಂಡವನ್ನು ಎದುರಿಸಿತು. ಸ್ಟಾರ್ ಫಾರ್ವರ್ಡ್ ವಿನಿಸಿಯಸ್ ಜೂನಿಯರ್ ಅವರ ದ್ವಿಗೋಲು ಸಾಧನೆಯ ನೆರವಿನಿಂದ ಐದು ಬಾರಿಯ ವಿಶ್ವ ಚಾಂಪಿಯನ್ ಬ್ರೆಜಿಲ್, ಸ್ಕಾಟ್ಲೆಂಡ್ ವಿರುದ್ಧ 3–0 ಅಂತರದ ಭರ್ಜರಿ ಜಯ ಸಾಧಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಪಂದ್ಯ ಆರಂಭವಾದ ಏಳನೇ ನಿಮಿಷದಲ್ಲೇ ವಿನಿಸಿಯಸ್ ಗೋಲು ಬಾರಿಸಿ ಬ್ರೆಜಿಲ್‌ಗೆ ಮುನ್ನಡೆ ತಂದುಕೊಟ್ಟರು. ಮೊದಲಾರ್ಧದ ಅಂತಿಮ ಕ್ಷಣಗಳಲ್ಲಿ ಮತ್ತೊಮ್ಮೆ ಗೋಲು ದಾಖಲಿಸಿದ ಅವರು ಟೂರ್ನಿಯಲ್ಲಿ ತಮ್ಮ ಗೋಲುಗಳ ಸಂಖ್ಯೆಯನ್ನು ನಾಲ್ಕಕ್ಕೆ ಏರಿಸಿಕೊಂಡರು. ಈ ಮೂಲಕ ಫ್ರಾನ್ಸ್‌ನ ಕೈಲಿಯನ್ ಎಂಬಾಪೆ ಅವರೊಂದಿಗೆ ಸಮಬಲ ಸಾಧಿಸಿದ ವಿನಿಸಿಯಸ್, ಐದು ಗೋಲುಗಳೊಂದಿಗೆ ಅಗ್ರಸ್ಥಾನದಲ್ಲಿರುವ ಲಿಯೋನೆಲ್ ಮೆಸ್ಸಿಗೆ ಒಂದು ಗೋಲು ಹಿಂದಿದ್ದಾರೆ. ಮ್ಯಾಥಿಯಸ್ ಕುನ್ಹಾ ಕೂಡ ಒಂದು ಗೋಲು ದಾಖಲಿಸಿ ಬ್ರೆಜಿಲ್‌ನ ಗೆಲುವನ್ನು ಮತ್ತಷ್ಟು ಭದ್ರಪಡಿಸಿದರು. ಸ್ಕಾಟ್ಲೆಂಡ್ ರಕ್ಷಣಾ ವಿಭಾಗ ಬ್ರೆಜಿಲ್‌ನ ವೇಗದ ದಾಳಿಯನ್ನು ತಡೆಯಲು ವಿಫಲವಾಯಿತು.

ನೇಮರ್ ಸಬ್‌ಸ್ಟಿಟ್ಯೂಟ್: ಪಂದ್ಯದ ಮತ್ತೊಂದು ವಿಶೇಷ ಆಕರ್ಷಣೆಯೆಂದರೆ ನೇಮರ್ ಅವರ ಮರಳುವಿಕೆ. ಬಲ ಕಾಲಿನ ಗಾಯದಿಂದ ಮೊದಲ ಎರಡು ಪಂದ್ಯಗಳಿಂದ ಹೊರಗುಳಿದಿದ್ದ ನೇಮರ್ 76ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಕಣಕ್ಕಿಳಿದರು. ಅವರು ವಾರ್ಮ್‌ಅಪ್ ಆರಂಭಿಸಿದ ಕ್ಷಣದಿಂದಲೇ ಅಭಿಮಾನಿಗಳು ಅವರ ಹೆಸರನ್ನು ಘೋಷಿಸುತ್ತಿದ್ದರು. ಮೈದಾನಕ್ಕೆ ಕಾಲಿಟ್ಟಾಗ ಸ್ಟೇಡಿಯಂ ಸಂಭ್ರಮದಿಂದ ಮೊಳಗಿತು.



ಪ್ರಮುಖ ಅಂಶಗಳು

- ವಿನಿಸಿಯಸ್ ಜೂನಿಯರ್ 2 ಗೋಲು
- ಮ್ಯಾಥಿಯಸ್ ಕುನ್ಹಾ 1 ಗೋಲು

32ರ ಸುತ್ತಿಗೆ ಮೊರಾಕ್ಕೊ



• **ಅಟ್ಲಾಂಟಾ:** ಎರಡು ಬಾರಿ ಹಿನ್ನಡೆಯನ್ನು ಅನುಭವಿಸಿದರೂ ಅಸಾಧಾರಣ ಪುನರಾಗಮನ ಮಾಡಿದ ಮೊರಾಕ್ಕೊ, ಹೈಟಿಯನ್ನು 4–2 ಗೋಲುಗಳಿಂದ ಮಣಿಸಿ ಫಿಫಾ ವಿಶ್ವಕಪ್ ನಾಕೌಟ್ ಹಂತಕ್ಕೆ ಅರ್ಹತೆ ಪಡೆದುಕೊಂಡಿದೆ. ವಿಶ್ವಕಪ್‌ನಲ್ಲಿ 52 ವರ್ಷಗಳ ಬಳಿಕ ಆಡುತ್ತಿರುವ ಹೈಟಿ ಅಚ್ಚರಿಯ ಆರಂಭ ಮಾಡಿತು. 10ನೇ ನಿಮಿಷದಲ್ಲಿ ಲೆನ್ನಿ ಜೋಸೆಫ್ ಬಾರಿಸಿದ ಗೋಲು ಹೈಟಿಗೆ ಮುನ್ನಡೆ ನೀಡಿತು. ಇದು 1974ರ ಬಳಿಕ ವಿಶ್ವಕಪ್‌ನಲ್ಲಿ ಹೈಟಿ ದಾಖಲಿಸಿದ ಮೊದಲ ಗೋಲಾಗಿತ್ತು. ಮೊರಾಕ್ಕೊ ನಿರಂತರ ಒತ್ತಡದ ಫಲವಾಗಿ 39ನೇ ನಿಮಿಷದಲ್ಲಿ ಅಶ್ರಫ್ ಹಕಿಮಿ ಸಮಬಲ ಸಾಧಿಸಿದರು. ಆದರೆ ನಾಲ್ಕು ನಿಮಿಷಗಳಲ್ಲೇ ವಿಲ್ಸನ್ ಇಸಿಡೋರ್ ಅವರ ಅದ್ಭುತ ದೂರದ ಶಾಟ್ ಹೈಟಿಗೆ ಮತ್ತೆ 2–1 ಮುನ್ನಡೆ ತಂದುಕೊಟ್ಟಿತು. ಮೊದಲಾರ್ಧದ ಹೆಚ್ಚುವರಿ ಸಮಯದಲ್ಲಿ ಇಸ್ಮಾಯಿಲ್ ಸೈಬಾರಿ ಗೋಲು ಬಾರಿಸಿ ಮೊರಾಕ್ಕೊವನ್ನು 2–2 ಸಮಬಲಕ್ಕೆ ತಂದರು. ಟೂರ್ನಿಯಲ್ಲಿ ಇದು ಸೈಬಾರಿಯ ಮೂರನೇ ಗೋಲಾಗಿತ್ತು. ದ್ವಿತೀಯಾರ್ಧದಲ್ಲಿ ಪಂದ್ಯ ಇನ್ನಷ್ಟು ರೋಚಕವಾಯಿತು. ಬದಲಿ ಆಟಗಾರನಾಗಿ ಬಂದ ಸೋಫಿಯಾನ್ ರಹಿಮಿ 78ನೇ ನಿಮಿಷದಲ್ಲಿ ಗೋಲು ಬಾರಿಸಿ ಮೊರಾಕ್ಕೊಗೆ ಮೊದಲ ಬಾರಿಗೆ ಮುನ್ನಡೆ ತಂದುಕೊಟ್ಟರು. 89ನೇ ನಿಮಿಷದಲ್ಲಿ ಗೆಸ್ಸಿಮ್ ಯಾಸಿನ್ ಮತ್ತೊಂದು ಗೋಲು ದಾಖಲಿಸಿ ಹೈಟಿಯ ಅಚ್ಚರಿಯ ಕನಸಿಗೆ ತೆರೆ ಎಳೆದರು.

ಮೆಕ್ಸಿಕೊ ಮಿಂಚಿನಾಟ, ಜೆಕ್ ಹೊರಕ್ಕೆ

ಮೆಕ್ಸಿಕೊ ಸಿಟಿ: ಆತಿಥೇಯ ಮೆಕ್ಸಿಕೊ ವಿಶ್ವಕಪ್‌ನಲ್ಲಿ ತನ್ನ ಅದ್ಭುತ ಫಾರ್ಮ್ ಮುಂದುವರಿಸಿದ್ದು, ಜೆಕ್ ಗಣರಾಜ್ಯವನ್ನು 3–0 ಗೋಲುಗಳಿಂದ ಮಣಿಸಿ ಗುಂಪು ಹಂತದ ಎಲ್ಲಾ ಮೂರು ಪಂದ್ಯಗಳನ್ನು ಗೆದ್ದ ಮೊದಲ ಮೆಕ್ಸಿಕನ್ ತಂಡವಾಗಿ ಇತಿಹಾಸ ನಿರ್ಮಿಸಿದೆ. ಮೊದಲಾರ್ಧದಲ್ಲಿ ಗೋಲುರಹಿತವಾಗಿದ್ದ ಪಂದ್ಯದಲ್ಲಿ, ದ್ವಿತೀಯಾರ್ಧ ಆರಂಭವಾದ ಬಳಿಕ ಮೆಕ್ಸಿಕೊ ದಾಳಿಯ ಅಬ್ಬರ ಶುರುವಾಯಿತು. 55ನೇ ನಿಮಿಷದಲ್ಲಿ 22 ವರ್ಷದ ಯುವ ಆಟಗಾರ ಮಟಿಯೋ ಚಾವೆಜ್ ವಿಶ್ವಕಪ್‌ನಲ್ಲಿನ ತನ್ನ ಮೊದಲ ಗೋಲು ದಾಖಲಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಇದಾದ ಕೇವಲ ಆರು ನಿಮಿಷಗಳ ಬಳಿಕ, ಜೂಲಿಯನ್ ಕ್ವಿನೋನ್ಸ್ ಗೋಲು ಬಾರಿಸಿ ಮೆಕ್ಸಿಕೊದ ಮುನ್ನಡೆಯನ್ನು 2–0ಕ್ಕೆ ಹೆಚ್ಚಿಸಿದರು. ಪಂದ್ಯದ ಹೆಚ್ಚುವರಿ ವೇಳೆಯಲ್ಲಿ ಅಲ್ವಾರೊ ಫಿಡಾಲ್ಗೊ ಮೂರನೇ ಗೋಲು ದಾಖಲಿಸಿದರು.

- ಎಲ್ಲಾ ಪಂದ್ಯಗಳಲ್ಲಿ ಗೆದ್ದ ಏಕೈಕ ತಂಡ ಮೆಕ್ಸಿಕೊ
- ವಿಶ್ವಕಪ್ ಲೀಗ್ ಪಂದ್ಯಗಳಲ್ಲಿ ಇತಿಹಾಸ

ನಾಕೌಟ್‌ಗೇರಿದ ದ.ಆಫ್ರಿಕಾ

• **ಗುಡಾಲುಪೆ (ಮೆಕ್ಸಿಕೋ):** ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಮೊದಲ ಬಾರಿಗೆ ದಕ್ಷಿಣ ಆಫ್ರಿಕಾ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಬುಧವಾರ ನಡೆದ ಗುಂಪು ಎ ಪಂದ್ಯದಲ್ಲಿ ದಕ್ಷಿಣ ಕೊರಿಯಾವನ್ನು 1–0 ಗೋಲುಗಳಿಂದ ಮಣಿಸಿದ ಆಫ್ರಿಕನ್ನರು, ಐತಿಹಾಸಿಕ ಸಾಧನೆ ಮಾಡಿದರು. ಪಂದ್ಯದ 63ನೇ ನಿಮಿಷದಲ್ಲಿ ಥಾಪೆಲೊ ಮಸೆಕೊ, ತ್ಶೆಪಾಂಗ್ ಮೊರೆಮಿ ನೀಡಿದ ನಿಖರ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿ ತಂಡಕ್ಕೆ ಅಮೂಲ್ಯ ಜಯ ತಂದುಕೊಟ್ಟರು. ಈ ಗೆಲುವಿನೊಂದಿಗೆ ದಕ್ಷಿಣ ಆಫ್ರಿಕಾ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ನಾಕೌಟ್ ಹಂತಕ್ಕೆ ಅರ್ಹತೆ ಗಳಿಸಿತು. ಗುಂಪಿನ ಅಗ್ರಸ್ಥಾನವನ್ನು ಮೆಕ್ಸಿಕೋ ತನ್ನದಾಗಿಸಿಕೊಂಡಿತು. 1998, 2002 ಹಾಗೂ 2010ರಲ್ಲಿ (ಆತಿಥೇಯರಾಗಿದ್ದಾಗಲೂ) ಗುಂಪು ಹಂತದಲ್ಲೇ ಹೊರಬಿದ್ದಿದ್ದ ದಕ್ಷಿಣ ಆಫ್ರಿಕಾ, ಈ ಬಾರಿ ಆ ಕಹಿ ನೆನಪುಗಳನ್ನು ಅಳಿಸಿ ಹೊಸ ಇತಿಹಾಸ ಬರೆದಿದೆ.

ವಿಶ್ವಕಪ್‌ನಲ್ಲಿ ದಕ್ಷಿಣ ಆಫ್ರಿಕಾದ ಐತಿಹಾಸಿಕ ಸಾಧನೆ: ಮೊದಲ ಬಾರಿಗೆ ನಾಕೌಟ್ ಹಂತಕ್ಕೆ

ಬೋಸ್ನಿಯಾ ಮತ್ತು ಹರ್ಜೆಗೋವಿನಾಗೆ ಗೆಲುವು, ಹೊರಬಿದ್ದ ಕತಾರ್: ಉತ್ತಮ ಪ್ರದರ್ಶನ ನೀಡಿರುವ ಬೋಸ್ನಿಯಾ–ಹರ್ಜೆಗೋವಿನಾ ಕತಾರ್ ತಂಡವನ್ನು ಮಣಿಸಿದೆ. ಹಿಂದಿನ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿದ್ದ ಬೋಸ್ನಿಯಾ, 3–1ರಿಂದ ಪಂದ್ಯ ಗೆದ್ದಿದೆ. ಕೆರಿಮ್ 29ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಐದು ನಿಮಿಷ ಬಳಿಕ 34ನೇ ನೇ ನಿಮಿಷಕ್ಕೆ ಮಹಮದ್ ಅಬುನಂದಾ ಮತ್ತೊಂದು ಗೋಲು ಗಳಿಸಿ ಮುನ್ನಡೆ ವಿಸ್ತರಿಸಿದರು. ಕತಾರ್ ಪರ ಹಸನ್ 42ನೇ ನಿಮಿಷಕ್ಕೆ ಒಂದು ಗೋಲು ಗಳಿಸಿ ಅಂತರ ಕುಗ್ಗಿಸಿದರು. ಆದರೆ ಇಮ್ರಾನ್ 80ನೇ ನಿಮಿಷಕ್ಕೆ ಮತ್ತೊಂದು ಗೋಲು ಗಳಿಸಿ ಗೆಲುವಿನ ದಡ ಸೇರಿಸಿದರು.

ಸ್ವಿಟ್ಜರ್ಲೆಂಡ್ ಅಗ್ರಸ್ಥಾನ, ಕೆನಡಾಗೆ ಐತಿಹಾಸಿಕ ನಾಕೌಟ್ ಟಿಕೆಟ್



• **ವ್ಯಾಂಕೋವರ್:** ರೂಬೆನ್ ವರ್ಗಾಸ್ ಹಾಗೂ ಜೋಹಾನ್ ಮಂಜಾಂಬಿ ಗಳಿಸಿದ ಗೋಲುಗಳ ನೆರವಿನಿಂದ ಸ್ವಿಟ್ಜರ್ಲೆಂಡ್ 2–1 ಅಂತರದಲ್ಲಿ ಕೆನಡಾವನ್ನು ಮಣಿಸಿ ಗುಂಪು ಬಿಯ ಅಗ್ರಸ್ಥಾನವನ್ನು ತನ್ನದಾಗಿಸಿಕೊಂಡಿತು. ಸೋಲು ಕಂಡರೂ ಕೆನಡಾ ವಿಶ್ವಕಪ್ ಇತಿಹಾಸದಲ್ಲೇ ಮೊದಲ ಬಾರಿಗೆ ನಾಕೌಟ್ ಹಂತಕ್ಕೆ ಅರ್ಹತೆ ಪಡೆಯುವ ಮೂಲಕ ಸಂಭ್ರಮಿಸಿತು. ಮೊದಲಾರ್ಧದಲ್ಲಿ ಎರಡೂ ತಂಡಗಳು ಗೋಲುರಹಿತ ಸಮಬಲ ಸಾಧಿಸಿದ್ದವು. ಆದರೆ ದ್ವಿತೀಯಾರ್ಧ ಆರಂಭವಾದ ಕೇವಲ 40 ಸೆಕೆಂಡುಗಳಲ್ಲೇ ರೂಬೆನ್ ವರ್ಗಾಸ್ ಗೋಲು ಬಾರಿಸಿ ಸ್ವಿಸ್ ಪಡೆಗೆ ಮುನ್ನಡೆ ಒದಗಿಸಿದರು. 57ನೇ ನಿಮಿಷದಲ್ಲಿ ಬ್ರೆಲ್ ಎಂಬೊಲೊ ನೀಡಿದ ಪಾಸ್ ಅನ್ನು ಜೋಹಾನ್ ಮಂಜಾಂಬಿ ಗೋಲಾಗಿ ಪರಿವರ್ತಿಸಿ ಮುನ್ನಡೆಯನ್ನು 2–0ಕ್ಕೆ ಹೆಚ್ಚಿಸಿದರು. 76ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಕಣಕ್ಕಿಳಿದ ಪ್ರಾಮಿಸ್ ಡೇವಿಡ್, ತನ್ನ ಮೊದಲ ಸ್ಪರ್ಶದಲ್ಲೇ ಚೆಂಡನ್ನು ಜಾಲಕ್ಕಟ್ಟಿ ಕೆನಡಾಗೆ ಸಮಾಧಾನದ ಗೋಲು ತಂದುಕೊಟ್ಟರು. ಆದರೆ ಅದಕ್ಕಿಂತ ಹೆಚ್ಚಿನ ಹೋರಾಟ ಸಾಧ್ಯವಾಗದೆ ಪಂದ್ಯ ಸ್ವಿಟ್ಜರ್ಲೆಂಡ್ ಪಾಲಾಯಿತು. ಈ ಗೆಲುವಿನೊಂದಿಗೆ ಸ್ವಿಟ್ಜರ್ಲೆಂಡ್ ಏಳು ಅಂಕಗಳೊಂದಿಗೆ ಗುಂಪಿನ ಅಗ್ರಸ್ಥಾನಿಯಾಗಿ ನಾಕೌಟ್ ಹಂತಕ್ಕೆ ಪ್ರವೇಶಿಸಿತು. ಆರು ಅಂಕಗಳೊಂದಿಗೆ ಕೆನಡಾ ಎರಡನೇ ಸ್ಥಾನ ಪಡೆಯಿತು.

ಕಿರುಸುದ್ದಿ

ಜೂ. ಶೂಟಿಂಗ್: ಬೆಳ್ಳಿಗೆ ಐಶ್ವರ್ಯ ಶೂಟ್

• **ಹುಬ್ಬಳ್ಳಿ:** ಜರ್ಮನಿಯ ಸೂಲ್‌ನಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಹುಬ್ಬಳ್ಳಿಯ ಹುಡುಗಿ ಐಶ್ವರ್ಯ ಬಾಲೆಹೊಸೂರ 50 ಎಂ ಫ್ರೀ ಪಿಸ್ತೂಲ್ ವಿಭಾಗದಲ್ಲಿ ಗುರುವಾರ ಬೆಳ್ಳಿ ಪದಕಕ್ಕೆ ಗುರಿಯಿಟ್ಟರು. 18 ವರ್ಷ ವಯಸ್ಸಿನ ಐಶ್ವರ್ಯ ಬಾಲೆಹೊಸೂರ(540.11)ಅಂಕ ಸಂಪಾದಿಸಿದ್ದು, 540.12 ಅಂಕಗಳಿಸಿದ ರಷ್ಯಾದ ಸೋಫಿಯಾ ಅವರು ಚಿನ್ನ ಪದಕ ಹಾಗೂ ಮಂಗೋಲಿಯಾದ ಅರಿಪ್ಪುಝುಯ (533.4) ಅಂಕ ಪಡೆದು ಕಂಚು ಪದಕ ಪಡೆದಿದ್ದಾರೆ. ಹುಬ್ಬಳ್ಳಿಯ ಶೂಟಿಂಗ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾರೆ. ತರಬೇತುದಾರ ಮಾಜಿ ಸೈನಿಕ ರವೀಂದ್ರ ಬಾಲೆಹೊಸೂರ ಅವರು ಐಶ್ವರ್ಯ ಅವರಿಗೆ ಮಾರ್ಗದರ್ಶನ ನೀಡಿದ್ದಾರೆ. ಈ ಕುರಿತಂತೆ ನನ್ನ ಮಗಳು ವಿಶ್ವ ಜೂನಿಯರ್ ಶೂಟಿಂಗ್‌ನಲ್ಲಿ ಬೆಳ್ಳಿ ಪದಕ ಪಡೆದಿದ್ದು, ತುಂಬ ಖುಷಿಯಾಗಿದೆ. ಮುಂದಿನ ಬಾರಿ ಚಿನ್ನ ಪಡೆಯುತ್ತಾಳೆ ಎಂಬ ವಿಶ್ವಾಸ ನನಗೆ ಇದೆ ಎಂದು ಐಶ್ವರ್ಯ ತಂದೆ ಹಾಗೂ ತರಬೇತುದಾರ ರವೀಂದ್ರ ಬಾಲೆಹೊಸೂರು ಅಭಿಪ್ರಾಯ ವ್ಯಕ್ತಪಡಿಸಿದರು.

ಉತ್ತಮ ಮೊತ್ತದತ್ತ ಭಾರತ ಎ

• **ಗಾಲೆ:** ಸಾಯಿ ಸುದರ್ಶನ್ (132), ಧ್ರುವ್ ಜುರೆಲ್(58★) ಮತ್ತು ಶೇಕ್ ರಶೀದ್(53★) ಅವರ ಬ್ಯಾಟಿಂಗ್‌ನೊಂದಿಗೆ ಭಾರತ ಎ ತಂಡವು ಶ್ರೀಲಂಕಾ ವಿರುದ್ಧ ನಡೆಯುತ್ತಿರುವ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತದತ್ತ ಸಾಗಿದೆ. ಮೊದಲ ದಿನ 86 ಓವರ್‌ಗಳಿಗೆ ಬ್ಯಾಟಿಂಗ್ ಮಾಡಿರುವ ಭಾರತ ಎ 4 ವಿಕೆಟ್ ನಷ್ಟಕ್ಕೆ 333 ರನ್ ಗಳಿಸಿ ಬ್ಯಾಟಿಂಗ್ ಉಳಿಸಿಕೊಂಡಿದೆ. ಧ್ರುವ್ ಮತ್ತು ರಶೀದ್ ಕ್ರೀಜ್‌ನಲ್ಲಿದ್ದಾರೆ. ಸಾಯಿ ಸುದರ್ಶನ್ ಮೊದಲಿನಿಂದಲೂ ಉತ್ತಮ ಬ್ಯಾಟಿಂಗ್ ಮಾಡಿ ಶತಕ ಬಾರಿಸಿದರು. ಆಯುಷ್ 25 ರನ್ ಗಳಿಸಿದರು. ಪಡಿಕ್ಕಲ್ 12 ರನ್‌ಗೆ ಔಟಾದರೆ, ಗಾಯಕ್ವಾಡ್ 22 ರನ್ ಮಾತ್ರ ಗಳಿಸಿದರು. ಶ್ರೀಲಂಕಾ ಎ ಪರ ದಿಲ್ಷಾನ್ 2, ರವೀಂದು ಮತ್ತು ಚಮಿಕಾ ತಲಾ 1 ವಿಕೆಟ್ ಕಿತ್ತರು.

ಸೆಮಿಗೆ ಇಂಗ್ಲೆಂಡ್

• **ಲಂಡನ್:** ನ್ಯಾಟ್ ಹಾಡ್ಜ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಸಾಂಘಿಕ ಬೌಲಿಂಗ್ ದಾಳಿ ಸಂಘಟಿಸಿದ ಇಂಗ್ಲೆಂಡ್ ಮಹಿಳೆಯರ ತಂಡವು ಪ್ರತಿಷ್ಠಿತ ಮಹಿಳೆಯರ ಟಿ20 ವಿಶ್ವಕಪ್ ಸೆಮಿಫೈನಲ್‌ಗೇರಿತು. ಬುಧವಾರ ನಡೆದ ಲೀಗ್ ಪಂದ್ಯದಲ್ಲಿ 38 ರನ್‌ಗಳ ದೊಡ್ಡ ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ಆರಂಭಿಕ ವಿಕೆಟ್ ಕಳೆದುಕೊಂಡರೂ, ಹಾಡ್ಜ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಕ್ರೀಜ್‌ಗೆ ಅಂಟಿಕೊಂಡರು. ಮಧ್ಯಮ ಕ್ರಮಾಂಕದಲ್ಲಿ ಹೀದರ್ 43 ರನ್‌ಗಳ ಕೊಡುಗೆ ನೀಡಿದರು. ಹಾಡ್ಜ್ ಔಟಾಗದೆ 65 ರನ್ ಗಳಿಸಿದ ನಂತರ ಇಂಗ್ಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 186 ರನ್ ಗಳಿಸಿತು. ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 148 ರನ್ ಮಾತ್ರ ಗಳಿಸಿತು. 5 ವಿಕೆಟ್ ಮಾತ್ರವೇ ಬಿದ್ದರೂ ನಿಧಾನ ಬ್ಯಾಟಿಂಗ್ ಮಾಡಿ ವಿಂಡೀಸ್ ಸೋಲಿತು. ಆದರೂ ಚಿನ್ನೆಲ್ ಹೆನ್ರಿ 30 ಬಾಲ್‌ಗಳಲ್ಲಿ 51 ರನ್ ಗಳಿಸಿ ಹೋರಾಡಿದರು.

ದಾಖಲೆ ಮಾಡಿದ ಚಾರಣಿ

• **ಲಂಡನ್:** ಬಾಂಗ್ಲಾ ವಿರುದ್ಧ ನಡೆದ ಪಂದ್ಯದಲ್ಲಿ ವಿಕೆಟ್ ಪಡೆದ ಭಾರತ ಸ್ಪಿನ್ನರ್ ಶ್ರೀ ಚಾರಣಿ ಒಂದೇ ಆವೃತ್ತಿಯಲ್ಲಿ ಭಾರತೀಯ ಆಟಗಾರ್ತಿಯೊಬ್ಬರು ಅತಿ ಹೆಚ್ಚು ವಿಕೆಟ್ ಪಡೆದ ದಾಖಲೆಯನ್ನು ಮುರಿದರು. 20ನೇ ಓವರ್‌ನಲ್ಲಿ ಬಾಂಗ್ಲಾದೇಶದ ಶೋರ್ನಾ ಅಕ್ತರ್ ಅವರನ್ನು ಔಟ್ ಮಾಡುವ ಮೂಲಕ ಅವರು ಆವೃತ್ತಿಯ 11ನೇ ವಿಕೆಟ್ ಪಡೆದರು, 2020ರ ಆವೃತ್ತಿಯಲ್ಲಿ ಪೂನಮ್ ಯಾದವ್ ಅವರ 10 ವಿಕೆಟ್ ಸಾಧನೆಯನ್ನು ಹಿಂದಿಕ್ಕಿದರು. ಒಟ್ಟಾರೆ ದಾಖಲೆಯು ನ್ಯೂಜಿಲೆಂಡ್‌ನ ಅಮೆಲಿಯಾ ಕೆರ್ ಅವರ ಹೆಸರಿನಲ್ಲಿ 15 ವಿಕೆಟ್‌ಗಳನ್ನು ಪಡೆದಿದ್ದು, ಈ ದಾಖಲೆ ಮುರಿಯುವತ್ತ ಚಾರಣಿ ಸಾಗಿದ್ದಾರೆ.

ಅತಿ ಹೆಚ್ಚು ವಿಕೆಟ್

- ಶ್ರೀ ಚರಣಿ (2026): 12★
- ಪೂನಮ್ ಯಾದವ್ (2020): 10
- ಡಯಾನಾ ಡೇವಿಡ್ (2010): 9
- ಪೂನಮ್ ಯಾದವ್ (2014): 8
- ರಾಧಾ ಯಾದವ್ (2018): 8

ಶ್ರೇಯಸ್‌ಗೆ ಮೊದಲ ಟಾಸ್ಕ್!

• **ಬೆಲ್‌ಫಾಸ್ಟ್(ಐರ್ಲೆಂಡ್):** ನೂತನ ತಂಡ ಮತ್ತು ನೂತನ ನಾಯಕನೊಂದಿಗೆ ಮೈದಾನಕ್ಕಿಳಿಯಲು ಸಜ್ಜಾಗಿ ರುವ ಭಾರತ ಟಿ20 ತಂಡ ಶುಕ್ರವಾರದಂದು ಐರ್ಲೆಂಡ್ ತಂಡವನ್ನು ಎದುರಿಸಲಿದೆ.

ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಕ್ರಿಕೆಟ್ ಸೇರಿಕೊಂಡಿರುವ ನಿಟ್ಟಿನಲ್ಲಿ ಭಾರತ ಸಿದ್ಧಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಹೊಸ ತಂಡವನ್ನೇ ಘೋಷಿಸಿರುವ ಬಿಸಿಸಿಐ ಟಿ20ಯಲ್ಲಿ ಹೊಸ ಅಧ್ಯಾಯ ಬರೆಯುವುದಕ್ಕೆ ಸಿದ್ಧವಾಗಿದೆ. ಬೆಲ್‌ಫಾಸ್ಟ್‌ನಲ್ಲಿ ಈ ಪಂದ್ಯ ನಡೆಯಲಿದೆ.

ಹೊಸ ತಂಡಕ್ಕೆ ಹತ್ತಾರು ಜವಾಬ್ದಾರಿ: ಪಂಜಾಬ್ ಕಿಂಗ್ಸ್ ತಂಡವನ್ನು ಮುನ್ನಡೆಸಿರುವ ರೀತಿ ಗಮನಿಸಿರುವ ಬಿಸಿಸಿಐ ಸೂರ್ಯಕುಮಾರ್ ಯಾದವ್ ಅವರಿಗೆ ಗೇಟ್ ಪಾಸ್ ನೀಡಿ, ಶ್ರೇಯಸ್ ಅಯ್ಯರ್‌ಗೆ ನಾಯಕತ್ವ ಪಟ್ಟ ಕಟ್ಟಿದೆ. ಆದಾಗ್ಯೂ, ಸಾಬೀತು ಪಡಿಸಿಕೊಳ್ಳುವ ಸವಾಲನ್ನು ಹೊಂದಿರುವ ಭಾರತ ತಂಡ ಐರ್ಲೆಂಡ್ ಪರೀಕ್ಷೆ ಎದುರಿಸಬೇಕಿದೆ. ಹೊಸ ಸಂಯೋಜನೆ ತಂಡದಲ್ಲಿದೆ. ವಿಶ್ವ ಚಾಂಪಿಯನ್ ಎಂಬ ಪಟ್ಟ ಕಟ್ಟಿಕೊಂಡಿರುವ ಭಾರತಕ್ಕೆ ಗೆಲ್ಲುವುದೊಂದೆ ಪ್ರಮುಖ ಗುರಿಯಾಗಿದೆ.

ಹೊಸಬರಿಗೆ ಅವಕಾಶ: ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ವೈಭವ್ ಸೂರ್ಯವಂಶಿ ಪದಾರ್ಪಣೆ ಮಾಡುವ ಸಾಧ್ಯತೆಗಳಿವೆ. ತಿಲಕ್ ವರ್ಮಾ ಉಪನಾಯಕರಾಗಲಿದ್ದು, ಸಂಜು ಸ್ಯಾಮ್ಸನ್, ಇಶಾನ್ ಕಿಶನ್, ಅಭಿಷೇಕ್ ಶರ್ಮಾ, ಶಿವಂ ದುಬೆ, ಅರ್ಷದೀಪ್ ಸಿಂಗ್ ಸೇರಿದಂತೆ ವಿವಿಧ ಯುವಕರು ಕಣಕ್ಕಿಳಿಯಬಹುದು. ಐಪಿಎಲ್‌ನಲ್ಲಿ ಮಿಂಚಿರುವ ಸೂರ್ಯಾಂಶ್ ಶೆಡ್ಗೆ, ಪ್ರಿನ್ಸ್ ಯಾದವ್ ಮತ್ತು ರವಿ ಬಿಷ್ಣೋಯ್ ಕೂಡ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಅಲ್ಲದೆ ಬಹು ದಿನಗಳ ನಂತರ ಹರ್ಷಿತ್ ರಾಣಾ ತಂಡದಲ್ಲಿ ಕಾಣಿಸಿಕೊಳ್ಳುವ ನಿರೀಕ್ಷೆಗಳೂ ಇವೆ.

ಇಂದಿನಿಂದ ಐರ್ಲೆಂಡ್ ಟಿ20 ಸರಣಿ

ಪಿಚ್ ರಿಪೋರ್ಟ್: ಬೆಲ್‌ಫಾಸ್ಟ್‌ನಲ್ಲಿ ಪಂದ್ಯ ನಡೆಯಲಿದೆ. ಸಾಮಾನ್ಯವಾಗಿ ಐರ್ಲೆಂಡ್‌ನ ದೇಶಿ ಕ್ರಿಕೆಟ್ ಪಂದ್ಯಗಳೇ ಇಲ್ಲಿ ಹೆಚ್ಚು ನಡೆಯುತ್ತವೆ. ಬ್ಯಾಟರ್‌ಗಳಿಗೆ ಅಲ್ಪ ಅನುವು ಮಾಡಿಕೊಡಬಹುದು. ಹೆಚ್ಚಿನ ಕ್ರ್ಯಾಕ್ ಇರುವುದು ಬೌಲರ್‌ಗಳಿಗೂ ಅಲ್ಪ ಬಲ ಸಿಗಬಹುದು ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ.

ಶೆಫಾಲಿ ಅಬ್ಬರಕ್ಕೆ ಬಸವಳಿದ ಬಾಂಗ್ಲಾ

• **ಮ್ಯಾಂಚೆಸ್ಟರ್:** ಬಾಂಗ್ಲಾ ತಂಡವನ್ನು ಮನಬಂದಂತೆ ದಂಡಿಸಿದ ಶೆಫಾಲಿ ವರ್ಮಾ ಭಾರತದ ಸೆಮಿಫೈನಲ್ ಕನಸನ್ನು ಇನ್ನಷ್ಟು ಭದ್ರವಾಗಿಸಿದರು. ದ.ಆಫ್ರಿಕಾ ತಂಡದೊಂದಿಗೆ ಸೋತು ಹಿನ್ನಡೆ ಅನುಭವಿಸಿದ್ದ ಭಾರತ ಮಹಿಳೆಯರ ತಂಡವು ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಪುನರಾಗಮನ ಮಾಡಿದೆ.

ಸಾಂಘಿಕ ಬೌಲಿಂಗ್ ದಾಳಿ, ಶೆಫಾಲಿ ವರ್ಮಾ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಕೌರ್ ಪಡೆಯು ಗುರುವಾರ ನಡೆದ ಪಂದ್ಯದಲ್ಲಿ ಬಾಂಗ್ಲಾವನ್ನು 9 ವಿಕೆಟ್‌ಗಳಿಂದ ಭರ್ಜರಿ ಗೆಲುವು ದಾಖಲಿಸಿತು. ಇದರೊಂದಿಗೆ ತನ್ನ ಎರಡನೇ ಸ್ಥಾನ ಭದ್ರವಾಗಿಸಿದೆ. ಬ್ಯಾಟಿಂಗ್ ಆಯ್ದುಕೊಂಡ ಬಾಂಗ್ಲಾ ಸ್ಪಿನ್ ದಾಳಿಗೆ ಉರುಳಿತು. ಕಷ್ಟದ ಸಮಯದಲ್ಲಿ ಫೇರ್‌ಗೋನಾ 33, ನಿಗಾರ್ ಸುಲ್ತಾನ್ 32 ರನ್‌ನೊಂದಿಗೆ ಆಸರೆಯಾದರು. ಪರಿಣಾಮ 20 ಓವರ್‌ಗಳಲ್ಲಿ ಪರದಾಡಿ 136 ರನ್ ಗಳಿಸಿತು. ರಾಧಾ 3, ಚಾರಣಿ 2, ನಂದಿನಿ ಮತ್ತು ರೇಣುಕಾ ಒಂದರಂತೆ ಭಾರತ 8 ವಿಕೆಟ್ ಪಡೆದುಕೊಂಡಿತು. ಗುರಿ ಬೆನ್ನತ್ತಿದ ಭಾರತ 16.5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 139 ರನ್ ಗಳಿಸಿ ಗೆದ್ದಿತು. ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ಶೆಫಾಲಿ ವರ್ಮಾ ಕ್ಷಣ ಮಾತ್ರಕ್ಕೂ ನಿಲ್ಲದೆ ದಂಡಿಸಿದರು. ಅವರಿಗೆ ಯಸ್ತಿಕಾ(23) ಸಾಥ್ ಸಿಕ್ಕಿತು. ಶೆಫಾಲಿ ವರ್ಮಾ 34 ಬಾಲ್‌ಗಳಲ್ಲಿ 53 ರನ್ ಗಳಿಸಿ ಔಟಾದರು. ಮುಂದೆ ಬಂದ ಬ್ಯಾಟರ್‌ಗಳು ಕೈಕೊಟ್ಟರೂ ಜೆಮಿಮಾ ರಾಡ್ರಿಗ್ಸ್ 26 ರನ್ ಬಾರಿಸಿ ಪಂದ್ಯ ಗೆಲ್ಲಿಸಿದರು.

ಸಂಕ್ಷಿಪ್ತ ಸ್ಕೋರ್

ಬಾಂಗ್ಲಾ 20 ಓವರ್‌ಗಳಲ್ಲಿ 136/8: ಫೇರ್‌ಗೋನಾ 33, ನಿಗಾರ್ 32; ರಾಧಾ 28/3, ಚಾರಣಿ 21/2
ಭಾರತ 16.5 ಓವರ್‌ಗಳಲ್ಲಿ 139/5: ಶೆಫಾಲಿ 53, ರಾಡ್ರಿಗ್ಸ್ 26; ರಿತು 29/2

ಭಾರತಕ್ಕೆ ಸುಲಭದ ತುತ್ತು: ಗುರಿ ಬೆನ್ನತ್ತುವಾಗ ಶೆಫಾಲಿ ವರ್ಮಾ ಯಾವುದೇ ಮುಲಾಜಿಲ್ಲದೆ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಸ್ಮೃತಿ ಮಂಧಾನ ಸೆಟ್ ಆಗುವತ್ತ ಸಾಗಿದರೆ, ಶೆಫಾಲಿ ಬೌಂಡರಿಗಳೊಂದಿಗೆ ಬಿರುಸಿನ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇನಲ್ಲಿ ಭಾರತ 1 ವಿಕೆಟ್ ಮಾತ್ರಕ್ಕೆ 63 ರನ್ ಗಳಿಸಿತ್ತು. ಮಂಧಾನ 8 ರನ್‌ಗೆ ಔಟಾಗಿದ್ದರು. ಮೂರನೇ ಕ್ರಮಾಂಕದಲ್ಲಿ ಬಂದ ಯಸ್ತಿಕಾ ಕೂಡ ಬೌಂಡರಿಗಳೊಂದಿಗೆ ಮಿಂಚಿದರು. ಅರ್ಧಶತಕ ಬಾರಿಸುತ್ತಲೆ ಅವರು ವಿಕೆಟ್ ಒಪ್ಪಿಸಿದರು. ಭಾರತ ದಿಢೀರ್ ಕುಸಿತ ಕಂಡಿತು. ರಾಡ್ರಿಗ್ಸ್ ಅದ್ಭುತ ಬ್ಯಾಟಿಂಗ್‌ನೊಂದಿಗೆ ಪಂದ್ಯ ಭಾರತದ ಕೈಗಿಟ್ಟು ವಿಕೆಟ್ ಒಪ್ಪಿಸಿದರು. ಕೊನೆಯಲ್ಲಿ ದೀಪ್ತಿ ವಿನ್ನಿಂಗ್ ಶಾಟ್ ಬಾರಿಸಿ ಗೆಲ್ಲಿಸಿದರು.

ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಅನರ್ಹ

• **ಬೆಂಗಳೂರು:** ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಕಾರ್ಯದರ್ಶಿ ಸಂತೋಷ್ ಮೆನನ್ ಅವರು ಹುದ್ದೆಯಲ್ಲಿ ಮುಂದುವರಿಯಲು ಅನರ್ಹರು ಎಂದು ಬಿಸಿಸಿಐ ಒಂಬುಡ್ಸ್‌ಮನ್ ತೀರ್ಪು ನೀಡಿದ್ದು, ಹುದ್ದೆ ಖಾಲಿಯಿದೆ ಎಂದು ಘೋಷಿಸಿದ್ದಾರೆ.

ಕೆಎಸ್‌ಸಿಎ ಸಾಂಸ್ಥಿಕ ಸದಸ್ಯ ಹಾಲ್ಸಿಯನ್ ಕ್ರಿಕೆಟರ್ಸ್ ಸಲ್ಲಿಸಿದ ದೂರಿನ ಮೇರೆಗೆ ಬಿಸಿಸಿಐ ಒಂಬುಡ್ಸ್‌ಮನ್ ನ್ಯಾಯಮೂರ್ತಿ ಅರುಣ್ ಮಿಶ್ರಾ (ನಿವೃತ್ತ) ಈ ನಿರ್ಧಾರ ತೆಗೆದುಕೊಂಡಿದ್ದಾರೆ. ನಿಯಮಗಳ ಅಡಿಯಲ್ಲಿ ಮೆನನ್ ಗರಿಷ್ಠ ಅನುಮತಿಸುವ ಒಂಬತ್ತು ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ್ದಾರೆ. ಕೆಎಸ್‌ಸಿಎ ವ್ಯವಸ್ಥಾಪಕ ಸಮಿತಿ ಸದಸ್ಯರಾಗಿ (ಡಿಸೆಂಬರ್ 2013 ರಿಂದ ಡಿಸೆಂಬರ್ 2019) ಮತ್ತು ಕೆಎಸ್‌ಸಿಎ ಕಾರ್ಯದರ್ಶಿಯಾಗಿ (ಡಿಸೆಂಬರ್ 2019 ರಿಂದ ನವೆಂಬರ್ 2022) ಮೆನನ್ ಅವರ ಅಧಿಕಾರಾವಧಿಯನ್ನು ಗಣನೆಗೆ ತೆಗೆದುಕೊಂಡಾಗ ಅವರ ಅಧಿಕಾರಾವಧಿ ಒಂಬತ್ತು ವರ್ಷಗಳನ್ನು ಮೀರಿದೆ ಎಂದು ದೂರುದಾರರು ವಾದಿಸಿದ್ದಾರೆ. ಈ ಬಗ್ಗೆ ಕೆಎಸ್‌ಸಿಎ ಹೇಳಿಕೆ ನೀಡಿದ್ದು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಒಂಬುಡ್ಸ್‌ಮನ್ ನೀಡಿರುವ ಆದೇಶವನ್ನು ನಾವು ಗಮನಿಸಿದ್ದು, ನಾವು ಕಾನೂನನ್ನು ಎತ್ತಿಹಿಡಿಯಲು ಬದ್ಧರಾಗಿದ್ದು . ಸಂಸ್ಥೆಯ ಹಿತಾಸಕ್ತಿಯನ್ನು ಕಾಪಾಡುವ ಕಾನೂನು ಚೌಕಟ್ಟಿನ ಸಂಪೂರ್ಣ ಅನುಸರಣೆಯನ್ನು ಖಚಿತಪಡಿಸುತ್ತೇವೆ ಎಂದಿದೆ.≡

ಯುಎಸ್ ಓಪನ್: ಕಿಡಂಬಿ, ತನ್ವಿ ಶುಭಾರಂಭ

• **ಹೊಸದಿಲ್ಲಿ:** ಅನುಭವಿ ಕಿಡಂಬಿ ಶ್ರೀಕಾಂತ್, ಯುವ ಆಟಗಾರ ರೋಹನ್ ಚೌಹಾಣ್, ತನ್ವಿ ಶರ್ಮಾ ಸೇರಿದಂತೆ ಭಾರತದ ಶಟ್ಲರ್‌ಗಳು ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದರು.

ಗುರುವಾರ ನಡೆದ ಪಂದ್ಯಗಳಲ್ಲಿ ಶ್ರೀಕಾಂತ್ ಸ್ವದೇಶದ ದರ್ಶನಂದ ವಿರುದ್ಧ 21–14, 21–12ರಿಂದ ಗೆಲುವು ಸಾಧಿಸಿದರು. ರೋಹನ್ ಚೌಹಾಣ್ ಕೂಡ ಸ್ವದೇಶದ ಸುಬ್ರಮಣಿ ಅವರೊಂದಿಗೆ 23–11, 21–16ರಿಂದ ಗೆಲುವು ಸಾಧಿಸಿದರು. ಮಹಿಳೆಯರ ವಿಭಾಗದಲ್ಲಿ ತನ್ವಿ ಶರ್ಮಾ ವೈ ಲಿ ಅವರೊಂದಿಗೆ 21–19, 21–11ರಿಂದ ಭರ್ಜರಿ ಗೆಲುವು ಸಾಧಿಸಿದರು. ರಕ್ಷಿತಾ ರಾಮ್‌ರಾಜ್ ಸ್ಲೋವಾಕಿಯಾ ವಿರುದ್ಧ 21–15, 21–18ರಿಂದ ಗೆಲುವು ಸಾಧಿಸಿದರು. ದಿ. ಸಿಹಾಗ್ ಕ್ಯಾಲ್ಲಿ ಅವರೊಂದಿಗೆ 21–14, 21–14ರಿಂದ ಗೆಲುವು ಸಾಧಿಸಿದರು.

ಕರಾವಳಿ ಕಿಂಗ್ಸ್‌ಗೆ ಭರ್ಜರಿ ಜಯ



• **ಮೈಸೂರು:** ಅನುಭವಿ ಆಟಗಾರರಾದ ಕರುಣ್ ನಾಯರ್ ಹಾಗೂ ಶ್ರೇಯಸ್ ಗೋಪಾಲ್ ಅವರ ಅದ್ಭುತ ಬ್ಯಾಟಿಂಗ್ ನೆರವಿನಿಂದ ಕರಾವಳಿ ಕಿಂಗ್ಸ್ ಮಂಗಳೂರು ತಂಡ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ವಿರುದ್ಧ ಆರು ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು.

192 ರನ್‌ಗಳ ಕಠಿಣ ಗುರಿ ಬೆನ್ನಟ್ಟಿದ ಕರಾವಳಿ ಕಿಂಗ್ಸ್ ಆರಂಭದಲ್ಲೇ 42 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆದರೆ ನಾಲ್ಕನೇ ವಿಕೆಟ್‌ಗೆ ಕರುಣ್ ನಾಯರ್ ಮತ್ತು ಶ್ರೇಯಸ್ ಗೋಪಾಲ್ ಕೇವಲ 60 ಎಸೆತಗಳಲ್ಲಿ 123 ರನ್‌ಗಳ ಅಮೋಘ ಜೊತೆಯಾಟ ನಿರ್ಮಿಸಿ ಪಂದ್ಯದಲ್ಲಿ ಜೀವ ತುಂಬಿದರು. ಕರುಣ್ ನಾಯರ್ 32 ಎಸೆತಗಳಲ್ಲಿ 61 ರನ್ ಗಳಿಸಿದರು. ಅವರ ಬ್ಯಾಟಿಂಗ್‌ನಲ್ಲಿ 6 ಬೌಂಡರಿ ಹಾಗೂ 3 ಸಿಕ್ಸರ್‌ಗಳು ಸೇರಿದ್ದವು. ಇನ್ನೊಂದೆಡೆ ಶ್ರೇಯಸ್ ಗೋಪಾಲ್ ಕೊನೆಯವರೆಗೂ ಅಜೇಯರಾಗಿ ಉಳಿದು 43 ಎಸೆತಗಳಲ್ಲಿ 84 ರನ್‌ಗಳ ಪಂದ್ಯಶ್ರೇಷ್ಠ ಇನ್ನಿಂಗ್ಸ್ ಕಟ್ಟಿದರು. 9 ಬೌಂಡರಿ ಮತ್ತು 3 ಸಿಕ್ಸರ್‌ಗಳೊಂದಿಗೆ ಮಿಂಚಿದ ಅವರು ಬೌಲಿಂಗ್‌ನಲ್ಲೂ 2 ವಿಕೆಟ್ ಪಡೆದು ಆಲ್‌ರೌಂಡ್ ಪ್ರದರ್ಶನ ನೀಡಿದರು. ಇದಕ್ಕೂ ಮೊದಲು ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 191 ರನ್ ಗಳಿಸಿತು. ಕಳೆದ ಪಂದ್ಯದಲ್ಲಿ ಶತಕ ಸಿಡಿಸಿದ್ದ ಚೇತನ್ ಎಲ್.ಆರ್. ಮತ್ತೊಮ್ಮೆ ಮಿಂಚಿ 35 ಎಸೆತಗಳಲ್ಲಿ 67 ರನ್ ಗಳಿಸಿದರು. ಯುವರಾಜ್ ಅರೋರಾ 22 ಎಸೆತಗಳಲ್ಲಿ 37 ರನ್‌ಗಳ ಕಾಣಿಕೆ ನೀಡಿದರು. ಕರಾವಳಿ ಕಿಂಗ್ಸ್ ಪರ ವಾಸುಕಿ ಕೌಶಿಕ್ 3 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು.


ಶಿವಮೊಗ್ಗಕ್ಕೆ ಗೆಲುವು

ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ತಂಡವು ಹುಬ್ಬಳ್ಳಿಯನ್ನು 42 ರನ್‌ಗಳಿಂದ ಮಣಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 220 ರನ್ ಗಳಿಸಿತು. ನವೀನ್ 75, ಲವನೀತ್ 57 ರನ್ ಗಳಿಸಿದರು. ಸ್ವರಾಜ್ 37 ರನ್‌ಗಳಿಸಿ ಸ್ಕೋರ್ ಹಿಗ್ಗಿಸಿದರು. ಗುರಿ ಬೆನ್ನತ್ತಿದ ಹುಬ್ಬಳ್ಳಿ 19.3 ಓವರ್‌ಗಳಲ್ಲಿ 178 ರನ್‌ಗಳಿಸಿ ಆಲೌಟ್ ಆಯಿತು. ತಾಹಾ 44, ಹಾರ್ದಿಕ್ 43 ರನ್ ಗಳಿಸಿದರು. ಶಿವಮೊಗ್ಗ ಪರ ಅಭಿಲಾಷ್ ಶೆಟ್ಟಿ 4 ವಿಕೆಟ್ ಕಿತ್ತರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ

6026



ಎಡದಿಂದ ಬಲಕ್ಕೆ

1.ವಿದ್ಯೆ–ಕಲೆ–ಬುದ್ಧಿವಂತಿಕೆಯ ದೇವತೆ (4)
3.ನೆಮ್ಮದಿಯಿಂದ ಕೂಡಿದ ರಾಜ್ಯ (4)
5.ಕೊನೆಯಾಯ್ತು–ಮುಗಿಯಿತು ಎಂಬರ್ಥದ ಶಬ್ದ (3)
6.ಆ ವಯಸ್ಕ ವ್ಯಕ್ತಿಯ ದೇಹದ ಅಂಗ (4)
8.ಪಟಾಕಿ–ಬೆಂಕಿಪೊಟ್ಟಣ ತಯಾರಿಕೆಗೆ ಬೇಕಾದ ರಾಸಾಯನಿಕ (3)
10.ಗೌರವ ಪೂರ್ವಕವಾಗಿ ಸಲ್ಲಿಸುವ ನಮಸ್ಕಾರ (3)
12.ಸಮಸ್ಯೆಗೆ ಉತ್ತರ ಸಿಕ್ಕಿ ವಿವಾದ ಕೊನೆಗೊಳ್ಳುವುದು (4)
14.ಆಸೆಗಳನ್ನು ತೊರೆದ ಸಂನ್ಯಾಸ ಸಾಧಕ (3)
15.ಮುಂದಿಯ ಒತ್ತುಬಿಟ್ಟರುವ ರಕ್ತ (4)
16.ಹಾಗೆ ಈ ನಡುವೆ ಕಂಡ ಮೊಂಡುವ್ಯಕ್ತಿ (4)

ಮೇಲಿನಿಂದ ಕೆಳಕ್ಕೆ

1.ಕಾಂಕರದಿಂದ ಕೂಡಿದ ಕಳವಳ ತಲೆಕೆಳಗಾಗಿದೆ (3)
2.ಉಲ್ಲಾ ಕಾಣುತ್ತಿರುವ ತಂಗಲು ಇರುವ ಸೌಲಭ್ಯ (3)
3.ಮಲಗಿದಂತಿರುವ ಒಳಗಿನ ರಕ್ತ (5)
4.ಅರಸರು ಇರುವ ನಿವಾಸ (5)
7.ಸ್ವಾರ್ಥಿಯಾದ ವ್ಯಕ್ತಿ ತಲೆಕೆಳಗಾಗಿದ್ದಾನೆ (3)
8.ಕೀಲುಗಳನ್ನು ಮ ್ರಮರೆಸುವ ದಿವ್ಯ ಗಾಯನ (5)
9.ಬಾಳೆಹಣ್ಣಿನ ಸಂಸ್ಕೃತನಾಮ (5)
11.ಬೆಳ್ಳಿ ತೆಗೆದ ಮೇಲೆ ಉಳಿದ ದ್ರವ (3)
12.ಕನ್ನಡ ಟೆ ್ರಸಲು ಬಳಸುವ ಪ್ರಸಿದ್ಧ ತಂತ್ರಾಂಶ (3)
13.ಕೆಟ್ಟ ಯಂತ್ರ ಸರಿಪಡಿಸುವ ಕ್ರಿಯೆ (3)

6025 ಉತ್ತರ

ಎಡದಿಂದ ಬಲಕ್ಕೆ:
1.ಪಶ್ಚಗ 4.ಸುಕ ್ರತಕರ್ಮ
6.ನೀರಡಿಕೆ 7.ಸಮಯ
9.ಸರಕಾರ 10.ಭಾನುಮತಿ
12.ಗರತಿ 14.ಕೊಡುವ
15.ಅಂತರಪಟ 17.ಕೆದರು

ಮೇಲಿನಿಂದ ಕೆಳಕ್ಕೆ:
1.ಪರಿಹಾರ
2.ಗಣನೀಯ 3.ತೀಕ
4.ಸುಜನ 5.ಕಡಲತೀರ
8.ಮಹಾಭಾರತ
11.ತಿಕೋಟ 12.ಗದಾಕ
13.ತಿಳಸಾರು 16.ರಪ್ಪ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26